ಗೌರಿ ಲಂಕೇಶರ

ಲಂಕೇಶ್

ಜುಲೈ 11, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಕುಪೇಂದ್ರ ರೆಡ್ಡಿಯ ಕಳ್ಳರ ಕೂಟ




ತುಂಬಿತು ಮಂಜನ ಪಾಪದ ಕೊಡ




ದೇಶಪಾಂಡೆ ಲಿಂಕ್

KIADB ಎಂಬ ನೀಚ ಸಂಸ್ಥೆ



ಾಲಕೃಷ್ಣೇಗೌಡನ

ಜಂಟಿ ಲೂಟಿ!



ಶರಣು ಶರಣು ಚೆನ್ನಿ

ಕೊಪ್ಪಳ ಜೆಡಿಎಸ್‌ನಲ್ಲಿ ನಿಷ್ಠರ ನಿಟ್ಟುಸಿರು!

ಾಮನಗರ ಿಲಯನ್ಸ್ ಜಿಲ್ಲೆ





ಹೆಡ್ಗೇವಾರ್ ಭೈರಪ್ಪ!!

ಭೈರಪ್ಪನವರಿಗೆ ಕಮ್ಯುನಿಸ್ಟ್ ಕೊಲ್ಲುತವಲ್ಲಿ ಚಟ್ಟಿ ಸಂಸ್ಥೆಯೊಂದು ಹೆಡ್ಗೇವಾರ್ ಪ್ರಶಸ್ತಿ ನೀಡಿದೆ. ವಾಸ್ತವವಾಗಿ ಈ ನಾಡಿನ ಎಲ್ಲಾ ಪ್ರಗತಿಪರರು ಹೇಳುತ್ತಿದ್ದದ್ದೂ ಇದೇ! ಭೈರಪ್ಪನವರಿಗೆ ಹೆಡ್ಗೇವಾರ್ ಪ್ರಶಸ್ತಿ ನೀಡಬೇಕೆಂಬುದು! ಹಾಗೆ ನೋಡಿದರೆ ಈ ಪ್ರಶಸ್ತಿ ಅವರಿಗೆ 1964ರಲ್ಲಿ 'ಧರ್ಮಶ್ರೀ' ಕಾದಂಬರಿ ಬರೆದಾಗಲೇ ಸಿಗಬೇಕಿತ್ತು. ಆಗ ಹೆಡ್ಗೇವಾರರ ಆರೆಸ್ಸೆಸ್ ಗಾಂಧೀ ಹತ್ಯಾದೋಷಕ್ಕೆ ಗುರಿಯಾಗಿ ಸಮಾಜದಿಂದ ಬಹಿಷ್ಕಾರದ ಶಾಪಕ್ಕೆ ಗುರಿಯಾಗಿತ್ತು. ಆಗ ಆರೆಸ್ಸೆಸ್ಸನ್ನು ಸಮಾಜ ಸೇವಕ ಮತ್ತು ಹಿಂದೂ ಧರ್ಮ ರಕ್ಷಕ ಸಂಘಟನೆಯೆಂದು ಪ್ರತಿಪಾದಿಸುವ ಪ್ರಚಾರದ ಅಗತ್ಯವಿತ್ತು. ಕರ್ನಾಟಕದಲ್ಲಿ ಅರೆಸ್ಸಸ್ಸು ಇನ್ನೂ ಶೈಶವಾವಸ್ಥೆಯಲ್ಲಿದ್ದ ಆ ಕಾಲದಲ್ಲೇ ಕನ್ನಡದಲ್ಲಿ ಭೈರಪ್ಪನವರು 'ಧರ್ಮಶ್ರೀ' ಕಾದಂಬರಿ ಮೂಲಕ ಆ ಪ್ರಚಾರವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದರು.

ನಂತರ ಅರವತ್ತು ಮತ್ತು ಎಪ್ಪತ್ತರ ದಶಕದಲ್ಲಿ ಆರೆಸ್ಸೆಸ್ ಗೋಹತ್ಯಾ ನಿಷೇಧದ ಪ್ರಚಾರ ಕಾರ್ಯಕ್ರಮ ತೆಗೆದುಕೊಂಡು ಅದರ ಮೂಲಕ ಮುಸ್ಲಿಂ ಮತ್ತು ಕ್ರಿಶ್ಚಿಯನ್ ವಿರೋಧಿ ಹಿಂದೂತ್ವದ ಪ್ರಚಾರ ಪ್ರಾರಂಭಿಸಿದರು. ಆಗ ಕೂಡಲೇ ಅದರ ಪರವಾಗಿ ತನ್ನ ಪೆನ್ನು ಝಳಪಿಸಿದ ಭೈರಪ್ಪನವರು 'ತಬ್ಬಲಿಯು ನೀನಾದೆ ಮಗನೇ' ಕಾದಂಬರಿ ಬರೆದು ಆ ಪ್ರಚಾರಕ್ಕೆ ಸಾಹಿತ್ಯಿಕ ಸೌಂದರ್ಯವನ್ನು ತಂದುಕೊಟ್ಟರು. ಎಪ್ಪತ್ತು ಮತ್ತು ಎಂಬತ್ತರ ದಶಕದಲ್ಲಿ ಕರ್ನಾಟಕದ ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಿಸರದಲ್ಲಿ ಆರೆಸ್ಸಿಸ್ಸಿನ ಸೈದ್ಧಾಂತಿಕ ಸಾರವಾದ ಬ್ರಾಹ್ಮಣ್ಯದ ವಿರುದ್ಧ ಪ್ರಬಲ ದಲಿತ ಪ್ರಜ್ಞೆ, ಶೂದ್ರ ಪ್ರಜ್ಞೆ, ವರ್ಗ ಪ್ರಜ್ಞೆಗಳು ಜಾಗೃತಗೊಳ್ಳುತ್ತಿದ್ದ ಕಾಲ. ಈ ಪ್ರಜ್ಞೆಗಳು ಸಂಘಟಿತಗೊಂಡ ಕಾರಣದಿಂದಲೇ ತಮಿಳುನಾಡಿನಲ್ಲಿ, ಕೇರಳದಲ್ಲಿ ಮತ್ತು ಆಂಧ್ರದಲ್ಲಿ ಈಗಲೂ ಮನುವಾದಿ ಸಿದ್ಧಾಂತವಾಗಲಿ, ಸಂಘಪರಿವಾರದ ಸಂಘಟನೆಗಳಾಗಲಿ ಬೇರುಬಿಡಲು ಸಾಧ್ಯವಾಗಿಲ್ಲ. ಕರ್ನಾಟಕದಲ್ಲೂ ಆ ಹವಾ ಬೀಸಲು ಪ್ರಾರಂಭಿಸುತ್ತಿದ್ದಂತೆ ಭೈರಪ್ಪನವರು ಮತ್ತೆ ತಮ್ಮ ಕಾದಂಬರಿಗಳ ಮೂಲಕ ಆರೆಸ್ಸೆಸ್ಸಿನ ರಕ್ಷಣೆಗೆ ನಿಂತರು. 'ವಂಶವೃಕ್ಷ' ಕಾದಂಬರಿ ಮೂಲಕ ಬ್ರಾಹ್ಮಣ್ಯದ ಮಹಿಳಾ ಸಂಹಿತೆಯನ್ನು ದಾಟಿ ವಿಧವಾ ವಿವಾಹ ಆದರೆ ಎಂಥ ದುರಂತ ಕಾದಿದೆ ಎಂದು ಚಿತ್ರಿಸಿ ಕನ್ನಡ ಸಮಾಜವನ್ನು ಬೆದರಿಸಿದರು.

ಅದೇರೀತಿ ದಲಿತ ಚಳವಳಿ ಗರಿಗಟ್ಟಲು ಪ್ರಾರಂಭಿಸಿದ ದಿನಗಳಲ್ಲೇ 'ದಾಟು' ಕಾದಂಬರಿ ಬರೆದು ದಲಿತರು ಹಿಂದೂತ್ವ ವರ್ಣಾಶ್ರಮದ ಗಡಿದಾಟಿದರೆ ಪ್ರಳಯವೇ ಸಂಭವಿಸುತ್ತದೆ ಎಂದು ಎಚ್ಚರಿಸಿದರು. ಅದೇ ರೀತಿ 90ರ ದಶಕದಲ್ಲಿ ಸಂಘಪರಿವಾರ ಇತಿಹಾಸವನ್ನು ಪುರಾಣದಂತೆ ಬಳಸಿಕೊಂಡು ಚಳವಳಿ ಕಟ್ಟುತ್ತಿದ್ದಂತೆ ಮಹಾಭಾರತವನ್ನು 'ಪರ್ವ'ದಲ್ಲಿ ಇಂದಿನ ಪರಿವಾರದ ಅಗತ್ಯಕ್ಕೆ ತಕ್ಕಂತೆ ಪುನರ್ ಸೃಷ್ಟಿಸಿದರು. ದಲಿತ ಸಮುದಾಯ ದೊಡ್ಡ ರೀತಿಯಲ್ಲಿ ಹಿಂದೂ ಚೌಕಟ್ಟನ್ನು ತೊರೆದು ಬೌದ್ಧ ಧರ್ಮಕ್ಕೆ ಮತಾಂತರವಾಗುವ ಪ್ರಕ್ರಿಯೆ ಪ್ರಾರಂಭವಾಗುತ್ತಿದ್ದಂತೆ 'ಸಾರ್ಥ' ಎಂಬ ಕಾದಂಬರಿ ಬರೆದು ಬೌದ್ಧ ಧರ್ಮವನ್ನು ಹೀಗಳೆದು ಹಿಂದೂತ್ವದ ರಕ್ಷಣೆ ಮಾಡಿದರು. ಇದೀಗ 'ಆವರಣ'ವನ್ನು ಬರೆದು ಈಗ ಸಂಘಪರಿವಾರ ಕೈಗೆತ್ತಿಕೊಂಡಿರುವ ಇಸ್ಲಾಂ ವಿರೋಧಿ ಅಭಿಯಾನದ ಪ್ರಚಾರಕ್ಕೆ ಮತ್ತೊಂದು ಪ್ರಚಾರ ಸಾಮಗ್ರಿಯನ್ನು ಒದಗಿಸಿದ್ದಾರೆ.

ಹೀಗೆ ಭೈರಪ್ಪನವರು ತಮ್ಮ ಸಾಹಿತ್ಯ ಕೃಷಿಯ ಉದ್ದಕ್ಕೂ ಹಿಂದೂತ್ವವನ್ನು ಮತ್ತು ಆರೆಸ್ಸೆಸ್ಸಿನ ಸಿದ್ಧಾಂತವನ್ನು ಪ್ರಚಾರ ಮಾಡುವ ಕೈಂಕರ್ಯವನ್ನೇ ಮಾಡುತ್ತಾ ಬಂದಿದ್ದಾರೆ. 'ಆವರಣ' ಅದನ್ನು ಹಸಿಹಸಿಯಾಗಿ ಮಾಡಿದೆ ಅಷ್ಟೆ. ಹೀಗೆ ಅವರಿಗೆ ಆರೆಸ್ಸೆಸ್ ಸಂಸ್ಥಾಪಕ ಹೆಡ್ಗೆವಾರ್ ಪ್ರಶಸ್ತಿ ಎಂದೋ ಸಿಗಬೇಕಿತ್ತು ಬಿಡಿ. ಇಂದು ಸಿಗುತ್ತಾ ಇದೆ. ಇದರಿಂದ ಕನಿಷ್ಠ ಭೈರಪ್ಪನವರನ್ನು ಕೇವಲ ಸಾಹಿತಿ ಮಾತ್ರ ಎಂದು ನೋಡುತ್ತಿದ್ದ ಜಾಣ ಕುರುಡರಿಗಾದರೂ ಸತ್ಯದ ಅರಿವಾದರೆ ಅಷ್ಟೇ ಸಾಕು.

ಆದರೆ ಇಂದಿನ ಸಂದರ್ಭವೇನೆಂದರೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ಕೊಡಿಸುವ ಲಾಬಿಯೂ ಅಷ್ಟೇ ಪ್ರಬಲವಾಗಿರುವುದು. ಅದಕ್ಕೆ ನಾರಾಯಣಮೂರ್ತಿಗಳಂಥ ಕಾರ್ಪೊರೇಟ್ ಕೃಪಾಶೀರ್ವಾದವೂ ಸೇರಿರುವುದರಿಂದ ಜ್ಞಾನಪೀಠ ಸಿಕ್ಕರೂ ಆಶ್ಚರ್ಯಪಡಬೇಕಿಲ್ಲ. ಏಕೆಂದರೆ ಈ ಮನುವಾದಿ ಪ್ರಭೃತಿ ಜನಸಾಮಾನ್ಯರಲ್ಲೂ ಒಂದಷ್ಟು ಚಾಲ್ತಿ ಪಡೆದಿರುವುದು ನಿಜ. ಅದಕ್ಕೆ ಅವರ ಕಾದಂಬರಿಗಳೆಷ್ಟು ಕಾರಣವೋ ಗೊತ್ತಿಲ್ಲವಾದರೂ ಅವರ 'ಆವರಣ' ದಾಖಲೆ ಸಂಖ್ಯೆಯಲ್ಲಿ ಮಾರಾಟವಾಗಲು ಮಾತ್ರ ಸಂಘಪರಿವಾರದ ಸಂಘಟನಾ ನೆಟ್‌ವರ್ಕೇ ಕಾರಣವೆಂಬುದರಲ್ಲಿ ಸಂಶಯವಿಲ್ಲ. ಆದರೆ ಅವರು ಜನಸಾಮಾನ್ಯರಲ್ಲಿ ಇಂದು ಸ್ವಲ್ಪವಾದರೂ ಮಾನ್ಯತೆ ಪಡೆದಿದ್ದಾರೆ ಎಂದಾದಲ್ಲಿ ಅದಕ್ಕೆ ಕಾರಣ ಕೇವಲ ಭೈರಪ್ಪನವರಲ್ಲ. ಅದಕ್ಕೆ ಪ್ರಮುಖ ಕಾರಣ ಈ ನಾಡಿನ ಪ್ರಗತಿಪರರೇ....


ಭೈರಪ್ಪನವರ ಮಹಾನ್ ಜೀವವಿರೋಧಿ 'ತಬ್ಬಲಿಯು ನೀನಾದೆ ಮಗನೆ' ಮತ್ತು 'ವಂಶವೃಕ್ಷ'ವನ್ನು ಅತ್ಯಂತ ಸಹನೆಯ ಕಲಾಕೃತಿಯನ್ನಾಗಿ ಪ್ರಗತಿಪರ ಗಿರೀಶ್ ಕಾರ್ನಾಡ್ ಚಿತ್ರಿಸಿದರೆ 'ನಾಯಿ ನೆರಳು'ವಿನಂಥ ಅತ್ಯಂತ ಸನಾತನವಾದಿ ಕಾದಂಬರಿಯೊಂದರಲ್ಲಿ ಮಹಿಳಾ ವಿಮೋಚನೆಯ ಧ್ವನಿ ಹೊರಡಿಸಿ ಚಿತ್ರ ನಿರ್ಮಾಣ ಮಾಡಿದವರು ಗಿರೀಶ್ ಕಾಸರವಳ್ಳಿಯವರು. ಕಲೆ ಕಲೆಗಾಗಿ ಮಾತ್ರ ಸಾಮಾಜಿಕ ಬದ್ಧತೆ ಬೇಕಾಗಿಲ್ಲ ಎಂಬ ನಿಲುವೇ ಈ ನವ್ಯ ಉದಾರವಾದಿ ಬುದ್ಧಿಜೀವಿಗಳು ಭೈರಪ್ಪನವರಂಥವರ ಕಾದಂಬರಿಯ ಸಾಮಾಜಿಕ ಅಪಾಯವನ್ನು ನಿರ್ಲಕ್ಷಿಸಿ ತಮ್ಮ ಕಲೆಯ ಅಭಿವ್ಯಕ್ತಿಗೆ ಬದ್ಧರಾಗಿರುವಂತೆ ಮಾಡಿತು. ಅದರ ಫಲವನ್ನು ಈಗ ಅವರನ್ನೂ ಒಳಗೊಂಡಂತೆ ಇಡಿ ನಾಡೇ ಉಣ್ಣಬೇಕಾಗಿದೆ.!!! ■

ಚಾರ್ವಾಕ

– ಶಿವಸುಂದರ್–

ಗಾಂಧಿಯೇ ನಕ್ಸಲ್ ಆದರೂ ಗಾಂಧಿವಾದಿಗಳು ನಕ್ಸಲೈಟರಾಗುವುದಿಲ್ಲ!!

ನಕ್ಸಲ್ ಬೆಂಬಲಿಗರ ಪಟ್ಟಿ ಬಿಡುಗಡೆಯಾದದ್ದೇ ತಡ ನಾಡಿನ ಪ್ರಗತಿಪರರೆಲ್ಲಾ ಗಾಂಧಿಯ ಹೆಸರಿನಲ್ಲಿ ಪ್ರಭುತ್ವದ ಹಿಂದೆ ಅವಿತುಕೊಳ್ಳಲು ಪ್ರಾರಂಭಿಸಿದ್ದಾರೆ. ಕಡಿದಾಳು ಶಾಮಣ್ಣರಂಥ ಪ್ರಾಕ್ಟಿಸಿಂಗ್ ಸಮಾಜವಾದಿಗಳು ತಾವು ಎಂದೂ ನಕ್ಸಲರ ಬೆಂಬಲಕ್ಕಿರಲಿಲ್ಲ ಎಂಬ ಸತ್ಯವನ್ನು ಹೇಳುತ್ತಲೇ ಈ ಪಟ್ಟಿಯ ಹೆಸರಿನಲ್ಲಿ ಪ್ರಗತಿಪರರ ಧ್ವನಿಯನ್ನು ಪೊಲೀಸರು ಹತ್ತಿಕ್ಕುತ್ತಿರುವುದರ ವಿರುದ್ಧವೂ ತಮ್ಮ ಧ್ವನಿಯನ್ನು ಎತ್ತಿದ್ದಾರೆ.




ರಾಜೇಂದ್ರ ಚೆನ್ನಿ

ಆದರೆ ಸೈದ್ಧಾಂತಿಕ ಸಮಾಜವಾದಿ ಮಾತ್ರವಾಗಿರುವ ಚೆನ್ನಿಯವರು ಪ್ರಭುತ್ವ ಬಗ್ಗು ಎಂದರೇ ತೆವಳಲೂ ಸಿದ್ಧವಾಗಿರುವಂತೆ ತೋರುತ್ತಿದೆ. ಸಾಕೇತ್ ರಾಜನ್ ಹತ್ಯೆಯ ನಂತರ ತನಗೂ ಯಾವುದೇ ಪ್ರಗತಿಪರ ಚಳವಳಿಗೂ ಸಂಬಂಧವಿಲ್ಲವೆಂದು ಸಾಬೀತುಪಡಿಸಲು ಹರಸಾಹಸ ಮಾಡುತ್ತಿದ್ದರು. ಅವರು ಕಳೆದ ಎರಡು ವರ್ಷಗಳಲ್ಲಿ ಯಾರ್‍ಯಾರ ಜೊತೆ ಗುರುತಿಸಿಕೊಂಡರು ಎಂಬ ಪಟ್ಟಿ ನೋಡಿದರೆ ಸಾಕು ಚೆನ್ನಿಯವರ ಸರ್ಕಸ್ಸು ಅರ್ಥವಾಗುತ್ತದೆ. ಕಾಗೋಡು ತಿಮ್ಮಪ್ಪ, ಇನ್ಫಿ ನಾರಾಯಣಮೂರ್ತಿ, ಶ್ರೀ ಶ್ರೀ ರವಿಶಂಕರ, ರಾಮಾ ಜೋಯಿಸ ಮತ್ತು ನಂಬಿದ್ರೆನಂಬಿ ಬಿಟ್ರೆ ಬಿಡಿ, ಎನ್‌ಕೌಂಟರ್ ದಯಾನಾಯಕ್....ಇವರೇ ಕಳೆದ ಎರಡು ವರ್ಷಗಳಲ್ಲಿ ಚೆನ್ನಿಯವರ ಸ್ನೇಹಿತರು. ಹೀಗಿದ್ದರೂ ಬದರಿಯವರು ಅವರನ್ನು ನಕ್ಸಲ್ ಬೆಂಬಲಿಗರ ಪಟ್ಟಿಯಲ್ಲಿ ಖಂಡಿತಾ ಸೇರಿಸಬಾರದಾಗಿತ್ತು.... ಮಾತ್ರವಲ್ಲ, ಕಡಿದಾಳು ಶಾಮಣ್ಣನವರನ್ನೂ ಸಹ ಪಟ್ಟಿಯಲ್ಲಿ ಸೇರಿಸಬಾರದಾಗಿತ್ತು... ಇದರಿಂದ ಕಡಿದಾಳು ಶಾಮಣ್ಣನವರ ಪ್ರಾಮಾಣಿಕತೆಗೆ ಅವಮಾನ ಮಾಡಿದಂತಾಗಿದೆ.

ತಾನು ನಕ್ಸಲ್ ಬೆಂಬಲಿಗನಲ್ಲ ಎಂದು ಅವರು ಇತ್ತೀಚೆಗೆ ಪ್ರಜಾವಾಣಿಯಲ್ಲಿ ಒಂದು ಸಾರ್ವಜನಿಕ ತಪ್ಪೊಪ್ಪಿಗೆ ಪತ್ರ ಬರೆದಿದ್ದಾರೆ. ಪ್ರಭುತ್ವದ ಹಿಂಸೆಯ, ಸಂವಿಧಾನ ವಿರೋಧಿ, ಹತ್ಯೆ ರಾಜಕಾರಣಕ್ಕೆ ಸಂಕೇತವಾಗಿರುವ ದಯಾನಾಯಕನನ್ನು ಅಭಿನಂದಿಸುವುದರಲ್ಲಿ ಯಾವುದೇ ನೈತಿಕ ಪ್ರಜ್ಞೆ ಅಥವಾ ದ್ವಂದ್ವಕ್ಕೆ ಗುರಿಯಾಗದ ಚೆನ್ನಿಯವರು ಆ ಲೇಖನದಲ್ಲಿ ನಕ್ಸಲ್ ಹಿಂಸೆಯನ್ನು ಮಾತ್ರ ಯಾವುದೇ ದ್ವಂದ್ವವಿಲ್ಲದೆ ಏಕಪಕ್ಷೀಯವಾಗಿ ಖಂಡಿಸಿದ್ದಾರೆ. ಇರಲಿ. ಆಮೇಲೆ ತನ್ನ ಬೆಂಬಲಕ್ಕೆ ಗಾಂಧಿಯವರನ್ನು ಎಳೆದು ತಂದಿದ್ದಾರೆ. ಮುಂದೆ ಸರ್ಕಾರ ತಮ್ಮ ರೀತಿ ಅಹಿಂಸಾತ್ಮಕ ಚಳವಳಿ ಮಾಡಿದವರನ್ನೂ ನಕ್ಸಲರೆಂದು ಕರೆಯಬಹುದು.... ಆಗ ಗಾಂಧಿಯ ಹೆಸರೇ ಆ ಪಟ್ಟಿಯಲ್ಲಿ ಮೊದಲನೆಯದಿರುತ್ತದೆ ಎಂದು ಭರವಸೆ ತೋರಿಸಿದ್ದಾರೆ.

ಆದರೆ ಚೆನ್ನಿಯವರು ಅಷ್ಟು ಗಾಬರಿ ಬೀಳುವ ಅಗತ್ಯವು ಕಾಣುವುದಿಲ್ಲ. ಏಕೆಂದರೆ ಗಾಂಧಿಯನ್ನು ನಕ್ಸಲ್ ಎಂದು ಕರೆಯುವ ಪಟ್ಟಿಯಲ್ಲೂ ಚೆನ್ನಿಯವರ ಹೆಸರು ಇರುವುದಿಲ್ಲ. ಏಕೆಂದರೆ ದಯಾನಾಯಕರ ಮಿತ್ರರು, ರವಿಶಂಕರ್, ನಾರಾಯಣಮೂರ್ತಿಗಳ ಮಿತ್ರರು ವ್ಯವಸ್ಥೆಗೆ ಮಿತ್ರರಾಗಿಯೇ ಇರುತ್ತಾರಲ್ಲವೇ?




ಜಿ.ಕೆ. ಗೋವಿಂದರಾವ್

ಒಂದು ವೇಳೆ ತನಗೆ ಸತ್ಯ ಮತ್ತು ಅಹಿಂಸೆಯ ನಡುವೆ ಆಯ್ಕೆ ಮಾಡಿಕೊಳ್ಳುವ ಸನ್ನಿವೇಶ ಒದಗಿಬಿಟ್ಟರೆ ತಾನು ಸತ್ಯವನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ ಎಂದಿದ್ದರಂತೆ ಗಾಂಧಿ. ಆದರೆ ಗಾಂಧಿವಾದಿ ಚೆನ್ನಿಯವರು ಮತ್ತು ಗೋವಿಂದರಾಯರು ಆಯ್ಕೆ ಮಾಡಿಕೊಳ್ಳುವುದು ಸತ್ಯವನ್ನಲ್ಲ... ಹಿಂಸೆಯನ್ನ.... ಅರ್ಥಾತ್ ಪ್ರಭುತ್ವ ಹಿಂಸೆಯನ್ನ....

ಹೀಗೆ ಒಂದು ವೇಳೆ ಗಾಂಧಿಯೇ ನಕ್ಸಲ್ ಆಗಿಬಿಟ್ಟರೂ ಈ ಗಾಂಧಿವಾದಿಗಳು ಮಾತ್ರ ನಕ್ಸಲರಾಗುವುದಿಲ್ಲ. ಏಕೆಂದರೆ ಇವರಿಗೆ ಗಾಂಧೀವಾದ ನೆನಪಾಗುವುದು ಜನರ ಬರ್ಬರ ಬದುಕನ್ನು ನೋಡಿದಾಗಲಲ್ಲ. ಅದನ್ನು ಬದಲಿಸಬೇಕು ಎಂಬ ಹಂಬಲದಿಂದಲ್ಲ. ಅಥವಾ ಪ್ರಜಾತಂತ್ರದ ಹೆಸರಿನಲ್ಲೇ ಅತ್ಯಂತ ಹಿಂಸಾತ್ಮಕವಾಗಿ ಜನರ ಕಗ್ಗೊಲೆ ನಡೆಸಿ ಕೆಂಪಾಗಿರುವ ಆಳುವ ಪಕ್ಷಗಳ ಕೈಕುಲುಕುವಾಗಲೂ ಅಲ್ಲ, ತಮ್ಮ ಕೆರಿಯರ್ ಅಭಿವೃದ್ಧಿಗಾಗಿ ಹಿಂಸಾತ್ಮಕವಾಗಿ ಜನರ ಮೇಲೆ ದಮನ ಮಾಡುತ್ತಿರುವ ರಾಜಕಾರಣಿಗಳ ಮತ್ತು ಅಧಿಕಾರಿಗಳ ಜೊತೆ ಮೋಜುವಾನಿ ನಡೆಸುವಾಗಲೂ ಇವರಿಗೆ ಗಾಂಧೀವಾದ ನೆನಪಾಗುವುದಿಲ್ಲ. ಬದಲಿಗೆ ಅವರಿಗೆ ಗಾಂಧೀವಾದ ನೆನಪಾಗುವುದು ಪ್ರಭುತ್ವದ ಹಿಂಸೆಯಿಂದ ತಮ್ಮನ್ನು ಮಾತ್ರ ಬಚಾವು ಮಾಡಿಕೊಳ್ಳ ಬೇಕಾದ ತುರ್ತು ಒದಗಿದಾಗ ಮಾತ್ರ.... ಇಲ್ಲವೆಂದರೆ ತತ್ವಬದ್ಧ ಅಹಿಂಸಾವಾದದ ಹೆಸರಿನಲ್ಲಿ ಸುಳ್ಳುಸುಳ್ಳೇ ನೈಜ ಪ್ರಜಾತಂತ್ರವಾದಿಗಳ ಸಂಘ ತೊರೆಯುವ ಇವರು ದಿನನಿತ್ಯ ಜನರ ದಮನ ಮಾಡುವ, ಬರ್ಬರ ಅತ್ಯಾಚಾರ ಮಾಡುವ ಆಳುವ ಪಕ್ಷಗಳ ಮೈತ್ರಿಯನ್ನು ಮಾತ್ರ ತೊರೆಯುವುದಿಲ್ಲವೇಕೆ? ಏಕೆಂದರೆ ಅವರು ಸತ್ಯಕ್ಕೂ ಬದ್ಧರಲ್ಲ, ಅಹಿಂಸೆಗೂ ಬದ್ಧರಲ್ಲ, ತಮ್ಮ ಹಿತಾಸಕ್ತಿಗಳಿಗೆ ಮಾತ್ರ ಬದ್ಧರು!!

ಹೀಗಾಗಿ ಚೆನ್ನಿ ಮತ್ತು ಗೋವಿಂದರಾಯರು ಖಂಡಿತಾ ನಕ್ಸಲ್‌ವಾದಿಗಳೂ ಅಲ್ಲ, ಗಾಂಧೀವಾದಿಗಳೂ ಅಲ್ಲ, ಕೇವಲ ಅವಕಾಶವಾದಿಗಳು ಮಾತ್ರ! ●

No Comments



"ಕಡಿದಾಳು ಶಾಮಣ್ಣರಂಥವರನ್ನೇ ನಕ್ಸಲ್ ಗುಂಪಿನೊಡನೆ ಗುರುತಿಸಿದ ಸರ್ಕಾರ ನನ್ನನ್ನು ನಕ್ಸಲ್ ಎನ್ನುವ ದಿನ ದೂರವಿಲ್ಲ."

-ಯು.ಆರ್.ಅನಂತಮೂರ್ತಿ

"ದಲಿತರು ಮತ್ತು ಮುಸ್ಲಿಮರನ್ನು ರಕ್ಷಿಸುತ್ತಿದ್ದೇನೆಂದು ಹೇಳುವ ಕಾಂಗ್ರೆಸ್, ಸನಾತನ ದಬ್ಬಾಳಿಕೆಗಳನ್ನೇ ಪ್ರಣಾಳಿಕೆಯಾಗಿ ಉಳ್ಳ ಬಿಜೆಪಿ ಎರಡು ಕೂಡ ದ್ರೋಹಿಗಳೇ."

- ವೀರ್‌ಸಿಂಗ್, ಬಿಎಸ್ಪಿ ನಾಯಕ

"ಭೈರಪ್ಪನವರಿಗೆ ಹೆಡ್ಗೆವಾರ್ ಪ್ರಶಸ್ತಿ"

-ಪತ್ರಿಕಾ ವರದಿ



"ಸಾಹಿತ್ಯ ಕ್ಷೇತ್ರಗಳಲ್ಲಿ ಪ್ರಶಸ್ತಿಗಳ ಸಂಖ್ಯೆ ಜಾಸ್ತಿ ಮಾಡುವುದು ಬೇಡ."

-ಎಸ್ಸೆಲ್ ಭೈರಪ್ಪ

"ತೇಜಸ್ವಿ ಇಂದು ಬದುಕಿರುತ್ತಿದ್ದರೆ ಅವರನ್ನು ನಕ್ಸಲ್ ಪಟ್ಟಿಗೆ ಸೇರಿಸುತ್ತಿದ್ದರು."

- ಜಿ. ಎಚ್.ನಾಯಕ್



"ಮೊದಲು ಬಿಎಸ್ಪಿ ಕಾರ್ಯಕರ್ತರು ಪಕ್ಷಕ್ಕೆ ದೇಣಿಗೆ ನೀಡುತ್ತಿದ್ದರು. ಈಗ ಅವರು ನನಗೆ ಮನೆ ಕಟ್ಟಿಸಿಕೊಳ್ಳಲು ಅಥವಾ ಬಂಡವಾಳ ತೊಡಗಿಸಿಕೊಳ್ಳಲು ಹಣ ಕಳಿಸುತ್ತಿದ್ದಾರೆ."

- ಮಾಯಾವತಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಶಿಲ್ಪಾಶೆಟ್ಟಿಯ ಸೌಂದರ್ಯ ಯಾರನ್ನಾದರೂ ಸೆಳೆಯುವಂತಿದೆ. ಯಾರನ್ನಾದರೂ ಮಂಡಿಯೂರಿ ತನ್ನೆದುರು ನಿಲ್ಲಿಸಿಬಿಡುವಂಥ ತಾಕತ್ತು ಅವಳಿಗಿದೆ."

- ಮೈಕ್ ಟೈಸನ್


"ಉದ್ಯಮಿ ಕುಪೇಂದ್ರರೆಡ್ಡಿಯಿಂದ ಕಾನೂನು ಪ್ರಕಾರ ವಾಣಿಜ್ಯ ಸಂಕೀರ್ಣವನ್ನು ಖರೀದಿಸಿದ್ದೇವೆ. ರೆಡ್ಡಿ ಹಿನ್ನೆಲೆ ಏನಿದ್ದರೇನು? ಅದಕ್ಕೂ ನಮಗೂ ಸಂಬಂಧವಿಲ್ಲ."

-ಬಾಲಕೃಷ್ಣಗೌಡ

"ಯಡಿಯೂರಪ್ಪ ಪ್ರಶ್ನಾತೀತ ನಾಯಕ."

-ಸದಾನಂದಗೌಡ

ವಾರದ ತಮಾಷೆ



"ನನ್ನ ಜೊತೆ ಬೊಮ್ಮಾಯಿ, ನಾಡಗೌಡ, ಸೋಮಶೇಖರ್. ಅಲ್ಲದೆ ದೇವನೂರು ಮಹಾದೇವ, ಚುಕ್ಕಿ, ಪುಟ್ಟಣ್ಣಯ್ಯ ಎಲ್ಲಾ ಇದ್ದಾರೆ. ಇವರೆಲ್ಲರ ಜೊತೆ ಸೇರಿ ನಾವು ಸಮ್ಮಿಶ್ರ ಸರ್ಕಾರದ ವಿರುದ್ಧ ಸಮರ ಸಾರಲಿದ್ದೇವೆ."

- ಪಿ. ಜಿ. ಆರ್. ಸಿಂಧ್ಯ

ವಾರದ ಅವಿವೇಕ

"ರೈತರು ಸತ್ರೆ ಸಾಯಲಿ ಬಿಡ್ರಿ..ನಾವು ತಾನೆ ಎಷ್ಟೂ ಅಂತ ಮಾಡಕ್ಕೆ ಆಗುತ್ತೆ? ಇವ್ಯಾವುದೂ ದೇವೇಗೌಡನ ಧೃತಿಗೆಡಿಸುವುದಿಲ್ಲ."

- ದೇವೇಗೌಡ

ವಾರದ ದರ್ಶನ



"ಬಾಹ್ಯಾಕಾಶದಿಂದ ಭೂಮಿಯನ್ನು ನೋಡಿದಾಗ ಬರೀ ಕುಳಿಗಳು, ದೊಡ್ಡ ನದಿಗಳು, ಪರ್ವತಗಳು ಎನಿಸುತ್ತದೆ. ಆದರೆ ನಮ್ಮ ಭೂಮಿ ಎಷ್ಟು ಸುಂದರ.... ಇದನ್ನು ಆದಷ್ಟು ಸುಂದರವಾಗಿಟ್ಟುಕೊಳ್ಳಬೇಕು ಎನಿಸುತ್ತದೆ."

-ಸುನೀತಾ ವಿಲಿಯಮ್ಸ್

ವಾರದ ವಿವೇಕ

"ನಾನು ನಿಮ್ಮ ಅಭಿಪ್ರಾಯವನ್ನು ಒಪ್ಪುವುದಿಲ್ಲ, ಆದರೆ ನಿಮ್ಮ ಅಭಿಪ್ರಾಯವನ್ನು ಪ್ರತಿಪಾದಿಸುವ ಸ್ವಾತಂತ್ರ್ಯವನ್ನು ನನ್ನ ಪ್ರಾಣ ಕೊಟ್ಟಾದರೂ ರಕ್ಷಿಸುತ್ತೇನೆ."

-ಜೀನ್‌ಪಾಲ್ ಸಾರ್ತೆ

ಫ್ಯಾಸಿಸ್ಟ್-ಪೊಲೀಸ್ ದಬ್ಬಾಳಿಕೆಗೆ ಮಣಿಯುವುದಿಲ್ಲ

ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು ನಕ್ಸಲರನ್ನು ಬೆಂಬಲಿಸುವ ಸಂಘಟನೆಯೇ? ಎಲ್ಲಿಯ ಕೋಮು ಸೌಹಾರ್ದ, ಎಲ್ಲಿಯ ನಕ್ಸಲರ ಸಶಸ್ತ್ರ ಹೋರಾಟ, ಎಲ್ಲಿ ಇವೆರಡರ ನಡುವಿನ ನಂಟು ಎಂಬುದು ಸಾಮಾನ್ಯರಿಗೂ ಅರ್ಥವಾಗುತ್ತದೆ. ಆದರೆ ಪೊಲೀಸ್ ಇಲಾಖೆಗೆ, ಚೆಡ್ಡಿಗಳಿಗೆ ಮತ್ತು ದುರಾದೃಷ್ಟವಶಾತ್ ಹಲವು ಬುದ್ಧಿಜೀವಿಗಳಿಗೆ ಮಾತ್ರ ಅರ್ಥವಾಗಿಲ್ಲ.

ಅದರಲ್ಲೂ ಗೋವಿಂದರಾಯರು ಮತ್ತು ಕೆ. ಮರುಳ ಸಿದ್ದಪ್ಪನವರು "ವೇದಿಕೆಯು ನಕ್ಸಲ್ ಪರ ಸಂಘಟನೆ ಎಂದು ದೃಢಪಟ್ಟ ನಂತರ ನಾವು ಅದರಿಂದ ದೂರ ವಾದೆವು" ಎಂದು ಪ್ರಜಾವಾಣಿಗೆ ಕಳುಹಿಸಿದ ಪತ್ರದಲ್ಲಿ ಬರೆದದ್ದನ್ನು ನೋಡಿ ನನಗೆ ತುಂಬಾ ಬೇಸರವಾಯಿತು. ಕೂಡಲೇ ಮರುಳಸಿದ್ದಪ್ಪನವರಿಗೆ ಫೋನ್ ಮಾಡಿದೆ. "ನಿಮ್ಮ ಪತ್ರದಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು ಪೊಲೀಸರು ಅದು ಹೇಗೆ ಕಡಿದಾಳು ಶಾಮಣ್ಣ ಮತ್ತು ರಾಜೇಂದ್ರ ಚೆನ್ನಿಯವರ ಹೆಸರನ್ನು ಸೇರಿಸಿದ್ದಾರೆ ಎಂಬುದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು ಎಂದಿದ್ದೀರಿ. ಹಾಗೆಯೇ ನಿಮಗೆ ಹೇಗೆ ನಮ್ಮ ವೇದಿಕೆಯು ನಕ್ಸಲ್ ಪರ ಸಂಘಟನೆ ಎಂದು ದೃಢಪಟ್ಟಿತ್ತು ಎಂಬುದರ ಬಗ್ಗೆ ನೀವು ನನಗೆ ಸ್ಪಷ್ಟಪಡಿಸಬೇಕು. ನನ್ನ ಪ್ರಶ್ನೆಗೆ ಉತ್ತರಿಸುವ ನೈತಿಕ ಜವಾಬ್ದಾರಿ ನಿಮಗೆ ಇದೆ ಎಂದು ಭಾವಿಸಿದ್ದೇನೆ" ಎಂದು ಕೇಳಿದೆ.

ಈ ಹಿಂದೆ ಸಿ.ಟಿ. ರವಿ, ಸುನೀಲ್‌ಕುಮಾರ್, ವಿಜಯ ಕರ್ನಾಟಕದ ಬೆತ್ತಲೆ ಜಗತ್ತಿನ ಪ್ರತಾಪ್ ಸಿಂಹನಂಥವರು ಇಂತಹದ್ದೇ ಆರೋಪವನ್ನು ಮಾಡಿದಾಗ ನಾವೆಲ್ಲ ನಕ್ಕು ಸುಮ್ಮನಾಗಿದ್ದೆವು. ಸಿಪಿಐಂ ಪಕ್ಷದ ನಾಯಕ ಜಿ.ಎನ್. ನಾಗರಾಜ್ ಮತ್ತವರ ಸಂಗಡಿಗರೂ ಇದೇ ನಿಲುವನ್ನು ತಾಳಿದಾಗ ಅವರಿಗೆ ಸೂಕ್ತವಾದ ಉತ್ತರವನ್ನು ನೀಡಿದ್ದೆವು. ಈಗ ನೋಡಿದರೆ ಚೆನ್ನಿ, ಗೋವಿಂದರಾವ್ ಮತ್ತು ಮರುಳಸಿದ್ದಪ್ಪನವರು ಅದೇ ಆರೋಪವನ್ನು ಮಾಡುತ್ತಿದ್ದಾರೆ.


ಇಲ್ಲೊಂದು ಸಂಗತಿಯನ್ನು ಹೇಳಲೇಬೇಕಾಗಿದೆ. ಎರಡು ವರ್ಷಗಳ ಹಿಂದೆ ಈ ಪತ್ರಿಕೆ ಜನ್ಮ ತಾಳಿದ್ದರ ಹಿಂದೆ ನಕ್ಸಲ್ ಚಳವಳಿಗೆ ಸಂಬಂಧಿಸಿದ ಘಟನೆಗಳಿದ್ದರೂ, ನಿಜವಾಗಲೂ ಅದಕ್ಕೆ ಮೂಲ ಪ್ರೇರಣೆಯಾಗಿದ್ದದ್ದು ಕೋಮು ಸೌಹಾರ್ದವನ್ನು ಕಾಪಾಡಬೇಕೆಂಬ ಹಂಬಲ; 'ಲಂಕೇಶ್'ನಂತಹ ಒಂದು ಪ್ರಬಲ ವೇದಿಕೆ ಇಲ್ಲದಿದ್ದರೆ ಕರ್ನಾಟಕದಲ್ಲಿ ಹಿಂದೂತ್ವವಾದಿಗಳಿಗೆ ಕಡಿವಾಣ ಹಾಕುವುದು ಅಸಾಧ್ಯವಾಗುತ್ತದೆ ಎಂಬ ಎಚ್ಚರಿಕೆ. ಅಂದಹಾಗೆ, ಇದರ ಉದ್ಘಾಟನಾ ಕಾರ್ಯಕ್ರಮಕ್ಕೆ ಪ್ರೊ. ಕೆ. ರಾಮದಾಸ್ ಮಾತ್ರವಲ್ಲ, ಸ್ವತಃ ಗೋವಿಂದ ರಾಯರು ಮತ್ತು ಮರುಳಸಿದ್ದಪ್ಪನವರೂ ಬಂದಿದ್ದರು.

ಸಾಕೇತ್ ರಾಜನ್‌ನ ಎನ್‌ಕೌಂಟರ್ ಮತ್ತು ವೆಂಕಟಮ್ಮನಹಳ್ಳಿಯಲ್ಲಿ ನಕ್ಸಲರಿಂದ ಪೊಲೀಸರ ಹತ್ಯೆ ಇವೆರಡು ಘಟನೆಗಳ ನಂತರ ಪ್ರಾರಂಭವಾದ ಈ ಪತ್ರಿಕೆಯ ಬಿಡುಗಡೆಗೆ ಇವರೆಲ್ಲ ಹಾಜರಿದ್ದರೆಂದರೆ.... ನಾನಾಗಲಿ, 'ಲಂಕೇಶ್' ಆಗಲಿ, ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಾಗಲಿ ನಕ್ಸಲ್‌ರ ಸಶಸ್ತ್ರ ಹೋರಾಟದ ಪರವಲ್ಲ ಎಂದೂ, ವೇದಿಕೆಯು ಫ್ಯಾಸಿಸ್ಟ್ ರಾಜಕೀಯವನ್ನು ವಿರೋಧಿಸುವ ಒಂದು ಪ್ರಬಲ ಸಂಘಟನೆ ಎಂದೂ ಅರ್ಥವಲ್ಲವೆ? ಹೀಗಿದ್ದರೂ ಯಾಕೆ ಇಂತಹ ಆರೋಪ?

ನನ್ನ ಪ್ರಶ್ನೆಗೆ ಮರುಳಸಿದ್ದಪ್ಪನವರು "ನಿಮ್ಮ ವೇದಿಕೆಯಲ್ಲಿರುವ ಹಲವರು ನಕ್ಸಲ್ ಸಿದ್ಧಾಂತದ ಬೆಂಬಲಿಗರು ಎಂಬ ಆರೋಪ ಇದೆ" ಎಂದು ಹೇಳಿದರು.

"ಆದರೆ ಹಲವಾರು ಜನರು, ಸಂಘಟನೆಗಳು ಇರುವ ಇದೇ ವೇದಿಕೆ ಅಂತಹ ಹಲವರಿಂದ ಹೇಗೆ ನಕ್ಸಲ್ ಪರವಾಗುತ್ತದೆ? ರೈತ ಸಂಘದ ಎರಡೂ ಬಣಗಳು, ದಲಿತ ಸಂಘರ್ಷ ಸಮಿತಿಯ ಹಲವಾರು ಬಣಗಳು ವೇದಿಕೆಯೊಂದಿಗಿವೆ. ಅಂದರೆ ವೇದಿಕೆ ಯಾವುದೇ ಒಂದು ಬಣದ ಪರವಾಗಿಲ್ಲ. ಬದಲಾಗಿ ಕೋಮುವಾದದ ವಿರುದ್ಧವಿರುವ ಎಲ್ಲರನ್ನೂ ಒಳಗೊಂಡಿದೆ. ಅಷ್ಟೇ ಅಲ್ಲ, ಇಲ್ಲಿ ಇಂಗ್ಲಿಷ್ ಕಲಿಕೆಯಿಂದ ಹಿಡಿದು ನಕ್ಸಲರ ಬಗೆಗೂ ವಿವಿಧ ಅಭಿಪ್ರಾಯಗಳನ್ನು ಹೊಂದಿರುವವರಿದ್ದಾರೆ. ಇತರೆ ಇಷ್ಯೂಗಳ ಬಗ್ಗೆ ಅವರವರ ನಿಲುವುಗಳೇನೇ ಇದ್ದರೂ ಅವರು ಕೋಮುವಾದದ ವಿರೋಧಿಗಳಾಗಿರುವುದ ರಿಂದಲೇ ವೇದಿಕೆಯೊಂದಿಗಿದ್ದಾರೆ. ಹೀಗಿದ್ದರೂ ಇಂತಹ ಆರೋಪ ಮಾಡಿದ್ದೀರಲ್ಲಾ? ಹೋಗಲಿ, ತರ್ಕಕ್ಕೆ ವೇದಿಕೆಯಲ್ಲಿರುವ ಹಲವರು ನಕ್ಸಲ್ ಪರ ಸಿದ್ಧಾಂತವನ್ನು ಹೊಂದಿದ್ದಾರೆ ಎಂದಿಟ್ಟುಕೊಳ್ಳೋಣ. ಆದರೆ ನೀವು ಆಶಿಸುವಂತೆ ಅವರ್‍ಯಾರೂ ಬಂದೂಕು ಹಿಡಿದು ಕಾಡಿನಲ್ಲಿ ಹೋರಾಟ ನಡೆಸದೇ ಪ್ರಜಾಸತ್ತಾತ್ಮಕವಾದ, ಅಹಿಂಸಾತ್ಮಕ ವಾದ ಹೋರಾಟದಲ್ಲಿ ತೊಡಗಿದ್ದಾರಲ್ಲವೇ? ಅಂಥವರನ್ನು ಬೆಂಬಲಿಸಿ ಅವರು ಕಾಡಿನ ದಾರಿ ಹಿಡಿಯದಂತೆ, ಕಾನೂನಿನ ಚೌಕಟ್ಟಿನಲ್ಲೇ ಪ್ರತಿಭಟಿಸುತ್ತಾ ಮುಂದುವರೆಯುವಂತೆ ಪ್ರೋತ್ಸಾಹಿಸುವುದು ತಮ್ಮ ನೈತಿಕ ಜವಾಬ್ದಾರಿಯಲ್ಲವೇ? ಅದರ ಬದಲಾಗಿ ಇಂತಹ ಆರೋಪ ಮಾಡಿ ಅವರ ಮೇಲೂ ಸರ್ಕಾರದ, ಪೊಲೀಸರ ಕೆಂಗಣ್ಣು ಬೀಳುವಂತೆ ಮಾಡುವುದು ಎಷ್ಟು ಸರಿ?"

ಭಾವುಕಳಾಗಿದ್ದ ನಾನು ಮಾತನಾಡುತ್ತಲೇ ಇದ್ದೆ. ಮುಂಬೈಯಲ್ಲಿ ನಕಲಿ ಎನ್‌ಕೌಂಟರ್‌ಗಳ ಕುರಿತು ಒಂದು ವಿಚಾರ ಸಂಕಿರಣಕ್ಕೆ ಹೋಗಿದ್ದ ನಾನು ಅಲ್ಲಿಂದಲೇ ಫೋನ್ ಮಾಡಿದ್ದರಿಂದ ಕೊನೆಗೆ "ಬೆಂಗಳೂರಿಗೆ ಹಿಂದಿರುಗಿದಾಗ ತಮ್ಮನ್ನು ಭೇಟಿ ಆಗುತ್ತೇನೆ" ಅಂದೆ. ಅದಕ್ಕೆ ಮರುಳ ಸಿದ್ದಪ್ಪನವರೂ ಒಪ್ಪಿಕೊಂಡರು.



ಚಿಕ್ಕಮಗಳೂರು ಜೈಲಿನಲ್ಲಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಸದಸ್ಯರು

ಇದಾದ ನಂತರ ರಾಜೇಂದ್ರ ಚೆನ್ನಿಯವರೂ ಪ್ರಜಾವಾಣಿಯಲ್ಲಿ ಲೇಖನವೊಂದನ್ನು ಬರೆದು "ನಕ್ಸಲಿಸಂ ವಿರುದ್ಧ ವೇದಿಕೆಯು ಸ್ಪಷ್ಟ ನಿಲುವನ್ನು ಹೊಂದಿಲ್ಲ" ಎಂದು ಆರೋಪಿಸಿದರು. ಅಲ್ರಿ, ನಮ್ಮ ವೇದಿಕೆ ಇರುವುದು ಕೋಮುವಾದದ ವಿರುದ್ಧ ಹೋರಾಟ ಮಾಡಲು; ಜಗತ್ತಿನ ಎಲ್ಲಾ ಆಗುಹೋಗುಗಳ ಬಗ್ಗೆ ತನ್ನ ನಿಲುವನ್ನಾಗಲಿ, ಸಮಜಾಯಿಷಿಗಳನ್ನಾಗಲಿ, ನೀಡಲು ಅಲ್ಲ. ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ, ಅಭಿಪ್ರಾಯ ಗಳನ್ನು ನೀಡಲು ಬೇರೆ ಬೇರೆ ಸಂಘಟನೆಗಳಿವೆ, ವೇದಿಕೆಗಳಿವೆ.

ಹಾಗೆ ನೋಡಿದರೆ, ಕೋಮು ಸೌಹಾರ್ದದ ಹೊರತಾಗಿ ನಮ್ಮ ವೇದಿಕೆ ಬೇರೆಯಾವ ಇಷ್ಯೂ ಬಗ್ಗೆಯೂ ಪ್ರತಿಕ್ರಿಯೆ, ಹೇಳಿಕೆ ನೀಡಿಲ್ಲ. ನಂದಿಗ್ರಾಮ, SEZ, ಇಂಗ್ಲಿಷ್ ಕಲಿಕೆ, ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ, ಕಾವೇರಿ ವಿವಾದ, ಅನುದೇವಾ, ಆವರಣ ಇತ್ಯಾದಿ ಅದೆಷ್ಟೋ ವಿಚಾರ-ವಿವಾದಗಳು ಎದುರಾಗಿವೆ. ಅವ್ಯಾವುಗಳ ಬಗ್ಗೆಯೂ ವೇದಿಕೆಯು ಒಂದು ಸಂಘಟನೆಯಾಗಿ ಪ್ರತಿಕ್ರಿಯಿಸಿಲ್ಲ, ಪ್ರತಿಕ್ರಿಯಿಸುವ ಅವಶ್ಯಕತೆಯನ್ನೂ ಕಂಡಿಲ್ಲ. ಯಾರಾದರೂ ಪ್ರತಿಕ್ರಿಯಿಸಿದ್ದರೆ ತಮ್ಮ ವೈಯಕ್ತಿಕ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾರಷ್ಟೇ. ಹೀಗಿರುವಾಗ ನಕ್ಸಲ್‌ವಾದದ ಬಗ್ಗೆ ವೇದಿಕೆಯು ಪ್ರತಿಕ್ರಿಯಿಸಿಲ್ಲ, ತನ್ನ ನಿಲುವನ್ನು ಸ್ಪಷ್ಟಪಡಿಸಿಲ್ಲ ಎಂದು ಹೇಳಿ, ಆ ಕಾರಣಕ್ಕೇ ಇದು ನಕ್ಸಲ್ ಪರವಾದ ಸಂಘಟನೆ ಎಂದು ಆರೋಪಿಸು ವುದು ಮೂರ್ಖತನವಾಗುತ್ತದೆ.

ಕೋಮುವಾದದ ಹೊರತಾಗಿ ಇತರ ವಿಷಯಗಳ ಬಗ್ಗೆ ವೇದಿಕೆ ಪ್ರತಿಕ್ರಿಯಿಸದೇ ಇರುವುದಕ್ಕೂ ಒಂದು ಕಾರಣವಿದೆ. ಐದು ವರ್ಷಗಳ ಹಿಂದೆ ಬಾಬಾಬುಡನ್‌ಗಿರಿ ಸೌಹಾರ್ದ ವೇದಿಕೆ ಎಂಬ ಹೆಸರಿನಡಿ ಕಾರ್ಯ ನಿರ್ವಹಿಸುತ್ತಿದ್ದ ಚಿಕ್ಕದಾದ ಗುಂಪು ಕ್ರಮೇಣ ರಾಜ್ಯದೆಲ್ಲೆಡೆಯಿಂದ ಬೆಂಬಲ ಪಡೆದು ದೊಡ್ಡದಾದಾಗ ವೇದಿಕೆಯ ಎಲ್ಲಾ ಸದಸ್ಯರ ಮತ್ತು ಸಂಘಟನೆಗಳ ಸಭೆಯನ್ನು ಕರೆಯಲಾಗಿತ್ತು. ಆ ಸಭೆಯಲ್ಲಿ ಚರ್ಚೆಗೆ ಒಳಗಾದ ಒಂದು ವಿಷಯ ಯಾವುದೆಂದರೆ ವೇದಿಕೆಗೆ 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯೆಂದು ಹೆಸರಿಡಬೇಕೋ ಅಥವಾ ಬರೀ 'ಸೌಹಾರ್ದ ವೇದಿಕೆ' ಎಂದು ಹೆಸರಿಡ ಬೇಕೋ ಎಂಬುದು.

'ಸೌಹಾರ್ದ ವೇದಿಕೆ' ಪರವಾಗಿದ್ದವರು ಆ ಹೆಸರಿನಡಿ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು ಎಂದೂ, ವೇದಿಕೆಯ ವಿಸ್ತಾರ ಹೆಚ್ಚಾಗುತ್ತದೆ ಎಂದೂ, 'ಕೋಮು' ಎಂಬ ಪದವೇ ಅಗತ್ಯವಿಲ್ಲವೆಂದೂ, ಕೋಮು ವಾದದ ವಿರುದ್ಧದ ಹೋರಾಟಕ್ಕೆ ಮಾತ್ರ ವೇದಿಕೆ ಸೀಮಿತಗೊಳ್ಳಬಾರದೆಂದೂ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದರು.

ಆದರೆ 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯ ಪರವಾಗಿದ್ದವರು ಮಹಿಳೆ, ರೈತ, ದಲಿತ, ಸಾಂಸ್ಕೃತಿಕ, ಸಾಮಾಜಿಕ, ಇತ್ಯಾದಿ ವಿಷಯಗಳನ್ನು ಕುರಿತು ಪ್ರತಿಕ್ರಿಯಿಸಲು, ಹೋರಾಟ ನಡೆಸಲು ಈಗಾಗಲೇ ಹಲವಾರು ಸಂಘಟನೆಗಳು ಇವೆಯೆಂದೂ, ಕೋಮುವಾದ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಅದರ ವಿರುದ್ಧವೇ ಹೋರಾಡುವ ಸಂಘಟನೆಯ ಅವಶ್ಯಕತೆ ಇದೆಯೆಂದೂ, ವೇದಿಕೆಯ ಕಾರ್ಯಕ್ರಮಗಳು ಈ ವಿಷಯಕ್ಕೆ ಮಾತ್ರ ಸಂಬಂಧಿಸಿದ್ದಾಗಿರಬೇಕೆಂದೂ ಅಭಿಪ್ರಾಯಪಟ್ಟರು. ಸಭೆಯಲ್ಲಿದ್ದ ಬಹಳಷ್ಟು ಜನ ಈ ನಿಲುವಿನೊಂದಿಗೆ ಸಮ್ಮತಿ ಸೂಚಿಸಿದ್ದರಿಂದ ಇದೇ ಹೆಸರನ್ನು ಆಯ್ಕೆ ಮಾಡಲಾಯಿತು.

ಹೀಗೆ ಪ್ರಜಾತಾಂತ್ರಿಕವಾಗಿ ನಡೆದುಕೊಂಡು ಬಂದಿರುವ ವೇದಿಕೆಯ ವಿಶಿಷ್ಟತೆ ಯಾವುದೆಂದರೆ ಇದಕ್ಕೆ ಅಧ್ಯಕ್ಷ, ಉಪಾಧ್ಯಕ್ಷ ಇತ್ಯಾದಿಗಳು ಇಲ್ಲದಿರುವುದು. ಈ ಕಾರಣದಿಂದಾಗಿಯೇ ವೇದಿಕೆ ಯಾರೋ ಒಬ್ಬ ವ್ಯಕ್ತಿ ಕೇಂದ್ರಿತ ಸಂಘಟನೆಯಾಗದೇ ಒಂದು ಕ್ರಿಯಾಶೀಲ ವೇದಿಕೆಯಾಗಿರುವುದು. ಕೋಮುವಾದದ ವಿರುದ್ಧದ ದಿಟ್ಟ ನಿಲುವು ಮತ್ತು ಪ್ರತಿ ಹಂತದಲ್ಲೂ ಪ್ರಜಾಸತ್ತಾತ್ಮಕ ವಾಗಿರುವುದರಿಂದಲೇ ವೇದಿಕೆಯಲ್ಲಿ ಇವತ್ತು ನೂರಾರು ಸಂಘಟನೆಗಳಿವೆಯಲ್ಲದೆ ರಾಜ್ಯದ ಹದಿನಾರು ಜಿಲ್ಲೆಗಳಲ್ಲೂ ಘಟಕಗಳನ್ನು ಹೊಂದಿದ್ದು ಅವೆಲ್ಲವೂ ಕ್ರಿಯಾತ್ಮಕವಾಗಿ ಕೆಲಸ ಮಾಡುತ್ತಿವೆ.

ನಮ್ಮ ಇಂತಹ ಪ್ರಜಾಸತ್ತಾತ್ಮಕ, ಅಹಿಂಸಾತ್ಮಕ ಮತ್ತು ಕ್ರಿಯಾಶೀಲ ಹೋರಾಟದ ಬಗ್ಗೆ ಅರಿತ ಖ್ಯಾತ ಲೇಖಕಿ ಅರುಂಧತಿ ರಾಯ್‌ರವರು "ಕರ್ನಾಟಕ ಕೋಮು ಸೌಹಾರ್ದ ವೇದಿಕೆಯದ್ದು Pro active secularism. ದೇಶದ ವಿವಿಧ ರಾಜ್ಯಗಳಲ್ಲೂ ಇಂತಹ ಮಾದರಿ ಹೋರಾಟ ಶುರುವಾಗಬೇಕಿದೆ" ಎಂದು ಹೇಳಿದ್ದಾರೆ.

ಆದರೆ ಚೆನ್ನಿ ಮತ್ತು ಗೋವಿಂದರಾಯರು ಇಲ್ಲಸಲ್ಲದ ಆರೋಪ ಮಾಡಿ, ಇಷ್ಟೆಲ್ಲ ಗೊಂದಲಗಳನ್ನು ಸೃಷ್ಟಿಸಿ, ಸರ್ಕಾರ, ಪೊಲೀಸ್ ಮತ್ತು ಚೆಡ್ಡಿಗಳು ಪ್ರಗತಿಪರರ, ಬುದ್ಧಿಜೀವಿಗಳ ಬಗ್ಗೆ ನಗುವಂತೆ ಮಾಡಿರುವುದು ದುರಾದೃಷ್ಟ.

ಇಂಥವರ ಈ ದುರಾದೃಷ್ಟಕರ ಚಿಂತನೆಗಳಿಂದಾಗಿ ಎಂತಹ ಅಪಾಯಗಳಾಗುತ್ತವೆ ಎಂಬ ಅರಿವೂ ಅವರಿಗಿಲ್ಲದಿರುವುದೂ ಘೋರವಾದದ್ದು. ಅದಕ್ಕೊಂದು ಉದಾಹರಣೆಯನ್ನು ಕೊಡಬಲ್ಲೆ. ಮೂರು ವರ್ಷಗಳ



ಕಂಡಹಾಗೆ

ಹಿಂದೆ ರಾಜ್ಯದ ಹಲವಾರು ವಿಶ್ವವಿದ್ಯಾಲಯಗಳಲ್ಲಿ, ಕಾಲೇಜುಗಳಲ್ಲಿ ಹಲವು ನಕ್ಸಲ್ ಪರವಿರುವ ಅಧ್ಯಾಪಕರು ವಿದ್ಯಾರ್ಥಿಗಳ ತಲೆ ಕೆಡಿಸುತ್ತಿದ್ದಾರೆ ಎಂದು ಸಂಘ ಪರಿವಾರದವರು ಆರೋಪಿಸಲಾರಂಭಿಸಿದರು. ಅಂದಿನ ಮುಖ್ಯಮಂತ್ರಿ ಧರಂಸಿಂಗ್‌ರವರು ಅಂತಹ ಅಧ್ಯಾಪಕರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಕೂಗಾಡಿದರು. ಅವರ ಗುರಿ ಇದ್ದದ್ದು-ಎಂದಿನಂತೆ-ಹಿಂದೂತ್ವವಾದವನ್ನು ವಿರೋಧಿಸುವ, ವೇದಿಕೆಯಲ್ಲಿ ಸಕ್ರಿಯವಾಗಿದ್ದ ಅಧ್ಯಾಪಕರ ಮೇಲೆ. ಸಂಘ ಪರಿವಾರದ ಇಂತಹ ಆರ್ಭಟಕ್ಕೆ ಸ್ಪಂದಿಸಿ ಸರ್ಕಾರವೇನಾದರೂ ಅಧ್ಯಾಪಕರ ವಿಚಾರಣೆ ನಡೆಸಲು ಮುಂದಾದರೆ ಅದು witch hunting ಆಗುತ್ತದೆ ಮತ್ತು ಶಿಕ್ಷಣ ಕೇಂದ್ರಗಳಲ್ಲಿರುವ ಮುಕ್ತ ವಾತಾವರಣ ಹಾಳಾಗುತ್ತದೆ ಎಂದು ನನ್ನಂಥವರು ವಾದಿಸಿದರೆ, ಗೋವಿಂದರಾಯರು, ಕೆ. ರಾಮದಾಸ್ ಮತ್ತು ಇತರರು ಏನು ಮಾಡಿದರು? ಬೆಂಗಳೂರಿನಲ್ಲಿ ಒಂದು ಪತ್ರಿಕಾ ಗೋಷ್ಠಿ ನಡೆಸಿ "ಅಧ್ಯಾಪಕರ ವಿಚಾರಣೆ ನಡೆಯಲಿ" ಎಂದು ಹೇಳಿದರು.

ಇದರಿಂದಾದ ಪರಿಣಾಮ ಏನೆಂದರೆ ಯಾರೋ ಚೆಡ್ಡಿ ಬರೆದ ಅನಾಮಿಕ ಪತ್ರವನ್ನಾಧರಿಸಿ ಹಲವಾರು ಪ್ರಗತಿಪರ ಅಧ್ಯಾಪಕರನ್ನು ಪೊಲೀಸರು ವಿಚಾರಣೆಗೊಳ ಪಡಿಸಿದ್ದು, ಪಟ್ಟಾಭಿರಾಮ ಸೋಮಯಾಜಿ ಬಗ್ಗೆ ಭಜರಂಗ ದಳದವರು ಹೀನವಾಗಿ ವರ್ತಿಸಿದ್ದು, ಸೋಮಯಾಜಿ ಪರವಾಗಿ ಕಾಲೇಜಿನ ಆಡಳಿತ ಮಂಡಳಿ ನಿಲ್ಲಲು ಹಿಂಜರಿದಿದ್ದು, ಒಂದು ವಿಶ್ವವಿದ್ಯಾಲಯದ ಅಧ್ಯಾಪಕರು ಗದ್ದರ್‌ರವರನ್ನು ಗುಪ್ತವಾಗಿ ಕರೆಸಿ ಸನ್ಮಾನಿಸಿದ್ದರು ಎಂಬಂತಹ ಆಧಾರರಹಿತ ವರದಿಗಳನ್ನು ಚೆಡ್ಡಿ ಪತ್ರಿಕೆಗಳು ಪ್ರಕಟಿಸಿದ್ದು.

ಸಾರಾಂಶದಲ್ಲಿ ಈ ಗಾಂಧಿವಾದಿಗಳು ತಾಳಿದ ನಿಲುವಿನಿಂದಾಗಿ ಗಾಂಧಿಯನ್ನು ಹತ್ಯೆ ಮಾಡಿದ ಸಂತತಿ ಯವರಿಗೇ ಪುಷ್ಟಿ ನೀಡಿದಂತಾಗಿತ್ತು. ಇವತ್ತು ವೇದಿಕೆ ಆತ್ಮವಿಮರ್ಶೆ ಮಾಡಿಕೊಂಡಿಲ್ಲ ಎಂದು ಆರೋಪಿಸುತ್ತಿರುವ ವರಿಗೆ ಕಿಂಚಿತ್ತಾದರೂ ಬುದ್ಧಿ ಇದ್ದಿದ್ದರೆ ಅಂದಿನ ಪ್ರಕರಣ ಗಳನ್ನು ಕಂಡು ಅವರೇ ಆತ್ಮ ವಿಮರ್ಶೆ ಮಾಡಿಕೊಳ್ಳುತ್ತಿದ್ದರು. ಅವರು ಮಾಡಿಕೊಂಡಿಲ್ಲ ಎಂಬುದಕ್ಕೆ ಪ್ರಸ್ತುತ ವಿವಾದವೇ ಸಾಕ್ಷಿ.


ನಕ್ಸಲ್‌ವಾದವನ್ನು ವಿರೋಧಿಸುವ ಭರದಲ್ಲಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಬಗ್ಗೆ ಇಲ್ಲ ಸಲ್ಲದ್ದನ್ನು ಆರೋಪಿಸಿ ಯಾವ ಕೋಮುವಾದಿ ಶಕ್ತಿಗಳನ್ನು ತಾವು ವಿರೋಧಿಸುತ್ತೇವೆ ಎನ್ನುತ್ತಾರೋ ಅದೇ ಕೋಮುವಾದಿ ಗಳನ್ನು ತಾವೇ ಬಲಿಷ್ಠಗೊಳಿಸುತ್ತಿದ್ದೇವೆ ಎಂಬ ಅರಿವೂ ಅವರಿಗೆ ಮೂಡಿಲ್ಲ ಎಂದರೆ ಏನನ್ನಬೇಕು?

ಕೊನೆಯದಾಗಿ, ಗೋವಿಂದರಾಯರೊಂದಿಗೆ ಸಹಿ ಹಾಕಿದ್ದ ಪತ್ರದ ರಚನೆಯಲ್ಲಿ ಮರುಳಸಿದ್ದಪ್ಪನವರ ಪಾತ್ರ ಹೆಚ್ಚೇನದ್ದಾಗಿರಲಿಲ್ಲ ಎಂದು ಭಾವಿಸಿದ್ದೇನೆ. ಏಕೆಂದರೆ ಆ ಪತ್ರದಲ್ಲಿ ತಾವು ವೇದಿಕೆಯಿಂದ ದೂರ ಸರಿದೆವು ಎಂದು ಹೇಳಲಾಗಿತ್ತಾದರೂ ಮರುಳಸಿದ್ದಪ್ಪನವರು ಇತ್ತೀಚೆಗೆ ಅಂದರೆ ಕಳೆದ ತಿಂಗಳು ಮೇ 27 ರಂದು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು ದಾವಣಗೆರೆಯಲ್ಲಿ ಏರ್ಪಡಿಸಿದ್ದ "ಟಿಪ್ಪು ಸುಲ್ತಾನ್ ಹುತಾತ್ಮ ದಿನಾಚರಣೆ" ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಂದಹಾಗೆ, ಚೆನ್ನಿಯವರು ಮೂರು ವರ್ಷಗಳ ಹಿಂದೆ ಹಾಗೂ ಗೋವಿಂದರಾಯರು ಎರಡು ವರ್ಷಗಳ ಹಿಂದೆ ವೇದಿಕೆಯಿಂದ ದೂರವಾದರೂ ಅದರಿಂದಾಗಿ ವೇದಿಕೆಯ ಚಟುವಟಿಕೆ ಹಾಗೂ ಕಾರ್ಯವ್ಯಾಪ್ತಿ ಯಾವ ರೀತಿ ಯಿಂದಲೂ ಕುಂದಿಲ್ಲ.

ಇದರರ್ಥ ವೇದಿಕೆಯ ಸೆಕ್ಯುಲರ್ ಆಶಯಗಳು ಜನರಿಗೆ ಬೇಕಿವೆ ಎಂದಲ್ಲವೆ? ಆದ್ದರಿಂದಲೇ ನಾವು ಎಂದೂ ಫ್ಯಾಸಿಸ್ಟ್-ಪೊಲೀಸ್ ದಬ್ಬಾಳಿಕೆಗೆ ಮಣಿಯುವುದಿಲ್ಲ.

-ಗೌರಿ ಲಂಕೇಶ್




ಇನ್ನು ಪರವಾ ಇಲ್ಲ, ಚೆನ್ನಿ ನಕ್ಸಲೈಟರಲ್ಲ

ಶ್ರೀಯುತ ರಾಜೇಂದ್ರ ಚೆನ್ನಿಯವರೇ,

ಪ್ರಜಾವಾಣಿ ಪತ್ರಿಕೆಯ ಲೇಖನದಲ್ಲಿ ನೀವು ಬರೆದಿರುವ ವಿಚಾರಗಳನ್ನು ಎಂದಾದರೂ ಕೋಮು ಸೌಹಾರ್ದ ವೇದಿಕೆಯ ಸಭೆಯಲ್ಲಿ ನೀವು ಪ್ರಸ್ತಾಪಿಸಿದ್ದರೆ ಬಹುಶಃ ಈ ಪತ್ರವನ್ನು ಹೀಗೆ ಬಹಿರಂಗವಾಗಿ ಬರೆಯುವ ಅಗತ್ಯ ಬರುತ್ತಿರಲಿಲ್ಲವೇನೋ?

ನಿಮ್ಮ ಲೇಖನ ಮತ್ತು ನಿಲುವಿನೊಂದಿಗಿನ ನಮ್ಮ ಸಮಸ್ಯೆ ಅಲ್ಲಿಂದಲೇ ಪ್ರಾರಂಭವಾಗುತ್ತದೆ. ನೀವಾಗಲೀ, ಜಿ.ಕೆ.ಗೋವಿಂದರಾವ್ ಅವರಾಗಲೀ ವೇದಿಕೆಯ ಸಭೆಗಳಲ್ಲಿ ಎಲ್ಲವನ್ನೂ ಸಂಪೂರ್ಣವಾಗಿ ನಿಯಂತ್ರಿಸುವ 'ಗುಂಪಿನ' ಬಗ್ಗೆ ಸಭೆಗಳಲ್ಲಿ ಪೂರ್ವ ನಿರ್ಧಾರಿತ ಅಜೆಂಡಾಗಳನ್ನು ಆ ಗುಂಪು ಒಪ್ಪಿಸಲಾಗುತ್ತಿರುವ ಬಗ್ಗೆ ಅಥವಾ ನಕ್ಸಲೀಯರ ಚಟುವಟಿಕೆಗಳಿಗೆ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ವೇದಿಕೆ ಬಳಕೆಯಾಗುತ್ತಿರುವುದರ ಬಗ್ಗೆ ಎಂದೂ ಮಾತಾಡಲಿಲ್ಲ. ವಾಸ್ತವದಲ್ಲಿ ನೀವು ವೇದಿಕೆಯ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಕಡಿಮೆ ಮಾಡಿಕೊಂಡ ಸಂದರ್ಭದಲ್ಲಿ ಇದೇ ಕ್ರಿಯಾಶೀಲ ಗುಂಪಿನ ಸಕ್ರಿಯ ಸದಸ್ಯರೊಬ್ಬರು ಈ ವಿಚಾರಗಳೂ ಸೇರಿದಂತೆ ಕೆಲವು ಅಂಶಗಳನ್ನು ಚರ್ಚಿಸಲು ಬಂದಾಗ ನೀವು ಹೇಳಿದ್ದೇ ಬೇರೆ. "ಆರೆಸ್ಸೆಸ್‌ನವರು ಹಲವಾರು ಬೆದರಿಕೆ ಪತ್ರಗಳನ್ನು ಬರೆಯುತ್ತಿದ್ದಾರೆ; ಮನೆಯಲ್ಲೂ ಆತಂಕಗೊಂಡಿದ್ದಾರೆ. ಸದ್ಯದಲ್ಲಿ ನಾನು ಬಹಿರಂಗವಾಗಿ ಹೆಚ್ಚು ಕಾಣಿಸಿಕೊಳ್ಳುವುದು ಬೇಡ" ಎಂದು ಹೇಳಿದ್ದಿರಿ. "ಬಹುಶಃ ಸಂದರ್ಭದ ಒತ್ತಡವಿರಬೇಕು, ಇರಲಿ ತೊಂದರೆಯಿಲ್ಲ" ಎಂದುಕೊಂಡೆವು.

ಅಲ್ಲಿಂದ ಮುಂದಕ್ಕೆ ನೀವು ಸೌಹಾರ್ದ ವೇದಿಕೆಯ ಜೊತೆ ಎಲ್ಲೂ ಬರಲಿಲ್ಲ. ಹಾಗಾದರೆ ಈ ಕ್ರಿಯಾಶೀಲ ಗುಂಪು ವೇದಿಕೆಯನ್ನು ನಿಯಂತ್ರಿಸುತ್ತಿದೆ ಎಂದು ನಿಮಗೆ ತಿಳಿದಿದ್ದು ಯಾವಾಗ? ಕೋಮು ಸೌಹಾರ್ದ ವೇದಿಕೆಯಂತಹ ವಿಶಾಲ ಒಕ್ಕೂಟಗಳು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ, ಬೇರೆ ಬೇರೆ ಇಶ್ಯೂಗಳ ಸುತ್ತ ರೂಪಿತವಾಗಿ ಕೆಲಸ ಮಾಡಿವೆ, ಮಾಡುತ್ತಲಿವೆ. ಹೆಚ್ಚು ಕಡಿಮೆ ಆ ಎಲ್ಲದರಲ್ಲೂ ಪ್ರಾರಂಭದಲ್ಲಿ ಒಂದಲ್ಲಾ ಒಂದು ರೀತಿಯ ಕ್ರಿಯಾಶೀಲ ಗುಂಪು (ಕೋರ್) ಕೆಲಸ ಮಾಡಿಯೇ ಇರುತ್ತದೆ. ಅಂತಹ ಕೋರ್, ಸಭೆಗಳಲ್ಲಿ ಚರ್ಚಿಸಲು ಒಂದು ಅಜೆಂಡಾವನ್ನು ಸಿದ್ಧಪಡಿಸಿಕೊಂಡೂ ಇರುತ್ತದೆ. ಆದರೆ ಈ ಕೋರ್ ತಾನೇ ಎಲ್ಲವನ್ನೂ ತೀರ್ಮಾನ ಮಾಡಿಬಿಡುತ್ತದೆಯೋ, ಸಭೆಯಲ್ಲಿ ಕೈಗೊಳ್ಳಬಹುದಾದ ನಿರ್ಣಯಗಳು ಪೂರ್ವ ನಿರ್ಧಾರಿತವಾಗಿರುತ್ತದೆಯೋ ಎನ್ನುವುದು ಗಮನಿಸಬೇಕಾದ ಸಂಗತಿ. ಅಷ್ಟು ಮಾತ್ರವಲ್ಲ ಬಹಳ ಬೇಗನೆ ಈ ಕೋರ್ ವಿಸ್ತಾರಗೊಳ್ಳಬೇಕು; ಮತ್ತು ಆ ವೇದಿಕೆಯ ಸಭೆಯಲ್ಲಿ ಆಯ್ಕೆಯಾಗುವ ಪದಾಧಿಕಾರಿಗಳೇ ಆ ಕೋರ್ ಆಗಬೇಕು ಮತ್ತು ನಿಧಾನಕ್ಕೆ ಇಡೀ ಒಕ್ಕೂಟವೇ ಅದರ ಕೋರ್ ಆಗಬೇಕು.



ಕೋಮು ಸೌಹಾರ್ದ ವೇದಿಕೆಯ ವಿಚಾರದಲ್ಲಿ ಇದು ಹೇಗಾಯಿತೆಂಬುದನ್ನು ಹೇಳುವ ಮೊದಲು ನಿಮ್ಮ ಮತ್ತು ಈ ಕ್ರಿಯಾಶೀಲ ಗುಂಪಿನ ನಡುವಿನ ಸಂಬಂಧ ಏನಾಗಿತ್ತೆಂಬುದನ್ನು ಹೇಳಬೇಕಿದೆ.

2002ರ ಡಿ.29ರಂದು ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿ ಸಮಾವೇಶದ ವೇದಿಕೆಯ ಮೇಲೆ ನೀವೂ ಸೇರಿದಂತೆ ಕರ್ನಾಟಕದ ಅನೇಕ ಪ್ರಮುಖ ಬರಹಗಾರರು, ಜನಪರ ಹೋರಾಟಗಾರರು ಒಟ್ಟಾಗಿದ್ದುದು ನಿಮಗೆ ಗೊತ್ತು. ಬಹುಶಃ ಮೊದಲ ಸಾಲಿನಲ್ಲೇ ಕೂತಿದ್ದ ಕೆ.ರಾಮದಾಸ್‌ರವರು ಕಾರ್ಯಕ್ರಮದ ನಡುವೆ ವೇದಿಕೆಯಿಂದ ಕೆಳಗಿಳಿದರು. ವೇದಿಕೆಯ ಮೆಟ್ಟಿಲುಗಳ ಮೇಲೆ ಕೂತಿದ್ದ ನಾನು ಅವರಿಗೆ ನಮಸ್ಕಾರ ಹೇಳಿದೆ. ನನಗೆ ಆಗ ಅಷ್ಟು ಪರಿಚಿತರಲ್ಲದ ರಾಮದಾಸ್ ಅವರು ಕಾರ್ಯಕ್ರಮದ ಬಗ್ಗೆಯೇ ಚರ್ಚಿಸುತ್ತಾ ವೇದಿಕೆಯ ಹಿಂಭಾಗಕ್ಕೆ ಕರೆದೊಯ್ದರು. ಸಿಗರೇಟು ಹಚ್ಚಿದ ಅವರು, ಅಲ್ಲಿ ಸಿಕ್ಕವರೊಬ್ಬರೊಡನೆ "ಇಂತಹ ಕಾರ್ಯಕ್ರಮವನ್ನು ನಾನು ಖಂಡಿತವಾಗಿ ನಿರೀಕ್ಷಿಸಿರಲಿಲ್ಲ; ಚೆನ್ನಿಯವರು ಈ ಹುಡುಗರನ್ನೆಲ್ಲ ಸೇರಿಸಿಕೊಂಡು ಇಂತಹ ಅದ್ಭುತ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ" ಎಂದರು. "ಚೆನ್ನಿ ಕೆಲವು ಹುಡುಗರನ್ನು ಕಟ್ಟಿಕೊಂಡು ಬಾಬಾಬುಡನ್‌ಗಿರಿ ಸಮಾವೇಶ ಮಾಡಿದರು" ಎಂದು ಇನ್ನೂ ಒಂದೆರಡು ಕಡೆಯಿಂದ ಕೇಳಿಬಂತು. ನಿಮಗೆ ನೆನಪಿರಬಹುದು; ಆ ಸಮಾವೇಶದ ವೇದಿಕೆಯ ಕಾರ್ಯಕ್ರಮವನ್ನು ಅಂತಿಮಗೊಳಿಸಿದ್ದು ನೀವು ಮತ್ತು ಇದೇ ಕ್ರಿಯಾಶೀಲ ಗುಂಪಿನ ಇಬ್ಬರು ಹುಡುಗರು. ಚಿಕ್ಕಮಗಳೂರಿನ ನಿಮ್ಮ ಅತ್ತೆ ಮನೆಯಲ್ಲಿ.

ಅಂದರೆ ಆಗ ಈ ಕ್ರಿಯಾಶೀಲ ಗುಂಪಿನಲ್ಲಿ ತಾವೂ ಒಬ್ಬರಾಗಿದ್ದಿರಿ (ಹಲವರ ಪ್ರಕಾರ ಅದರ ನಾಯಕರಾಗಿದ್ದಿರಿ). ಸಮಾವೇಶಕ್ಕಾಗಿ ಹತ್ತಾರು ದಿನ ಕಷ್ಟಪಟ್ಟು ದುಡಿದ, ನೂರಾರು ಕಾರ್ಯಕರ್ತರನ್ನು ತೊಡಗಿಸಿದ ಸಂಘಟನೆಗಳನ್ನು 'ಕೆಲವು ಹುಡುಗರು' ಎಂದು ಸಲೀಸಾಗಿ ಕರೆದು ಕ್ರೆಡಿಟ್‌ನಲ್ಲಿ ನಿಮಗೇ ಹೆಚ್ಚನ್ನು ನೀಡಿದಾಗ ನಾವು ಬೇಸರಗೊಳ್ಳಲಿಲ್ಲ, ಏಕೆಂದರೆ ಅಂದಿನಿಂದ ಇಂದಿನವರೆಗೆ ನಾವು ಪ್ರಾಮಾಣಿಕವಾಗಿ ನಂಬಿಕೊಂಡಿರುವುದೇನೆಂದರೆ 2002/03ರ ಸಮಾವೇಶಗಳನ್ನೂ ಒಳಗೊಂಡಂತೆ ಇದುವರೆಗಿನ ಸೌಹಾರ್ದ ವೇದಿಕೆಯ ಯಶಸ್ಸಿನ ಕ್ರೆಡಿಟ್ ಅದರಲ್ಲಿ ಭಾಗವಹಿಸಿದ ಎಲ್ಲ ಸಂಘಟನೆಗಳು ಮತ್ತು ವ್ಯಕ್ತಿಗಳಿಗೇ ಸೇರಬೇಕು. ನೀವು ಹೇಳುತ್ತಿರುವ ಕ್ರಿಯಾಶೀಲ ಗುಂಪು ಅದರಲ್ಲಿ ಒಂದು ವಿಶೇಷವಾದ ಮತ್ತು ಕೀಲಕವಾದ ಪಾತ್ರವನ್ನು ವಹಿಸಿದ್ದು ನಿಜವಾದರೂ ಅಂತಿಮವಾಗಿ ಆ ಸಮಾವೇಶದ ಇಂಪ್ಯಾಕ್ಟ್ ಇದ್ದದ್ದು ಅದರಲ್ಲಿ ಅಷ್ಟೆಲ್ಲಾ ಸಂಘಟನೆಗಳು/ವ್ಯಕ್ತಿಗಳು ಭಾಗ ವಹಿಸಿದ್ದುದರಲ್ಲಿ.

ಮತ್ತೆ ವೇದಿಕೆಯ ಕೋರ್ ಮತ್ತು ವೇದಿಕೆಯೊಳಗಿನ ಪ್ರಜಾತಾಂತ್ರಿಕ ಕಾರ್ಯವಿಧಾನದ ವಿಚಾರಕ್ಕೆ ಬರೋಣ. ಎರಡನೆಯ ಸಮಾವೇಶದ ಹೊತ್ತಿಗೆ ಎಲ್ಲಾ ತೀರ್ಮಾನಗಳನ್ನು ಸಭೆಯಲ್ಲಿಯೇ ಮಾಡಬೇಕೆನ್ನುವ ಮತ್ತು ಇನ್ನೂ ವಿವರವಾದ ಹಾಗೂ ನಿರ್ದಿಷ್ಟವಾದ ಚರ್ಚೆ ನಡೆಸಿ ತೀರ್ಮಾನ ಮಾಡಬೇಕಿದ್ದರೆ ಅದಕ್ಕೊಂದು ವಿವಿಧ ಸಂಘಟನೆಗಳ ಪ್ರತಿನಿಧಿಗಳು ಇರುವ ಉಪಸಮಿತಿಗಳನ್ನು ಮಾಡುವ ಪರಿಪಾಠ ಪ್ರಾರಂಭವಾಯಿತು. ಸಮಾವೇಶದ ಕುರಿತು ಸಮಗ್ರವಾಗಿ ಚರ್ಚಿಸಿ, ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಲುವಾಗಿ ರಾಜ್ಯಮಟ್ಟದ ಸಂಘಟನೆಗಳು ಮತ್ತು ಚಿಕ್ಕಮಗಳೂರಿನ ಪ್ರಮುಖ ಸಂಘಟನೆಗಳ ಪ್ರತಿನಿಧಿಗಳಿದ್ದ 'ಸಮಾವೇಶ ಸಂಘಟನಾ ಸಮಿತಿ'ಯು ರಚನೆಯಾಯಿತು. ಇದು ಒಕ್ಕೂಟದೊಳಗೆ ಪ್ರಜಾತಾಂತ್ರಿಕ ಕಾರ್ಯವಿಧಾನವನ್ನು ತರುವುದರಲ್ಲಿ ಆದ ಬೆಳವಣಿಗೆಯೇ. ಅಂದರೆ ಈ ರೀತಿಯ ಒಕ್ಕೂಟಗಳನ್ನು ರೂಪಿಸುವಲ್ಲಿ ಪ್ರಾರಂಭದಲ್ಲಿ (ನೀವೂ ಸೇರಿದಂತೆ ಇದ್ದ) ಇರುವ ಕ್ರಿಯಾಶೀಲ ಗುಂಪು (ಕೋರ್) ಈಗ ವಿಸ್ತರಣೆಯಾಗಿತ್ತು,

ಆದರೆ ಆ ವರ್ಷ ಹಿಂದಿನ ವರ್ಷದಷ್ಟು ಸಕ್ರಿಯರಾಗಿರದಿದ್ದ ತಾವು ಡಿ.28ರ ಸಮಾವೇಶದ ಹಿಂದಿನ ದಿನ ಹೇಗೆ ನಡೆದುಕೊಂಡಿರಿ ಎಂದು ನೆನಪಿದೆಯೇ? ನೀವು ಮತ್ತು ನಿಮ್ಮ ಇನ್ನೂ ಕೆಲವು ಸ್ನೇಹಿತರು ಒಂದು ಸಲಹೆಯನ್ನು ಮುಂದಿಟ್ಟಿರಿ. ಇಡೀ ಸಮಾವೇಶವನ್ನು ಉದ್ಘಾಟಿಸುವ ರೀತಿ ಮತ್ತು ಸಮಾವೇಶವನ್ನು ಏನೆಂದು ಕರೆಯಬೇಕೆಂಬುದನ್ನು ಈ ಹಿಂದೆ ನಿರ್ಧಾರವಾಗಿದ್ದಕ್ಕಿಂತ ಬೇರೆ ರೀತಿ ಮಾಡಬೇಕೆಂದು. ಇದು ಯಾವಾಗ? ಡಿ.27ರ ಮಧ್ಯರಾತ್ರಿ 12 ಗಂಟೆಗೆ. ಸಹಜವಾಗಿಯೇ ಕ್ರಿಯಾಶೀಲ ಗುಂಪು ಅದು ಸಾಧ್ಯವಿಲ್ಲವೆಂದು ಹೇಳಿತು. ಅದಕ್ಕೆ ಮುಖ್ಯ ಕಾರಣ ಇದು ವೇದಿಕೆಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಉಲ್ಲಂಘನೆಯಾಗುತ್ತದೆಂಬುದು. ಹಾಗೊಂದು ವೇಳೆ ಬದಲಾಯಿಸಬೇಕೆಂದರೂ ಇಡೀ ಸಂಘಟನಾ ಸಮಿತಿ ಸೇರಿ ಅದನ್ನು ತೀರ್ಮಾನಿಸಬೇಕೆಂದೂ, ಅದರಲ್ಲಿರುವ ಸಂಘಟನೆಗಳ ಹೆಸರನ್ನೂ ಹೇಳಿದೆವು. ನಿಮ್ಮ ಇತರ ಸ್ನೇಹಿತರು ನಾವು ಹೇಳಿದ್ದನ್ನು ಸಮರ್ಥಿಸತೊಡಗಿದಾಗ, ನೀವು ಹೇಗೆ ಪ್ರತಿಕ್ರಿಯಿಸಿದಿರೆಂದು ನಿಮಗೆ ನೆನಪಿದೆಯೇ?

"ಯಾವುದ್ರೀ ಅದು ಸಂಘಟನಾ ಸಮಿತಿ?" ಎಂದು ಪ್ರಾರಂಭಿಸಿ ಅದರಲ್ಲಿನ ವಿವಿಧ ಸಂಘಟನೆಗಳನ್ನು ಬಯ್ದಿರಿ. ಇಂದು ನೀವು ನಿಮ್ಮ ಲೇಖನದಲ್ಲಿ ಯಾವ ರೀತಿಯ ಚಳವಳಿಗಳು ಜಾಗತೀಕರಣದ ವಿರುದ್ಧದ ಮಹಾ ಹೋರಾಟಕ್ಕೆ ಸನ್ನದ್ಧವಾಗಬಲ್ಲ ಸಾಧ್ಯತೆಗಳನ್ನು ಹೊಂದಿವೆ ಎಂದು ಹೇಳಿದ್ದೀರೋ, ಅವೇ ಸಂಘಟನೆಗಳನ್ನು ಶಿವಮೊಗ್ಗದ ಛಾಯಾ ಹೋಟೆಲ್‌ನಲ್ಲಿ ನಡೆದ ವೇದಿಕೆಯ ಸಭೆಯಲ್ಲಿ "ಅವುಗಳ ಕಥೆ ಮುಗಿದಿದೆ, ಅವನ್ನು ನಂಬಿಕೊಂಡು ಯಾವ ಹೋರಾಟವನ್ನೂ ರೂಪಿಸಲಾಗದು" ಎಂದೂ ಅಪ್ಪಣೆ ಕೊಡಿಸಿದ್ದಿರಿ. ಇರಲಿ, ಆ ಸಂಘಟನೆಗಳ ಪಾತ್ರ ಕೋಮುವಾದ ವಿರೋಧಿ ಹೋರಾಟದಲ್ಲಿ ಮುಖ್ಯವೆಂದು ನಾವು ಅಂದೂ ಭಾವಿಸುತ್ತಿದ್ದೆವು. ಇಂದೂ ಅದೇ ಅಭಿಪ್ರಾಯವನ್ನು ಹೊಂದಿದ್ದೇವೆ.

ಪ್ರಜಾತಾಂತ್ರಿಕವಾಗಿ ರೂಪಿತವಾದ ಸಂಘಟನಾ ಸಮಿತಿಯ ಬಗ್ಗೆ ನೀವು ಈ ರೀತಿ ಹೇಳಿದಾಗ ನಿಮ್ಮ ಮೆದುಳು ಅಷ್ಟು ಕ್ರಿಯಾಶೀಲವಾಗಿರಲಿಲ್ಲವೆಂದು ರಾತ್ರಿಯ ಆ ಹೊತ್ತಿನಲ್ಲೂ ಕ್ರಿಯಾಶೀಲವಾಗಿದ್ದ ಗುಂಪು ಸಮಾಧಾನ ಮಾಡಿಕೊಂಡಿತು (ಇನ್ನರ್ಧ ಗಂಟೆಯಲ್ಲಿ ಬಂದಿಳಿಯುತ್ತಿದ್ದ ಸಾವಿರಾರು ಜನರನ್ನು ಸಂಭಾಳಿಸಬೇಕಿದ್ದ, ನಿಮ್ಮನ್ನು ಭಾವನಾತ್ಮಕವಾಗಿ ಅಭಿಮಾನಿಸುತ್ತಿದ್ದ ಒಬ್ಬಾತ ಮಾತ್ರ ಕಣ್ಣೀರು ಹಾಕಿದ್ದು ನಿಮಗೆ ಕಾಣಲಿಲ್ಲ; ನಿಮ್ಮೊಂದಿಗಿದ್ದ ಮತ್ತೊಬ್ಬ ಬುದ್ಧಿಜೀವಿ ಬರಹಗಾರರು ನಿಮಗೆ ಕಾಣದಂತೆ ಹೊರಗೆ ಬಂದು ಸಮಾಧಾನಿಸಿದರು). ಆದರೆ ಶಾಕ್ ಆಗಿದ್ದು ಯಾವಾಗೆಂದರೆ, 15 ತಿಂಗಳ ನಂತರ (ನಕ್ಸಲೀಯರ ನೆಪದಲ್ಲಿ ನಮ್ಮ ಮೇಲೆ ದಾಳಿ ನಡೆಯುತ್ತಿದ್ದ ಹೊತ್ತಿನಲ್ಲಿ) ಡಿ.27ರಂದು ನಿಮ್ಮ ಜೊತೆ ಅದೇ ಸಲಹೆಗಳನ್ನು ಮುಂದಿಟ್ಟಿದ್ದ ನಿಮ್ಮ ಸ್ನೇಹಿತರ ಜೊತೆ ನೀವು ಹೇಳಿದ ಮಾತಿನಿಂದ. "ಇವರು ಆ ರಾತ್ರಿ ನಾವು ಹೇಳಿದ ಸಲಹೆ ಯಾಕೆ ಒಪ್ಪಲಿಲ್ಲವೆಂದರೆ, ಇವರಿಗೆ ತಮ್ಮ ಭೂಗತ ನಾಯಕರ ಒಪ್ಪಿಗೆ ಬೇಕಿತ್ತಲ್ಲಾ, ಅದಕ್ಕೆ" ಎಂದು ನೀವು ಹೇಳಿದ್ದನ್ನು ಕೇಳಿದಾಗ. ಎತ್ತಣ ಭೂಗತರು? ಎತ್ತಣ ಬಾಬಾಬುಡನ್‌ಗಿರಿ ಸಮಾವೇಶ? ವಿವಿಧ ಸಂಘಟನೆಗಳಿಂದ ಕೂಡಿದ ಸಂಘಟನಾ ಸಮಿತಿಯನ್ನು ಮೀರಿ ನಾವಷ್ಟೇ ಅರ್ಧರಾತ್ರಿ ಮಂಪರಿನಲ್ಲಿ ಬಂದ ಸಲಹೆಯನ್ನು ಜಾರಿ ಮಾಡಲು ಸಾಧ್ಯವಿಲ್ಲ ಎಂದ ನಾವು ಹೇಳಿದರೆ ನೀವು ಅದನ್ನು ಎಲ್ಲಿಗೆ ಕೊಂಡೊಯ್ದಿರಿ? ಇರಲಿ ಬಿಡಿ ಮೇಷ್ಟರೇ, ನಿಮ್ಮ ಪ್ರಕಾರ "ನಿಮ್ಮಂತಹ ಬರಹಗಾರರ, ವ್ಯಕ್ತಿಗಳ ಬೆಂಬಲವಿಲ್ಲದೆ ನಾವೇ ಸ್ವಂತವಾಗಿ ಒಂದು ಸಣ್ಣ ಚಳವಳಿಯನ್ನೂ ಸಂಘಟಿಸುವ ಸಾಮರ್ಥ್ಯವಿಲ್ಲದ್ದರಿಂದ" ನಾವು ಅದನ್ನೂ ನುಂಗಿಕೊಂಡೆವು.


ಈ ಹಿಂದೆ ಗದ್ದರ್ ಶಿವಮೊಗ್ಗಕ್ಕೆ, ಕುವೆಂಪು ವಿಶ್ವವಿದ್ಯಾಲಯಕ್ಕೆ ಬಂದ ಸಂದರ್ಭದಲ್ಲಿ ನೀವೂ ಉತ್ಸಾಹದಿಂದ ಪಾಲ್ಗೊಂಡಿದ್ದಿರಿ. ಆಗ ನೀವು 'ತೃತೀಯ ಸ್ಪೇಸ್'ನಲ್ಲಲ್ಲದೆ ಸಂಪೂರ್ಣ ನಕ್ಸಲ್‌ವಾದದ 'ಪರವಾದ' ಸ್ಪೇಸ್‌ನಲ್ಲಿ ಇದ್ದಿರೇನು? ಆಂಧ್ರದ ನಕ್ಸಲೀಯ ನಾಯಕರ ಹತ್ಯೆಯನ್ನು ವಿರೋಧಿಸಿ ಶಿವಮೊಗ್ಗದಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಭಾಷಣ ಮಾಡಿದಾಗ ನೀವು ಯಾವ ಸ್ಪೇಸ್‌ನಲ್ಲಿ ಇದ್ದಿರಿ? (ಗೋವಿಂದರಾಯರು ಕೂಡ ಇದೇ ವಿಚಾರಕ್ಕೆ ಹೈದರಾಬಾದ್‌ಗೇ ಹೋಗಿ ಭಾಷಣ ಮಾಡಿದ್ದರು ಎಂಬುದು ನಿಮಗೆ ಗೊತ್ತಿರಲಿಕ್ಕಿಲ್ಲ). ಮಾನವ ಹಕ್ಕು ಉಲ್ಲಂಘನೆ ಆಂಧ್ರದಲ್ಲಿ ಆದರೆ ಅದನ್ನು ದಿಟ್ಟವಾಗಿ ಖಂಡಿಸಬೇಕು; ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನಡೆದಾಗ ಮಾತನಾಡುವುದು ಬೇಡ ಎಂದರೆ ಹೇಗೆ?

ನಿಮ್ಮಂತಹವರ ದೆಮಾಕ್ರಸಿಯ ಅನುಭವ ನಮಗೆ ಹೊಸದೇನೂ ಆಗಿರಲಿಲ್ಲ. ನಿಮ್ಮ ಸ್ನೇಹಿತರಾದ ಗೋವಿಂದರಾಯರ ಜೊತೆಯೂ ನಮಗೆ ಇಂತಹ ಅನುಭವವಿತ್ತು, ಸಣ್ಣದೊಂದು ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡುವ ಕೆಲಸಕ್ಕಾಗಿ ನಾನು ಅವರಿಂದ ದೆಮಾಕ್ರಟಿಕ್ ಆಗಿ ಒಪ್ಪಿಗೆ ಪಡೆಯಬೇಕಿತ್ತು, ತನಗೆ ಮೂಡ್ ಇಲ್ಲವೆಂದು ಒಮ್ಮೆ, ನಾವು ಬರೆದುಕೊಂಡು ಹೋಗಿದ್ದನ್ನು ತಿದ್ದುಪಡಿ ಮಾಡಿ ಕೊಡಲು ಮತ್ತೊಮ್ಮೆ, ಅದನ್ನು ಟೈಪ್ ಮಾಡಿಸಿದ್ದನ್ನು ಕೊಡಲೊಮ್ಮೆ, ಅದರ ಮೇಲೆ ಅವರು ಸಹಿ ಮಾಡಿದ ಮೇಲೆ ಪಡೆಯಲೊಮ್ಮೆ.... ಹೀಗೆ ನಾಲ್ಕು ಬಾರಿ ಅವರ ಮನೆಗೆ ತಿರುಗಬೇಕಾಯಿತು. ಇದನ್ನೆಲ್ಲ ಗಮನಿಸುತ್ತಿದ್ದ ಬರಹಗಾರರೊಬ್ಬರು "ದೆಮಾಕ್ರಟಿಕ್ ಆಗಿರುವುದು ಅಂದರೆ ನಾಯಿಪಾಡು ಅಂತ ಕಣ್ರೀ" ಎಂದು ತಮಾಷೆಯನ್ನು ಮಾಡಿದ್ದರು.

"ಹೀಗಾಗಿ ನನ್ನ ಅನುಭವವನ್ನೇ ಆಧಾರವಾಗಿ ಇಟ್ಟುಕೊಂಡು ಹೇಳುವುದಾದರೆ ಕೋಮು ಸೌಹಾರ್ದ ವೇದಿಕೆಯಲ್ಲಿ ಅಕ್ಷರಶಃ ನೂರಾರು ಸಂಘ-ಸಂಸ್ಥೆಗಳು ಪಾಲುಗೊಳ್ಳುವುದು ನಿಜವಾದರೂ ಅವನ್ನು ಸಂಪೂರ್ಣವಾಗಿ ನಿಯಂತ್ರಿಸುತ್ತಿರುವುದು ಒಂದು ಚಿಕ್ಕ ಗುಂಪು" ಎಂದು ಹೇಳಿದ್ದೀರಿ. ಅಂದರೆ ಈ ನೂರಾರು ಸಂಘ-ಸಂಸ್ಥೆಗಳು, ನಿಮ್ಮ ನಿರ್ಗಮನದ ನಂತರವೂ ಮುಂದುವರೆಯುತ್ತಿರುವ ಚಿಂತಕರು, ಬರಹಗಾರರು ಈ ರೀತಿ ಚಿಕ್ಕ ಗುಂಪೊಂದು ಸಂಪೂರ್ಣವಾಗಿ ನಿಯಂತ್ರಿಸುತ್ತಿದ್ದಾಗ ಬಾಯಿ ಮುಚ್ಚಿಕೊಂಡು ಕುಂತಿದ್ದರು ಎಂದಲ್ಲವೇ? "ಪೂರ್ವ ನಿರ್ಧಾರಿತವಾದ ಅಜೆಂಡಾವೊಂದನ್ನು ಮಂಡಿಸಿ ಒಪ್ಪಿಸಲಾಗುತ್ತದೆಂದು" ಹೇಳಿದ್ದೀರಿ. ಸಭೆಗೆ ಬರುವವರೆಲ್ಲರೂ ಕುರುಡರಂತೆ ಒಪ್ಪಿಬಿಡುತ್ತಾರೆಂದು ನೀವು ತಿಳಿದಿದ್ದೀರಾ? ಇದು ನೀವು ಅವರೆಲ್ಲರಿಗೂ ಮಾಡುತ್ತಿರುವ ಅವಮಾನವಲ್ಲವೇ?

ವಾಸ್ತವದಲ್ಲಿ ವೇದಿಕೆಯ ಸಭೆಯೊಳಗೆ ಈ ವಿಚಾರಗಳು ಚರ್ಚೆಗೆ ಬಂದಿವೆ. ಒಂದೇ ಸಂಘಟನೆಯ ಡಾಮಿನೇಶನ್ ವಿಚಾರ, ಯಾವುದಾದರೂ ಒಂದು ಸಿದ್ಧಾಂತದ ಹೇರಿಕೆ, ರಾಜಕಾರಣಿಗಳ ಜೊತೆ ಸಂಬಂಧ, ವಂತಿಗೆಯನ್ನು ಯಾರಿಂದ ಪಡೆಯಬೇಕು, ಯಾರಿಂದ ಪಡೆಯಬಾರದು ಇತ್ಯಾದಿ ಎಲ್ಲಾ ವಿಚಾರಗಳು ಚರ್ಚೆಗೊಳಪಟ್ಟು ನಿರ್ಣಯಗಳಾಗಿವೆ. ಒಬ್ಬರ ಬದಲಿಗೆ ವಿಭಿನ್ನ ಹಿನ್ನೆಲೆಯ ಮೂವರು ಕಾರ್ಯದರ್ಶಿಗಳಿರಬೇಕೆಂದು ತೀರ್ಮಾನವಾಯಿತು. ಈ ವರ್ಷದ ಮೇ ತಿಂಗಳಲ್ಲಿ ದಾವಣಗೆರೆಯ ಸಭೆಯಲ್ಲೂ ಸಹ ಅನೇಕ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿ ಅವನ್ನು ಚರ್ಚಿಸಲಾಯಿತು. ಈ ಭಿನ್ನಾಭಿಪ್ರಾಯಗಳು ಮತ್ತು ಅವು ಚರ್ಚೆಗೊಳಗಾಗುವುದು ವೇದಿಕೆಯನ್ನು ಮತ್ತಷ್ಟು ಪ್ರಜಾತಾಂತ್ರಿಕಗೊಳಿಸುವುದೆಂದೇ ನಾವು ಭಾವಿಸುತ್ತೇವೆ. ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಬರುವ ಪ್ರತಿನಿಧಿಗಳು ಇಡೀ ದಿನ- ಕೆಲವೊಮ್ಮೆ ಎರಡು ದಿನ- ಕೂತು ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳುತ್ತಾರೆ. ಸಭೆಗೆ ಬಾರದವರಿಗೂ ಸೇರಿದಂತೆ ವೇದಿಕೆಯ ಜೊತೆ ಅಸೋಸಿಯೇಟ್ ಮಾಡಿಕೊಂಡ 600ಕ್ಕೂ ಹೆಚ್ಚು ಜನರಿಗೆ ನಿರ್ಣಯಗಳನ್ನು ತಲುಪಿಸಲಾಗುತ್ತದೆ. ಅಂದರೆ ಪ್ರಾರಂಭದಲ್ಲಿ ಕೋರ್‌ನಲ್ಲಿದ್ದುದು ಒಂದು ಚಿಕ್ಕ ಗುಂಪಾಗಿದ್ದುದು ಹೌದಾದರೂ (ಆರಂಭಕ್ಕೆ ಅದು ಸಹಜವೇ ಆದರೂ) ಈಗ ಇಡೀ ವೇದಿಕೆಯ ಎಲ್ಲಾ ಸಹಭಾಗಿಗಳೂ ಸೇರಿಯೇ ಅದರ ಕೋರ್ ಆಗಿರುವುದು.

ಇಂತಹ ಪ್ರಜಾತಾಂತ್ರಿಕ ವೇದಿಕೆಯ ಮೇಲೆ ಪೂರ್ವನಿರ್ಧಾರಿತ ಅಜೆಂಡಾವನ್ನು ಹೇರಲಾಗಿದೆಯಾ? ನಕ್ಸಲೀಯರ ಪರವಾಗಿ ಅಥವಾ ಕೋಮುಸೌಹಾರ್ದದ ಆಶಯಕ್ಕೆ ವಿರುದ್ಧವಾಗಿ ಒಂದೇ ಒಂದು ಅಜೆಂಡಾವನ್ನು ತರಲಾಗಿದೆಯಾ? ಇದನ್ನು ಸಾಬೀತುಪಡಿಸಬೇಕಾದ ಹೊಣೆ ನಿಮ್ಮ ಮೇಲಿದೆಯೆಂಬುದನ್ನು ಮರೆಯಬೇಡಿ. ನಿಮಗೆ ನೆನಪಿದೆಯೋ ಇಲ್ಲವೋ ಗೊತ್ತಿಲ್ಲ. 2002ರ ಸಮಾವೇಶದ ಸಂದರ್ಭದಲ್ಲಿ ಶಿವಮೊಗ್ಗ ಕೇಂದ್ರಿತವಾಗಿ ಕೆಲಸ ಮಾಡುತ್ತಿದ್ದ ಸಂಘಟನೆಗಳು ಮತ್ತು ವ್ಯಕ್ತಿಗಳು ಹೆಚ್ಚಿನ ಪಾತ್ರ ವಹಿಸಿದ್ದವು. 2003ರ ಸಮಾವೇಶವನ್ನು ಚಿಕ್ಕಮಗಳೂರಿನಲ್ಲಿ ಮಾಡುವುದು ಹೆಚ್ಚು ತ್ರಾಸದಾಯಕವಾಗಿರುತ್ತದಾದ್ದರಿಂದ ಈ ಬಾರಿ ಶಿವಮೊಗ್ಗದಲ್ಲಿ ನಡೆಸುವುದು ಒಳಿತು ಎಂದು ನೀವು ಹೇಳುತ್ತಿರುವ ಕ್ರಿಯಾಶೀಲ ಗುಂಪು ಪ್ರಸ್ತಾಪವನ್ನಿಟ್ಟು ಅದು ಮೊದಲ ಸಭೆಯಲ್ಲಿ ಒಪ್ಪಿತವೂ ಆಗಿತ್ತು. ಆದರೆ ಎರಡನೆಯ ಸಭೆಯಲ್ಲಿ ಅದು ಚಿಕ್ಕಮಗಳೂರೇ ಆಗಬೇಕೆಂದು ಹಲವಾರು ಜನರು



ನಂದಗುಡಿ ಹಿಂದಿರುವ ಡೀಲ್ ಏನು?

ಮುಖ್ಯಮಂತ್ರಿ ಕುಮಾರಸ್ವಾಮಿಯ ತಲೆ ನೆಟ್ಟಗಿಲ್ಲವೋ, ನಾಲಿಗೆ ಮೇಲೆ ಹಿಡಿತವಿಲ್ಲವೋ ಅಥವಾ ಆತನ ಕಪಟಬುದ್ಧಿಯೋ ಎಂಬುದು ಆ 'ಪರಮಾತ್ಮ' ದೇವೇಗೌಡನೇ ಬಲ್ಲ. ಆದರೆ ಕುಮಾರಸ್ವಾಮಿಯಂತೂ ಇವತ್ತು ರಾಜ್ಯದ ರೈತರಿಗೆ ಒಂದು ದೊಡ್ಡ ಕಂಟಕ ಎಂಬುದಂತೂ ಸ್ಪಷ್ಟ. ಏಕೆಂದರೆ ಒಂದೆಡೆ ಆತ್ಮಹತ್ಯೆಗೆ ಶರಣಾಗುತ್ತಿರುವ ರೈತರನ್ನು ಮುಖ್ಯಮಂತ್ರಿಗೆ ರಕ್ಷಿಸಲಾಗುತ್ತಿಲ್ಲ. ಇನ್ನೊಂದೆಡೆ ಬೇಕಂತಲೇ ಇನ್ನೂ ಹೆಚ್ಚಿನ ರೈತರನ್ನು ಆತ್ಮಹತ್ಯೆಯತ್ತ ದೂಡುವ ಪ್ರಯತ್ನವನ್ನು ಕೈಬಿಡಲಾಗುತ್ತಿಲ್ಲ.

ಇಲ್ಲವಾದರೆ ನಂದಗುಡಿಯ 36 ಹಳ್ಳಿಗಳಲ್ಲಿನ ಸಾವಿರಾರು ರೈತರನ್ನು ಒಕ್ಕಲೆಬ್ಬಿಸಿ, ಅವರ ಜೀವನಕ್ಕೆ ಆಧಾರವಾಗಿರುವ 12,350 ಎಕರೆ ಭೂಮಿಯನ್ನು ಸ್ಕಿಲ್ ಎಂಬ ಖಾಸಗಿ ಕಂಪನಿಗೆ ದಯಪಾಲಿಸಲು ಕುಮಾರಸ್ವಾಮಿ ಸಂಚು ರೂಪಿಸುತ್ತಿರಲಿಲ್ಲ. ಅದೂ ಎಂತಹ ಸಂಚು ಅಂತೀರಿ. ದಕ್ಷತೆ ಮತ್ತು ನಿಷ್ಠುರತೆಗೆ ಖ್ಯಾತಿ ಗಳಿಸಿರುವ ರೆವಿನ್ಯೂ ಇಲಾಖೆಯ ಹಿರಿಯ ಅಧಿಕಾರಿ ಎಸ್.ಎಂ. ಜಾಮದಾರ್‌ರವರು "ಇಷ್ಟೊಂದು



ಪ್ರಮಾಣದಲ್ಲಿ ಬೆಳೆಬಾಳುವ ಭೂಮಿಯನ್ನು ಸ್ಕಿಲ್ ಗುತ್ತಿಗೆ ಆಧಾರದ ಮೇಲೆ ಕಂಪನಿಗೆ ನೀಡಲಾಗುವುದಿಲ್ಲ" ಎಂದು ಆಕ್ಷೇಪ ವ್ಯಕ್ತಪಡಿಸಿದ್ದರೂ, ನಗರಾಭಿವೃದ್ಧಿ ಇಲಾಖೆಯ ಅಧಿಕಾರಿ ಎಂ.ಎಸ್. ಪ್ರೇಮಚಂದ್‌ರವರು ನಂದಗುಡಿ ಯೋಜನೆಯೇ ಸೂಕ್ತವಲ್ಲ ಎಂದು ತಿಳಿಸಿದ್ದರೂ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಸುಧೀರ್ ಕೃಷ್ಣರವರು ಬಿಎಂಆರ್‌ಡಿಎ ಇದೇ ಸ್ಥಳದಲ್ಲಿ ಒಂದು ಯೋಜನೆಯನ್ನು ಈಗಾಗಲೇ ಕೈಗೆತ್ತಿಕೊಂಡಿರುವುದರಿಂದ ಸ್ಕಿಲ್‌ಗೆ ಅನುಮತಿ ನೀಡಲಾಗುವುದಿಲ್ಲ ಎಂದು ಪತ್ರ ಬರೆದಿದ್ದರೂ ಕುಮಾರಸ್ವಾಮಿ ನೇತೃತ್ವದ ಸಮಿತಿಯು ಈ ಯೋಜನೆಗೆ ಅನುಮತಿ ನೀಡಿದೆ.

ಅಷ್ಟೇ ಅಲ್ಲ, ಕುಮಾರಸ್ವಾಮಿಯ ಭಂಡತನ ಯಾವ ಮಟ್ಟದ್ದು ಎಂದರೆ, ಜೂನ್ 15ರಂದು ಕುಮಾರಸ್ವಾಮಿ ನೇತೃತ್ವದ ಸಚಿವ ಸಂಪುಟ ನಂದಗುಡಿಯಲ್ಲಿ ವಿಶೇಷ ಆರ್ಥಿಕ ವಲಯ (SEZ) ನಿರ್ಮಿಸಲು 12,350 ಎಕರೆಗಳನ್ನು ನೀಡುವುದಾಗಿ ಒಪ್ಪುತ್ತದೆ. ಆದರೆ ಅದಾದ ಮೂರು ದಿನಗಳ ನಂತರ (ಜೂನ್ 18 ರಂದು) ಹಾಸನದ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಾ "ಯಾವುದೇ ಕಾರಣಕ್ಕೂ ಸರ್ಕಾರ ರೈತರ ಭೂಮಿಯನ್ನು ಕಿತ್ತುಕೊಂಡು ಖಾಸಗಿ ಕಂಪನಿಯವರಿಗೆ ಕೊಡುವುದಿಲ್ಲ" ಎಂದು ಗುಡುಗಿ ಅಮಾಯಕ ಜನರಿಂದ ಚಪ್ಪಾಳೆ ಗಿಟ್ಟಿಸುತ್ತಾರೆ.

ಆದರೆ ಅವರು ಎಂತಹ ಸುಳ್ಳು ಹೇಳಿದ್ದಾರೆಂದರೆ, ಈ ಸಾರ್ವಜನಿಕ ಸಭೆ ನಡೆದ ಒಂದು ವಾರದೊಳಗೇ ಸ್ಕಿಲ್ ಕಂಪನಿಯವರು ತಮ್ಮ SEZ ಗೆ 'ರಾಜ್ಯ ಸರ್ಕಾರದ ಅನುಮತಿ ಪತ್ರ' ನೀಡಿರುವುದನ್ನು ಹಿಡಿದು ದೆಹಲಿಯಲ್ಲಿರುವ ಬೋರ್ಡ್ ಆಫ್ ಅಪ್ರೂವಲ್ ಮುಂದೆ ಹಾಜರಾಗುತ್ತಾರೆ.

ಆದರೆ ನಂದಗುಡಿ ರೈತರ ಪುಣ್ಯ: ಬೋರ್ಡ್ ಆಫ್ ಅಪ್ರೂವಲ್ ರಾಜ್ಯ ಸರ್ಕಾರ ಮತ್ತು SEZ ಸ್ಥಾಪಿಸುತ್ತಿರುವ ಸ್ಕಿಲ್ ಕಂಪನಿಯಿಂದ ಹಲವು ಸ್ಪಷ್ಟೀಕರಣಗಳನ್ನು ಬಯಸಿ ತನ್ನ ನಿರ್ಧಾರವನ್ನು ಮುಂದಕ್ಕೆ ಹಾಕುತ್ತದೆ.

ಇಲ್ಲೊಂದು ವಿಷಯವನ್ನು ಗಮನಿಸಬೇಕು. SEZ ಗಳ ಸ್ಥಾಪನೆ ಕುರಿತಂತೆ ಈಗಾಗಲೇ ಮಂತ್ರಿಗಳ ಸಭೆಯೊಂದು ತೆಗೆದುಕೊಂಡಿರುವ ನಿರ್ಧಾರದ ಪ್ರಕಾರ ಯಾವುದೇ ಕ್ಷೇತ್ರದ SEZ ಗೆ 5000 ಎಕರೆಗಳಿಗಿಂತ ಹೆಚ್ಚು ಭೂಮಿಯನ್ನು ನೀಡುವಂತಿಲ್ಲ. ಹೀಗಿದ್ದರೂ ಮಣ್ಣಿನ ಮೊಮ್ಮಗ ಕುಮಾರಸ್ವಾಮಿ ಸ್ಕಿಲ್ ಕಂಪನಿಗೆ ಬರೋಬ್ಬರಿ 12,350 ಎಕರೆಯನ್ನು ದಯಪಾಲಿಸುತ್ತಾರೆ. ಏಕೆಂದರೆ, ಅದೇನು ಅವರ ಮನೆ ಆಸ್ತಿ ಅಲ್ಲವಲ್ಲ, ಬದಲಾಗಿ ರೈತರು ತಮ್ಮ ಜೀವನೋಪಾಯಕ್ಕೆ ಅವಲಂಬಿಸಿರುವ ಭೂಮಿ. "ರೈತ ಸತ್ರೆ ಸಾಯಲಿ" ಎನ್ನುವವರಿಂದ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ?

ಅಂದಹಾಗೆ ಮಂತ್ರಿಗಳ ಸಭೆಯ ಇನ್ನೊಂದು ನಿರ್ಣಯ ಯಾವುದೆಂದರೆ, ಯಾವ ಪ್ರದೇಶದಲ್ಲಿ ಎರಡು ಅಥವಾ ಅದಕ್ಕಿಂತಲೂ ಹೆಚ್ಚು ಬೆಳೆ ಬೆಳೆಯುತ್ತಾರೋ ಅಂಥವುಗಳನ್ನು SEZ ಗೆ ನೀಡುವಂತಿಲ್ಲ. ಆದರೆ ನಂದಗುಡಿಯಲ್ಲಿನ ಬಹಳಷ್ಟು ರೈತರು ವರ್ಷಪೂರ್ತಿ ತರಕಾರಿಗಳನ್ನು ಬೆಳೆಯುತ್ತಾರೆ, ಅವುಗಳನ್ನೇ ಬೆಂಗಳೂರಿನ ಜನರಿಗೆಂದು ಸರಬರಾಜು ಮಾಡುತ್ತಾರೆ. ಇಂತಹ ಪ್ರದೇಶವನ್ನು SEZ ಗೆ ನೀಡಿರುವುದು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಆದರೆ ರೈತರು ಬೀದಿಪಾಲಾದರೇನು? ಬೆಂಗಳೂರಿಗರಿಗೆ ತರಕಾರಿ ಸಿಗದಂತಾದರೇನು? ಸ್ಕಿಲ್ ಎಂಬ ಖಾಸಗಿ ಕಂಪನಿಗೆ ನೀಡಿ ಕೃತಾರ್ಥರಾದರೆ ಸಾಕು ಕುಮಾರಸ್ವಾಮಿಗೆ.

ರಾಜ್ಯ ಸರ್ಕಾರ ಉಲ್ಲಂಘಿಸಿರುವ ಇನ್ನೊಂದು ನಿಯಮ ಯಾವುದೆಂದರೆ "ಎಲ್ಲಾ ಭೂಮಾಲೀಕರ ಒಪ್ಪಿಗೆ ಪಡೆದ ನಂತರವೇ ಅದನ್ನು SEZ ಗೆ ನೀಡಬೇಕು" ಎಂಬುದು. ಆದರೆ ನಂದಗುಡಿಯ ರೈತರು ತಾವು ತಮ್ಮ ಭೂಮಿಯನ್ನು ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರಲ್ಲದೇ ನಂದಗುಡಿಯನ್ನು ಇನ್ನೊಂದು ನಂದಿಗ್ರಾಮವನ್ನಾಗಿಸುವ ಹೋರಾಟವನ್ನು ಪ್ರಾರಂಭಿಸುವುದಾಗಿ ಘೋಷಿಸಿದ್ದಾರೆ. ಇದ್ಯಾವುದರ ಬಗ್ಗೆಯೂ ಕುಮಾರಸ್ವಾಮಿ ಕ್ಯಾರೆ ಅನ್ನುತ್ತಿಲ್ಲ.

ಕುಮಾರಸ್ವಾಮಿ ಇದ್ಯಾವುದನ್ನೂ ತನ್ನ ಸ್ವಂತ ಹಿತಾಸಕ್ತಿಯನ್ನು ಕಡೆಗಣಿಸಿ ಮಾಡಿರುವುದಿಲ್ಲ ಎಂಬುದು ವೇದವಾಕ್ಯ. ಹಾಗಾದರೆ ರೈತರ 12,350 ಎಕರೆಗಳನ್ನು ಸ್ಕಿಲ್ ನೀಡುವುದರ ಹಿಂದಿನ ಲೆಕ್ಕಾಚಾರಗಳೇನು? ಒಂದು ಎಕರೆಗೆ ಕನಿಷ್ಠ ಹತ್ತು ಲಕ್ಷ ರೂಪಾಯಿಗಳ ಕಿಕ್‌ಬ್ಯಾಕ್ ಅಂದರೂ ಅದೇ ಕೋಟ್ಯಂತರ ರೂಪಾಯಿಗಳಾಗುತ್ತದೆ. ಹಾಗಾದರೆ ಕುಮಾರಸ್ವಾಮಿಗೆ ಬರಲಿರುವ ಹಣವೆಷ್ಟು?

ಈ ಕತೆ ಇಲ್ಲಿಗೇ ಅಂತ್ಯಗೊಳ್ಳುವುದಿಲ್ಲ. ನಂದಗುಡಿಯ ರೈತರ ಪ್ರತಿಭಟನೆಯ ಫಲವಾಗಿ ಸ್ಕಿಲ್‌ಗೆ 12,350 ಎಕರೆಗಳು ಸಿಗದಿರಬಹುದು. ಆದರೆ ಅದರಲ್ಲಿ 4,745 ಎಕರೆಗಳಂತೂ ಸಿಕ್ಕೇ ಸಿಗುತ್ತದೆ. ಏಕೆ ಗೊತ್ತಾ? ಕುಮಾರಸ್ವಾಮಿಯ ಸಚಿವ ಸಂಪುಟವು ನಂದಗುಡಿಯಲ್ಲಿರುವ ಸರ್ಕಾರದ 4,745 ಎಕರೆಗಳನ್ನು 'ಮಾರ್ಕೆಟ್ ಬೆಲೆ'ಗೆ ಮಾರುವುದೆಂದು ನಿರ್ಧರಿಸಿದೆ. ವಾಸ್ತವವಾಗಿ ಇಂದು ಆ ಪ್ರದೇಶದಲ್ಲಿ ಎಕರೆಗೆ 70 ಲಕ್ಷದಿಂದ ಒಂದು ಕೋಟಿ ರೂಪಾಯಿಗಳ ಬೆಲೆ ಇದ್ದರೂ ಸರ್ಕಾರ ಮಾತ್ರ ಎಕರೆಗೆ ನಲವತ್ತರಿಂದ ಐವತ್ತು ಲಕ್ಷ ಎಂದು ನಿರ್ಧರಿಸಿದೆ. ಅಂದರೆ ಅರ್ಧ ರೇಟಿಗೆ ಸರ್ಕಾರಿ ಭೂಮಿ ಸ್ಕಿಲ್ ಕಂಪನಿಯ ಪಾಲಾಗುತ್ತದೆ. ಹಾಗಾದಾಗ, ಇನ್ನರ್ಧ ದುಡ್ಡಿನಲ್ಲಿ ಅದೆಷ್ಟು ಕುಮಾರಸ್ವಾಮಿಗೆ ತೀರ್ಥವಾಗಿ, ಪ್ರಸಾದವಾಗಿ ಸಿಗುತ್ತದೋ ಬಲ್ಲವರ್‍ಯಾರು?

ಕೊನೆ ಮಾತು: ಹೀಗೆ ನಂದಗುಡಿಯನ್ನು ಕಬಳಿಸಲು ಸಜ್ಜಾಗಿ ನಿಂತಿರುವ ಸ್ಕಿಲ್ ಕಂಪನಿಯು ಈಗಾಗಲೇ ರಾಮನಗರದಲ್ಲೂ, ಸೋಲೂರಿನಲ್ಲೂ ಇಂಥದ್ದೇ SEZ ಗಳನ್ನು ಸ್ಥಾಪಿಸುತ್ತೇವೆಂದು ಅರ್ಜಿ ಸಲ್ಲಿಸಿದೆ. ಅಂದರೆ ನಂದಗುಡಿಯ ರೈತರ ದುರ್ಗತಿಯೇ ಈ ಪ್ರದೇಶಗಳ ರೈತರಿಗೂ ಕಾದಿದೆ. ಎಲ್ಲರೂ ಈಗಿಂದೀಗಲೇ ಎಚ್ಚರ ವಹಿಸುವುದೊಳಿತು! ■

► ಹೇಳಿದ್ದರಿಂದ ಅದೇ ತೀರ್ಮಾನವಾಯಿತು ಮತ್ತು ಅದನ್ನೇ ಹೃತ್ಪೂರ್ವಕವಾಗಿ ಜಾರಿ ಮಾಡಲಾಯಿತು. 2003ರ ಸಮಾವೇಶಕ್ಕೆ ಗದ್ದರ್ ಅವರನ್ನು ಕರೆಸುವುದು ಬೇಡ ಎಂಬುದು ನಮ್ಮ ಪ್ರಸ್ತಾಪವಾಗಿತ್ತು ಆದರೆ ಅದೂ ಸಭೆಯಲ್ಲಿ ಬಿದ್ದು ಹೋಗಿತ್ತು. ಇಂತಹ ಉದಾಹರಣೆಗಳು ಇನ್ನೂ ಹಲವಿವೆ.

ಹಾಗೆಯೇ ವೇದಿಕೆಯು "ಈವರೆವಿಗೂ ತನ್ನ ಬಗ್ಗೆ ಸೂಕ್ಷ್ಮವಾಗಿ, ವಿಮರ್ಶಾತ್ಮಕವಾಗಿ ಚಿಂತಿಸಿಯೇ ಇಲ್ಲ" ಎಂಬ ತಮ್ಮ ಇನ್ನೊಂದು ಅಭಿಪ್ರಾಯವೂ ವಾಸ್ತವ ಸಂಗತಿಗಳ ಬಗ್ಗೆ ಯಾವ ಮಾಹಿತಿಯೂ ಇಲ್ಲದೆ ಮಾಡಿರುವ ಹೇಳಿಕೆಯಷ್ಟೇ. ಈ ವಾಕ್ಯಕ್ಕೆ ಮುಂಚೆ ನೀವೇ ಬರೆದಿರುವ ಈ ನಾಲ್ಕು ಸಾಲುಗಳನ್ನು ಗಮನಿಸಿ: "ಕರ್ನಾಟಕದ ಇತ್ತೀಚಿನ ಇತಿಹಾಸದಲ್ಲಿ ಕೋಮು ಸೌಹಾರ್ದ ವೇದಿಕೆಯು ಕೋಮುವಾದದ ವಿರುದ್ಧ ನಡೆಸಿದ ಚಳವಳಿ ಅತ್ಯಂತ ಮಹತ್ವಪೂರ್ಣ ಸಾಮಾಜಿಕ, ಸಾಂಸ್ಕೃತಿಕ ಚಳವಳಿಯಾಗಿದೆ. ಅದರ ಕ್ರಿಯಾಶೀಲತೆ, ಸದಸ್ಯ ಸಂಸ್ಥೆಗಳ ವೈವಿಧ್ಯ, ಅದು ಹುಟ್ಟು ಹಾಕಿದ ಚರ್ಚೆಗಳು, ಪ್ರಶ್ನಿಸಿದ ಕಥನಗಳು ಅಪೂರ್ವವಾಗಿವೆ. ಅಂತೆಯೇ ಅದು ಕನ್ನಡದ ಕ್ರಿಯಾಶೀಲ ಮನಸ್ಸುಗಳಿಗೆ ತಂದುಕೊಟ್ಟ ಸಾಮಾಜಿಕ ಕ್ರಮಗಳ ಸಾಧ್ಯತೆಯ ಅರಿವೂ ಕೂಡ. ಇವುಗಳನ್ನು ಅಲ್ಲಗಳೆಯುವವರು ಮೂರ್ಖರಾಗಲು ಪ್ರಯಾಸಪಡುವ ವ್ಯಕ್ತಿಗಳು ಮಾತ್ರ."' ಈವರೆವಿಗೂ ತನ್ನ ಬಗ್ಗೆ ಸೂಕ್ಷ್ಮವಾಗಿ, ವಿಮರ್ಶಾತ್ಮಕವಾಗಿ ಚಿಂತಿಸಿಯೇ ಇರದ ಸಂಘಟನೆಯೊಂದು ಇಷ್ಟೆಲ್ಲಾ ಮಾಡಲು ಸಾಧ್ಯವಾಗಿದ್ದು ಹೇಗೆ? ಮೂರ್ಖರು ಯಾರು? ತಿಳಿಯುತ್ತಿಲ್ಲ.

ಹಾಗೆಯೇ "ಇತರ ಜನಪರ ಸಂಘಟನೆಗಳು, ಬರಹಗಾರರ ಬೆಂಬಲವಿಲ್ಲದೆ ಒಂದು ಸಣ್ಣ ಚಳವಳಿಯನ್ನೂ ಸಂಘಟಿಸಲು ಸಾಧ್ಯವಿಲ್ಲದ ಗುಂಪು" ಎಂದು ಹೇಳಿದ್ದೀರಿ. ಸರಿ ಸ್ವಾಮಿ, ಬಾಬಾಬುಡನ್‌ಗಿರಿ ವಿವಾದವು 2002ಕ್ಕೆ ಮುಂಚೆ ಹಲವಾರು ವರ್ಷಗಳಿಂದಲೂ ಇತ್ತು, ಕುದುರೆಮುಖ ಗಣಿಗಾರಿಕೆಯಿಂದ ಉಂಟಾಗುತ್ತಿದ್ದ ಅನಾಹುತವೂ ಕಣ್ಣಿಗೆ ರಾಚಿ ಬಡಿಯುತ್ತಿತ್ತು, ನೀವು ಹೇಳುತ್ತಿರುವ ಜನಪರ ಸಂಘಟನೆಗಳು ಮತ್ತು ಬರಹಗಾರರು, ಕನ್ನಡದ ಚಿಂತನಶೀಲ, ಸಂವೇದನಾಶೀಲ ಮನಸ್ಸುಗಳು ಇವೆರಡರ ಆಸುಪಾಸಿನಲ್ಲೇ ಇದ್ದರೂ ಯಾರೂ ಇವಕ್ಕೆ ಕೈ ಹಾಕಿರಲಿಲ್ಲ. ಇಂದು ನಿಮ್ಮಿಂದ ವಿವಿಧ ರೀತಿಯ ಆರೋಪಗಳಿಗೆ ಗುರಿಯಾಗಿರುವ ಇದೇ ಕ್ರಿಯಾಶೀಲ ಗುಂಪೇ ಇವನ್ನು ಕೈಗೆತ್ತಿಕೊಂಡಿದ್ದು ಮತ್ತು ಇಂದು ಇವೆರಡೂ ಕಡೆಯಲ್ಲಿ ಆಗಿರುವ ಸಾಧನೆ ಏನೆಂಬುದು ತಮಗೆ ತಿಳಿದೇ ಇದೆ.

ವೇದಿಕೆಯ ಮೇಲೆ ಹಲವು ಗಂಭೀರ ಆರೋಪಗಳನ್ನು ಮಾಡಿರುವ ನೀವು, ನಿಮ್ಮ ಲೇಖನದ ಬಹುಪಾಲು ಭಾಗವನ್ನು 'ನಕ್ಸಲೀಯರ ಬಗೆಗೆ ಪರ-ವಿರೋಧವಲ್ಲದ ಇನ್ನೊಂದು ತೃತೀಯ ಸ್ಪೇಸ್ ಇರಲು ಸಾಧ್ಯ' ಎಂದು ಹೇಳುವವರಿಗೆ ಮೀಸಲಿಟ್ಟಿದ್ದೀರಿ. ಅಷ್ಟು ಮಾತ್ರವಲ್ಲ ವೇದಿಕೆಯಲ್ಲಿನ 'ಕ್ರಿಯಾಶೀಲ ಗುಂಪು' ಇದೇ ಬಗೆಯದ್ದು ಎಂದು ಸಹ ಸೂಚಿಸಿದ್ದೀರಿ.

ಹಾಗಾದರೆ ಚೆನ್ನಿಯವರೇ, ತಾವು 99ರಿಂದಲೂ ಭಾಗವಹಿಸಿದ್ದ ವಿವಿಧ ಕಾರ್ಯಕ್ರಮಗಳಲ್ಲಿನ ಒಲವು,



ನಿಲುವುಗಳ ಬಗ್ಗೆ ನಿಮಗೆ ಈ ಹಿಂದೆ ಗೊತ್ತಿರಲಿಲ್ಲವೇ? ಇಂದಿನ ಈ ದಿಢೀರ್ ಜ್ಞಾನೋದಯಕ್ಕೆ ಕಾರಣವೇನು? ಈ ಹಿಂದೆ ಗದ್ದರ್ ಶಿವಮೊಗ್ಗಕ್ಕೆ, ಕುವೆಂಪು ವಿಶ್ವವಿದ್ಯಾಲಯಕ್ಕೆ ಬಂದ ಸಂದರ್ಭದಲ್ಲಿ ನೀವೂ ಉತ್ಸಾಹದಿಂದ ಪಾಲ್ಗೊಂಡಿದ್ದಿರಿ. ಆಗ ನೀವು 'ತೃತೀಯ ಸ್ಪೇಸ್'ನಲ್ಲಲ್ಲದೆ ಸಂಪೂರ್ಣ ನಕ್ಸಲ್‌ವಾದದ 'ಪರವಾದ' ಸ್ಪೇಸ್‌ನಲ್ಲಿ ಇದ್ದಿರೇನು? ಶಿವಮೊಗ್ಗದಲ್ಲಿ ಆಂಧ್ರದ ನಕ್ಸಲೀಯ ನಾಯಕರ ಹತ್ಯೆಯನ್ನು ವಿರೋಧಿಸಿ ನಡೆದ ಕಾರ್ಯಕ್ರಮಗಳಲ್ಲಿ ಭಾಷಣ ಮಾಡಿದಾಗ ನೀವು ಯಾವ ಸ್ಪೇಸ್‌ನಲ್ಲಿ ಇದ್ದಿರಿ? (ಗೋವಿಂದರಾಯರು ಕೂಡ ಇದೇ ವಿಚಾರಕ್ಕೆ ಹೈದರಾಬಾದ್‌ಗೇ ಹೋಗಿ ಭಾಷಣ ಮಾಡಿದ್ದರು ಎಂಬುದು ನಿಮಗೆ ಗೊತ್ತಿರಲಿಕ್ಕಿಲ್ಲ). ಮಾನವ ಹಕ್ಕು ಉಲ್ಲಂಘನೆ ಆಂಧ್ರದಲ್ಲಿ ಆದರೆ ಅದನ್ನು ದಿಟ್ಟವಾಗಿ ಖಂಡಿಸಬೇಕು; ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನಡೆದಾಗ ಮಾತನಾಡುವುದು ಬೇಡ ಎಂದರೆ ಹೇಗೆ?

ಚೆನ್ನಿಯವರೇ, ನಿಮಗೆ ಈ ವಿಚಾರದಲ್ಲಿ ಸೈದ್ಧಾಂತಿಕವಾಗಿ ಹೊಸದಾಗಿ ಅರಿವಿಗೆ ಬಂದದ್ದು ಏನೂ ಇಲ್ಲ ಎಂಬುದೇ ನಮ್ಮ ನಂಬುಗೆ. ವಾಸ್ತವವಾಗಿ, 1999ರ ಆಗಸ್ಟ್ 15ರಂದು ಕ್ರಿಯಾಶೀಲ ಗುಂಪಿನ ಕೆಲವರು ಟಿಪ್ಪು ಸುಲ್ತಾನ್ ನೆನಪಿನ ಕಾರ್ಯಕ್ರಮಕ್ಕೆ ನಿಮ್ಮನ್ನು ಅತಿಥಿಗಳನ್ನಾಗಿ ಕರೆದಾಗಲೇ ಶಿವಮೊಗ್ಗದಲ್ಲಿ ಹಲವರು ನಿಮ್ಮ ಬಗ್ಗೆ ಎಚ್ಚರಿಕೆಯ ಕಿವಿಮಾತುಗಳನ್ನು ಹೇಳಿದ್ದರು. ಆನಂತರ ಗಣಿಗಾರಿಕೆ ವಿರೋಧಿ ಹೋರಾಟದ ಸಂದರ್ಭದಲ್ಲಿ ಅನಂತಮೂರ್ತಿಯವರ ವಾದಕ್ಕೆದುರಾಗಿ, ತುಂಗ-ಭದ್ರೆಯರನ್ನುಳಿಸುವ ಹೋರಾಟವು ಕೇವಲ ರಮ್ಯ ಪರಿಸರ ಚಳವಳಿಯಲ್ಲ ಅದು ಪರಸ್ಪರ ವಿರುದ್ಧ ಹಿತಾಸಕ್ತಿಗಳ ನಡುವಿನ ವರ್ಗ ಸಂಘರ್ಷ ಎಂದು ನೀವು ಸಮರ್ಥವಾಗಿ ವಾದಿಸಿದ್ದಿರಿ. ಕೆಲವು ಅತ್ಯುತ್ತಮ ಕರಪತ್ರಗಳನ್ನು ಬರೆದಿರಿ. 2002ರ ಸಮಾವೇಶದಲ್ಲಿ ನೀವು ಮಾಡಿದ ಭಾಷಣ, ಕೈ ಆಡಿಸುತ್ತಾ ರಭಸದಲ್ಲಿ ಹರಿಸಿದ ವಾಗ್ಝರಿ, ಮಂಡಿಸಿದ ವಿಚಾರ ಇವೆಲ್ಲವನ್ನೂ ನಾವು ಸಂಭ್ರಮ-ಉತ್ಸಾಹಗಳಿಂದ ಸ್ವೀಕರಿಸಿದ್ದೆವು. ಈ ರೀತಿಯೆಲ್ಲಾ ಭಾಗವಹಿಸಿದ ನಂತರ ನೀವು ನಿಮ್ಮದೇ ವಿಶ್ವವಿದ್ಯಾಲಯದಲ್ಲಿ ಢೋಂಗಿ ಗುರು ರವಿಶಂಕರ್‌ಗೆ, ಇನ್ಫೋಸಿಸ್ ನಾರಾಯಣಮೂರ್ತಿಗೆ, ಆರೆಸ್ಸೆಸ್‌ನ ಸ್ವಯಂಸೇವಕ ರಾಮಾಜೋಯಿಸ್‌ಗೆ ಗೌರವ ಡಾಕ್ಟರೇಟ್ ನೀಡಿದಾಗ ಚಕಾರವೆತ್ತಲಿಲ್ಲ. ಹೋಗಲಿ ಬಿಡಿ ಎಂದುಕೊಳ್ಳೋಣವೆಂದರೆ ಕಾಗೋಡು ತಿಮ್ಮಪ್ಪನವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಅವರ ಭಜನೆ ನಡೆಸಿದಿರಿ. ಅಷ್ಟು ಮಾತ್ರವಲ್ಲ ಸ್ವತಃ ಪೊಲೀಸ್ ಇಲಾಖೆಯೇ ಸಮರ್ಥನೆ ಮಾಡಿಕೊಳ್ಳದ ಎನ್‌ಕೌಂಟರ್ ದಯಾನಾಯಕ್‌ನನ್ನು ಶಿವಮೊಗ್ಗದಲ್ಲಿ ಸನ್ಮಾನಿಸುವ ಕಾರ್ಯಕ್ರಮದಲ್ಲಿ, ತಾವೇ ನಿರ್ವಹಣೆ ಮಾಡಿದಿರಿ, ವಿಜಯ್‌ಮಲ್ಯನನ್ನು ಕರೆಸಿದ ಕಾರ್ಯಕ್ರಮದಲ್ಲೂ ಸಹ. ಎಲ್ಲ ಬಗೆಯ ಹಿಂಸೆಯನ್ನು ಖಂಡಿಸುವ ನೀವು ದಯಾನಾಯಕ್‌ನನ್ನು ಹಾಡಿಹೊಗಳುವ ಕಾರ್ಯಕ್ರಮದಲ್ಲಿ ನಿರೂಪಣೆ ಮಾಡಿದ್ದು ಹೇಗೆ? ಇದೆಲ್ಲವೂ ಸಹ ಇಂದಿನ ನಿಮ್ಮ ಸ್ಪೇಸ್‌ಅನ್ನು ನಿರ್ಧರಿಸುವಲ್ಲಿ ಪಾತ್ರ ವಹಿಸಿಲ್ಲವೇ?

"ಪೊಲೀಸರು ಕೋವಿಯನ್ನು ಹಾರಿಸಿದರೆ ಹೊರಡುವ ಗುಂಡಿಗೆ ಪರ-ವಿರೋಧವಲ್ಲದ ತೃತೀಯ ಸ್ಪೇಸ್ ಸಿಕ್ಕುವುದಿಲ್ಲ" ಎಂದಿದ್ದೀರಿ. ಆದರೆ ಯಾವ ಗುಂಡೂ ಹಾರದೆ ನಿಮ್ಮ 'ಪರವೋ, ತೃತೀಯವೋ' ಆಗಿದ್ದ ಸ್ಪೇಸ್ ಇಲ್ಲವಾಗಿಬಿಟ್ಟು, ಈಗ ಖಚಿತ ವಿರೋಧದ ಸ್ಪೇಸ್‌ನಲ್ಲಿ ನಿಮ್ಮನ್ನು ಕೂರಿಸಿಲ್ಲವೇ?

ನಕ್ಸಲೀಯ ಚಟುವಟಿಕೆಗಳ ಸಾಧನೆ ಶೂನ್ಯವೆಂದು ಒಪ್ಪಲು ಸಿದ್ಧರಿಲ್ಲದ ಗುಂಪೆಂದು ಕರೆದಿದ್ದೀರಿ. ಕೋಮು ಸೌಹಾರ್ದ ವೇದಿಕೆಯು ನಕ್ಸಲೀಯರ ಸಾಧನೆ ಶೂನ್ಯವೆಂದಾಗಲೀ, ಅಮೋಘವೆಂದಾಗಲೀ ಅಥವಾ ಇನ್ನೇನನ್ನಾಗಲೀ ಹೇಳುವುದಿಲ್ಲ. ಕೋಮುವಾದದ ವಿರುದ್ಧ ಇರುವ ಪ್ರಗತಿಪರ ಶಕ್ತಿಗಳು ಒಂದೆಡೆ ಸೇರಿರುವ ಈ ವೇದಿಕೆಯಲ್ಲಿ ಜಗತ್ತಿನ ಎಲ್ಲಾ ರಾಜಕೀಯ/ಸಾಮಾಜಿಕ ವಿಚಾರಗಳ ಬಗ್ಗೆ ಚರ್ಚಿಸಿ ತೀರ್ಮಾನ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ಅದರ ಅವಶ್ಯಕತೆಯೂ ಇಲ್ಲ ಎಂಬುದು ಸಾಮಾನ್ಯಜ್ಞಾನ. ಆದರೆ ಇದುವರೆಗೆ ಕೋಮು ಸೌಹಾರ್ದ ವೇದಿಕೆಯು ಸಂಪೂರ್ಣವಾಗಿ ಸಂವಿಧಾನಬದ್ಧವಾಗಿ ಮತ್ತು ಕಾನೂನಿನ ಚೌಕಟ್ಟಿನಲ್ಲಿ ತನ್ನ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. ತನ್ನ ನಿಲುವು ಪ್ರಣಾಳಿಕೆಗಳಲ್ಲೂ ಅದನ್ನೇ ಪ್ರತಿಪಾದಿಸಿದೆ. ವೇದಿಕೆಯಲ್ಲಿ ನಕ್ಸಲೀಯರನ್ನು ತಮ್ಮದೇ ತಾತ್ವಿಕ ನೆಲೆಗಟ್ಟಿನಲ್ಲಿ ಖಚಿತವಾಗಿ ವಿರೋಧಿಸುವವರೂ ಇದ್ದಾರೆ. ತೃತೀಯ ಸ್ಪೇಸ್‌ನವರೂ ಇದ್ದಾರೆ. ಕೆಲವು ವಿಚಾರಗಳಲ್ಲಿ ಭಿನ್ನಮತ ವಿದ್ದರೂ ನಕ್ಸಲೀಯರು ಮಾಡುತ್ತಿರುವುದು ಸರಿ ಎಂದು ಹೇಳುವವರೂ ಇದ್ದಾರೆ.

ಆತ್ಮವಿಮರ್ಶೆ ಮತ್ತು ಕಾರ್ಯವಿಧಾನಗಳಲ್ಲಿ ಪ್ರಜಾತಾಂತ್ರಿಕ ನಡವಳಿಕೆ ಎಂಬುದು ಯಾವುದೇ ಚಳವಳಿಗೆ ಅತ್ಯಂತ ಅಗತ್ಯವಾದುದು; ಕೋಮು ಸೌಹಾರ್ದ ವೇದಿಕೆಯೊಳಗೆ ಅದು ಅಗತ್ಯ ಪ್ರಮಾಣದಲ್ಲಿಲ್ಲ ಎನ್ನುವುದಾದರೆ ಅದನ್ನು ಪ್ರಶ್ನಿಸುತ್ತಾ, ತಿದ್ದುತ್ತಾ ಈ ಪ್ರಕ್ರಿಯೆಯನ್ನು ಬೆಳೆಸಬೇಕಿರುವುದು ಕ್ರಿಯಾಶೀಲ ಗುಂಪು (ಇಂದು ಅದರಲ್ಲಿ ಸಕ್ರಿಯವಾಗಿರುವ ಎಲ್ಲ ಸಂಘಟನೆಗಳು ಮತ್ತು ವ್ಯಕ್ತಿಗಳು. ಎಲ್ಲರೂ ಸೇರಿಯೇ ಈ ಗುಂಪು) ಮತ್ತು ರಾಜೇಂದ್ರಚೆನ್ನಿಯವರ ಕರ್ತವ್ಯವಾಗಿದೆ. ಇಲ್ಲದಿದ್ದರೆ ತೃತೀಯ ಸ್ಪೇಸ್ ಹೋಗಲಿ ಫ್ಯಾಸಿಸ್ಟರ ವಿರುದ್ಧದ ಎರಡನೆಯ ಸ್ಪೇಸ್ ಕೂಡಾ ಇರುವುದಿಲ್ಲ.

ಮುಗಿಸುವುದಕ್ಕೆ ಮುನ್ನ ಗಾಂಧಿಯವರ ಒಂದು ಮಾತನ್ನು ನೆನಪಿಸಿಕೊಳ್ಳಬೇಕಿದೆ. 'ಸತ್ಯ ಮತ್ತು ಅಹಿಂಸೆಯ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದಾಗ ನಾನು ಸತ್ಯವನ್ನು ಆಯ್ಕೆ ಮಾಡಿಕೊಳ್ಳುತ್ತೇನೆ' ಎಂದು. ಕೋಮು ಸೌಹಾರ್ದ ವೇದಿಕೆಯು ಹಿಂಸೆಯನ್ನು ಆಯ್ಕೆ ಮಾಡಿಕೊಂಡಿಲ್ಲ. ಅಂಥ ಸಂದರ್ಭವೂ ಬಾರದಿರಲಿ. ಚೆನ್ನಿಯವರು ಸಹ. ಆದರೆ ಸತ್ಯವನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ, ಅದನ್ನು ಮಾಡಿಕೊಳ್ಳದಿದ್ದರೆ ಚೆನ್ನಿಯವರು ಮೋಹನದಾಸ್ ಕರಮಚಂದಗಾಂಧಿಯವರ ಪಕ್ಕದಲ್ಲಿ ಇರಲಾಗುವುದಿಲ್ಲ.

-ಡಾ. ವಾಸು ಎಚ್.ವಿ.

ರಾಮನಗರ ರಿಲಯನ್ಸ್ ಜಿಲ್ಲೆ

ಹೊಸದಾಗಿ ರಚನೆಯಾಗಲಿರುವ ರಾಮನಗರ ಜಿಲ್ಲೆಗೆ ಕೆಂಪೇಗೌಡರ ಹೆಸರಿಡುವುದಾಗಿ ಸರ್ಕಾರ ಹೇಳಿಕೊಂಡಿದೆ. ಆದರೆ ತರಾತುರಿಯಲ್ಲಿ ಈಗ ಜಿಲ್ಲೆ ರಚನೆ ಮಾಡುತ್ತಿರುವ ಹಿಂದಿನ ರಿಯಲ್ ಎಸ್ಟೇಟ್ ಕರಾಳ ದಂಧೆಗಳನ್ನು ನೋಡುತ್ತಿದ್ದರೆ ಈ ಜಿಲ್ಲೆಗೆ ರಿಲಯನ್ಸ್ ಅಂಬಾನಿ ಜಿಲ್ಲೆ ಎಂದು ಹೆಸರಿಡಬೇಕಾಗ ಬಹುದು. ಏಕೆಂದರೆ ಇಡೀ ಜಿಲ್ಲಾ ರಚನೆಯ ಹಿನ್ನೆಲೆಯಲ್ಲಿ ರಿಲಯನ್ಸ್ ಅಂಬಾನಿಗಳ ಕೈವಾಡವಿದೆ. ಮುಖ್ಯಮಂತ್ರಿ ಕೇವಲ ಕೀರ್ತಿ ಪಡೆಯಲು ಹಾಗೂ ರಾಮನಗರ ವಿಧಾನಸಭಾ ಕ್ಷೇತ್ರದಿಂದ ಖಾಯಂ ಆಗಿ ಗೆದ್ದು ಬರಲು ಈ ನಾಟಕ ಆಡುತ್ತಿದ್ದಾರೆಂದು ಕೆಲವರು ವ್ಯಂಗ್ಯ ಮಾಡುತ್ತಿದ್ದಾರೆ. ಅದು ಅವಿವೇಕಿಗಳ ತರ್ಕ ಮಾತ್ರ. ಏಕೆಂದರೆ ದೇವೇಗೌಡರ ಕುಟುಂಬದಲ್ಲಿ ಈಗ ಯಾರಿಗೂ ಕೀರ್ತಿ, ಒಳ್ಳೆಯ ಹೆಸರು ಗಳಿಸಬೇಕೆಂಬ ಇರಾದೆ ಇಲ್ಲ. ಹಾಗೆ ಇದ್ದಿದ್ದರೆ ಸರ್ಕಾರಿ ಖಜಾನೆ ಲೂಟಿ, ಭೂಕಬಳಿಕೆಗಳಿಗೆ, ಅಕ್ರಮ ಆಸ್ತಿ ಖರೀದಿಗಳಿಗೆ ಅವರು ಕೈ ಹಾಕುತ್ತಲೂ ಇರಲಿಲ್ಲ. ಈಗ ಅವರದೇನಿದ್ದರೂ ದುಡ್ಡು ಮಾಡುವುದು, ಆಸ್ತಿ ಬೆಳೆಸಿಕೊಳ್ಳುವುದು... ಇಂಥವೇ ಅಜೆಂಡಾಗಳಿವೆ.



ರಾಮನಗರ ಜಿಲ್ಲೆಯಾಗುತ್ತಿರುವುದೂ ಈ ಕಾರಣಗಳಿಗಾಗಿಯೇ!

ನಿಮಗೀಗಾಗಲೇ ಗೊತ್ತಿರಬಹುದು. ಬೆಂಗಳೂರಿನಿಂದ ಹೊರಟು ರಾಮನಗರ ತಲುಪುವ ಮೊದಲೇ ಬಿಡದಿ ಇದೆ. ಸಿಟಿಯಿಂದ 39 ಕಿಲೋಮೀಟರ್ ಅಂತರದಲ್ಲಿರುವ ಬಿಡದಿ ಹತ್ತಿರ 9000 ಎಕರೆ ವಿಸ್ತೀರ್ಣದ ಆಧುನಿಕ ಟೌನ್‌ಶಿಪ್ ಒಂದು ಬರಲಿದೆ. ಈ ಟೌನ್‌ಶಿಪ್ ನಿರ್ಮಾಣದ ಗುತ್ತಿಗೆ ರಿಲಯನ್ಸ್ ಕಂಪನಿಗೆ ನೀಡುವ ಎಲ್ಲಾ ಒಳ ತಯಾರಿಗಳೂ ಈಗ ನಡೆಯುತ್ತಿವೆ. ಒಟ್ಟು 50 ಸಾವಿರ ಕೋಟಿ ರೂ. ಟರ್ನ್ ಓವರ್‌ನ ಈ ಮೆಗಾ ಪ್ರಾಜೆಕ್ಟ್ ಇಡೀ ಇಂಡಿಯಾದಲ್ಲೇ ಅತ್ಯಂತ ದೊಡ್ಡದು. ಅದಕ್ಕಾಗಿ **BMRDA (Bangalore Metro Region Development Authority)** ಈಗಾಗಲೇ ಜಾಗತಿಕ ಟೆಂಡರ್ ಕರೆದಿದ್ದು ರಿಲಯನ್ಸ್ ಸೇರಿದಂತೆ ಕೆಲವು ಬೆರಳೆಣಿಕೆಯಷ್ಟು **consotorium** ಗಳು ಬಿಡ್ ಮಾಡಿದ್ದು ಅಂತಿಮ ಶಾರ್ಟ್‌ಲಿಸ್ಟ್ ಕೂಡ ತಯಾರಾಗಿದೆ. ಮುಂದೆ ಇಡೀ ಟೌನ್‌ಶಿಪ್‌ನ ನಿರ್ಮಾಣ, ನಿರ್ವಹಣೆಯ ಗುತ್ತಿಗೆ ಜವಾಬ್ದಾರಿ ರಿಲಯನ್ಸ್‌ಗೇನಾದರೂ ಸಿಕ್ಕೇಬಿಟ್ಟರೆ ಕುಮಾರಸ್ವಾಮಿಗೆ ಎಕರೆಗೆ 15 ಲಕ್ಷ ರೂ.ನಂತೆ ಕಿಕ್‌ಬ್ಯಾಕ್ ಸಿಗಲಿದೆ.


ಅದರ ಮೊತ್ತ ಎಷ್ಟಾಗುತ್ತದೆ ಗೊತ್ತೆ?

1300 ಕೋಟಿ ರೂಪಾಯಿಗಳು!

ರಾಮನಗರ ಜಿಲ್ಲೆ ಯಾರಿಗೆ ಲಾಭ

ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ 1997 ರಲ್ಲಿ ಚಾಮರಾಜನಗರ, ದಾವಣಗೆರೆ, ಕೊಪ್ಪಳ, ಗದಗ್, ಬಾಗಲಕೋಟೆ, ಉಡುಪಿ ಹಾಗೂ ಹಾವೇರಿ ಜಿಲ್ಲೆಗಳ ರಚನೆಯಾಗಿತ್ತು. ಆಗಲೇ ಯಾದಗೀರ್, ಚಿಕ್ಕಬಳ್ಳಾಪುರ, ಗೋಕಾಕ್ ಜಿಲ್ಲಾ ರಚನೆಗೆ ಜನ ಒತ್ತಾಯಿಸಿದ್ದರು. ಆದರೆ ಅಪ್ಪಿತಪ್ಪಿಯೂ ಯಾರೂ ಸಹ ರಾಮನಗರವನ್ನು ಜಿಲ್ಲೆ ಮಾಡಿ ಎಂದು ಕೇಳಿರಲಿಲ್ಲ. ಆದರೆ 2004 ರಲ್ಲಿ ಯಾವಾಗ ಕುಮಾರಸ್ವಾಮಿ ರಾಮನಗರದಿಂದ ಸ್ಪರ್ಧಿಸಿ ಗೆದ್ದರೋ, ನಂತರ ಸಿಎಂ ಆಗಿ ಹಗಲು ದರೋಡೆ ಚಾಲೂ ಮಾಡಿದರೋ ಅದೇ ರೀತಿ ಅವರ ಕುಟುಂಬದ ಆಸ್ತಿಯೂ ಬೆಳೆಯತೊಡಗಿತು. ಕೇವಲ ರಾಮನಗರ ಒಂದರಲ್ಲೇ ಗೌಡರ ಕುಟುಂಬ 300 ಎಕರೆಗೂ ಹೆಚ್ಚು ಭೂಮಿ ಹೊಂದಿದೆ. ಕೇತಗಾನಹಳ್ಳಿಯಲ್ಲಿ 60 ಎಕರೆ ಇದ್ದರೆ ಬೆಂಗಳೂರಿನ ಕಳ್ಳ ಕಬಡಿ ಬಾಬು ಮೂಲಕ ಹೊಸೂರು, ಪರಶಿವನಹಳ್ಳಿ, ಬೈಚೋಹಳ್ಳಿ, ಕಂಚುಗಾರನಹಳ್ಳಿ ಹಾಗೂ ತಾಯಪ್ಪನದೊಡ್ಡಿ ಗ್ರಾಮಗಳಲ್ಲಿ 200 ಎಕರೆಯಷ್ಟು ಭೂಮಿ ಖರೀದಿಸಿಟ್ಟುಕೊಂಡಿದ್ದಾರೆ. ಇವೆಲ್ಲವೂ ರಾಮನಗರ ತಾಲ್ಲೂಕಿನ ಬಿಡದಿ ಹಾಗೂ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಟೌನ್‌ಗಳ ನಡುವೆ ಬರುವ ಗ್ರಾಮಗಳು.

ಬಿಡದಿ ಟೌನ್‌ಶಿಪ್ ತಲೆ ಎತ್ತಲಿರುವುದೂ ಇದೇ ಏರಿಯಾದಲ್ಲೇ!



ಬಿಡದಿ ಟೌನ್‌ಶಿಪ್ ಪ್ಲಾನ್



ಈ ಟೌನ್‌ಶಿಪ್ ನಿರ್ಮಾಣದ ಪ್ರಸ್ತಾಪ ಇರುವಾಗಲೇ ರಾಮನಗರ ತಾಲ್ಲೂಕನ್ನು ಜಿಲ್ಲಾ ಕೇಂದ್ರವಾಗಿ ಬದಲಾಯಿಸುವ ಗೌಡರ ಕುಟುಂಬದ ಲೆಕ್ಕಾಚಾರ ಆಕಸ್ಮಿಕವಾದದ್ದಲ್ಲ. ಬೆಂಗಳೂರಿನಿಂದ ಕೇವಲ 60 ಕಿ.ಮೀ. ದೂರದಲ್ಲಿರುವ ರಾಮನಗರ ಈಗಾಗಲೇ ಕಂದಾಯ ಇಲಾಖೆ ಉಪವಿಭಾಗವಾಗಿದ್ದು **(Sub Division)** ಅಸಿಸ್ಟೆಂಟ್ ಕಮಿಷನರ್, ಡಿವೈಎಸ್‌ಪಿ, ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಚೇರಿಗಳಿದ್ದವು. ರಾಮನಗರ-ಬೆಂಗಳೂರು ನಡುವೆ ಅತ್ಯುತ್ತಮ ರಸ್ತೆ ಹಾಗೂ ರೈಲ್ವೆ

ಬಿಳಿದಾಳೆ ಈಶ

ಸಾರಿಗೆ ಸಂಪರ್ಕಗಳಿದ್ದವು. ಆದರೆ ಉದ್ದೇಶಿತ ಬಿಡದಿ ಟೌನ್‌ಶಿಪ್‌ಗೆ ರಿಯಲ್ ಎಸ್ಟೇಟ್ ಬೆಲೆ ದೃಷ್ಟಿಯಿಂದ ಮಹತ್ವ ಬರಬೇಕೆಂದರೆ ಅಷ್ಟು ಸಾಕಾಗಲಾರದೆಂಬ ದೂರಾಲೋಚನೆಯಿಂದ ಕುಮಾರ ಸ್ವಾಮಿ ಈಗ ರಾಮನಗರವನ್ನು ಜಿಲ್ಲೆ ಮಾಡಲು ಹೊರಟಿದ್ದಾರೆ. ಬಿಡದಿ ಟೌನ್‌ಶಿಪ್ ಅಷ್ಟೇ ಅಲ್ಲದೆ ರಾಮನಗರದಲ್ಲೂ ಇನ್ನೊಂದು ಟೌನ್‌ಶಿಪ್ ನಿರ್ಮಿಸುವ ಉದ್ದೇಶ ಕುಮಾರಸ್ವಾಮಿಗಿದ್ದು 4013 ಎಕರೆ ವಿಸ್ತೀರ್ಣದ ಈ ಟೌನ್‌ಶಿಪ್ ಮಾಯಗಾನಹಳ್ಳಿ, ಕೆಂಪನಹಳ್ಳಿ, ಕೆಂಚಿಗನಹಳ್ಳಿ, ಮಾದಾಪುರ, ಕೇತೋಹಳ್ಳಿ, ಬಸವನಪುರ, ಬೆಳಗುಳಿ ಗ್ರಾಮಗಳ 12000 ರೈತ ಕುಟುಂಬಗಳನ್ನು ಒದ್ದೋಡಿಸಲು ಸಜ್ಜಾಗಿದೆ. ಈ ಪೈಕಿ ರೈತರ 3621 ಎಕರೆ ಫಲವತ್ತಾದ ಸಾಗುವಳಿ ಜಮೀನಿದ್ದರೆ ಉಳಿದ 392 ಎಕರೆ ಸರ್ಕಾರಿ ಜಮೀನಾಗಿದೆ. ಹೀಗೆ ಬೆಂಗಳೂರಿನ ಪಶ್ಚಿಮಕ್ಕೆ ಹೊರ ವಲಯದಲ್ಲಿ ಒಂದರ ಪಕ್ಕ ಒಂದರಂತೆ ಟೌನ್‌ಶಿಪ್‌ಗಳನ್ನು ತರುವ ಮೂಲಕ ಲಕ್ಷಾಂತರ ರೈತರನ್ನು ಬೀದಿಪಾಲು ಮಾಡಿ ಅವರ ಸಮಾಧಿಗಳ ಮೇಲೆ ರಿಲಯನ್ಸ್‌ನ ಅಂಬಾನಿಗಳು ಹಾಗೂ ಗೌಡರ ಕುಟುಂಬ ತಮ್ಮ ಸಂಪತ್ತಿನ ಸೌಧ ಕಟ್ಟಲು ಹೊರಟಿದ್ದಾರೆ.

ಉದ್ದೇಶಿತ ಬಿಡದಿ ಟೌನ್‌ಶಿಪ್‌ನಲ್ಲಿ ಬೃಹತ್ ಹೋಟೆಲ್‌ಗಳು, ಮಲ್ಟಿಪ್ಲೆಕ್ಸ್‌ಗಳು, ಶಾಪಿಂಗ್ ಮಾಲ್‌ಗಳು, ಗಾಲ್ಫ್ ಕೋರ್ಸ್, ವಾಣಿಜ್ಯ ಸಂಸ್ಥೆಗಳು ಹಾಗೂ ವಸತಿ ಸಮುಚ್ಚಯಗಳನ್ನು ನಿರ್ಮಿಸಲು ರಿಲಯನ್ಸ್ ಗುಂಪು ಸಜ್ಜಾಗಿ ನಿಂತಿದೆ. ಬಿಎಂಆರ್‌ಡಿಎ ಕರೆದಿದ್ದ ಜಾಗತಿಕ ಟೆಂಡರ್‌ನಲ್ಲಿ ಎರಡೂ ರಿಲಯನ್ಸ್ ಗುಂಪಿನ ಕಂಪನಿಗಳಾದ ರಿಲಯನ್ಸ್, ಎನರ್ಜಿ, ರಿಲಯನ್ಸ್ ಯುಟಿಲೈಸರ್ಸ್, ರಿಲಯನ್ಸ್ ಪೋರ್ಟ್ಸ್ ಅಂಡ್ ಟರ್ಮಿನಲ್ಸ್‌ಗಳು ಬಿಡ್ ಸಲ್ಲಿಸಿವೆ. ಇದರ ಜೊತೆ ಆಸ್ಟ್ರೇಲಿಯಾ, ಅಮೆರಿಕಾ, ಸ್ಪೇನ್, ಇಸ್ರೇಲ್, ಚೀನಾ ಕಂಪನಿಗಳು ಇವೆಯಾದರೂ ಕೊನೆಗೆ ಗುತ್ತಿಗೆ ಸಿಗುವುದು ರಿಲಯನ್ಸ್‌ನವರಿಗೇ ಎಂಬುದು ಯಾರು ಬೇಕಾದರೂ ಊಹಿಸಬಹುದಾದ ಸತ್ಯ. **BMRDA** ಈಗಾಗಲೇ **Request for proposal (RFP)** ನೀಡುವಂತೆ ಆಯ್ದ ಕೆಲ ಕಂಪನಿಗಳಿಗೆ (ರಿಲಯನ್ಸ್ ಸೇರಿದಂತೆ) ಸೂಚಿಸಿದ್ದು ಜುಲೈ 9 ಕ್ಕೆ ಅಂತಿಮ ಆಯ್ಕೆ ನಡೆಸಲಿದೆ.

ಜನತೆಗೆ ದ್ರೋಹ ಬಗೆಯುತ್ತಲೇ ಕೀರ್ತಿ-ಐಶ್ವರ್ಯ ಸಂಪಾದಿಸುವ ಕಲೆ ಗೌಡರ ಕುಟುಂಬಕ್ಕೆ ಕರಗತವಾಗಿ ಹೋಗಿದೆ.

ರಾಮನಗರ ಕಾರ್ಪೋರೇಟ್ ಜಿಲ್ಲೆಗೆ 800 ಕೋಟಿ

ಅಧಿಕೃತವಾಗಿ ರಾಮನಗರಕ್ಕೆ ಈಗಲೂ ಜಿಲ್ಲೆ ಸ್ಥಾನಮಾನ ಸಿಕ್ಕಿಲ್ಲ, ಆಗಲೇ 800 ಕೋಟಿ ರೂಪಾಯಿ ಸರ್ಕಾರಿ ಹಣದ ಪ್ರವಾಹ ಹರಿಯುತ್ತಿದೆ. ಒಂದು ವಿಪರ್ಯಾಸ ಏನು ಗೊತ್ತೆ?


ಚಾಮರಾಜನಗರ, ದಾವಣಗೆರೆ, ಕೊಪ್ಪಳ, ಹಾವೇರಿ, ಗದಗ, ಉಡುಪಿ, ಬಾಗಲಕೋಟೆಗಳು ಜಿಲ್ಲೆಗಳಾಗಿ ಬರೋಬ್ಬರಿ 10 ವರ್ಷಗಳಾಗಿವೆ. ಆದರೆ ಈಗಲೂ ಅಲ್ಲೆಲ್ಲೂ ಸರಿಯಾದ ಮೂಲಭೂತ ಸೌಲಭ್ಯಗಳಿಲ್ಲ. ಜಿಲ್ಲಾ ಕೇಂದ್ರ ಎನಿಸಿಕೊಳ್ಳುವ ಮಟ್ಟಕ್ಕೆ 10 ವರ್ಷಗಳಾದ ನಂತರವೂ ಇವು ಏರಿಲ್ಲ. ಅದೇ ರಾಮನಗರ ಜಿಲ್ಲೆಗೆ ಇನ್ನೂ ಕ್ಲಿಯರೆನ್ಸ್ ಸಿಗದಿದ್ದರೂ ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪಂಚಾಯಿತಿ ಕಚೇರಿ. ಎಸ್.ಪಿ. ಕಚೇರಿ, 700 ಹಾಸಿಗೆಗಳ ಆಸ್ಪತ್ರೆ, ಸರ್ಕಾರಿ ಕಾಲೇಜು, ಡೆಂಟಲ್, ಮೆಂಟಲ್ ಕಟ್ಟಡಗಳೆಲ್ಲಾ ತಲೆ ಎತ್ತುತ್ತಿವೆ. ರಸ್ತೆ, ವಿದ್ಯುತ್, ಸೇತುವೆ ಇತ್ಯಾದಿ ಇತ್ಯಾದಿ ಎಂದು ಒಟ್ಟು ಖರ್ಚು 1200 ಕೋಟಿಗೇರುವ ನಿರೀಕ್ಷೆ ಇದೆ. ಇದೆಲ್ಲಾ ಕ್ಷೇತ್ರದ ಅಭಿವೃದ್ಧಿ ಅಥವಾ ಸಾಮಾನ್ಯ ಜನತೆಗೆ ಒದಗಿಸಬೇಕಾದ ಸೌಲಭ್ಯಗಳೆಂಬ ದೃಷ್ಟಿಯಿಂದ ಹರಿಯುತ್ತಿರುವ ಹಣ ಅಲ್ಲ. ಬೆಂಗಳೂರಿನಿಂದ ಹೊರಟರೆ ಕೆಂಗೇರಿ, ಬಿಡದಿ, ರಾಮನಗರದವರೆಗೂ ವಸತಿ ಸಮುಚ್ಚಯ, ಶಾಪಿಂಗ್ ಮಾಲ್‌ಗಳು, ವಾಣಿಜ್ಯ ಕೇಂದ್ರಗಳು, ಮನೋರಂಜನಾ ತಾಣಗಳ ಒಂದು ಸರಪಳಿಯನ್ನೇ ಅವರು ನಿರ್ಮಿಸಬೇಕಿದೆ. ಅದೊಂದು ರೀತಿ ಬೆಂಗಳೂರಿನ ಮುಂದುವರೆದ ಭಾಗದಂತೆ ಇಡೀ ರಾಮನಗರ ಒಂದು ಕಾರ್ಪೋರೇಟ್ ಜಿಲ್ಲೆಯಾಗಿ ಬದಲಾಗಬೇಕಿದೆ. ಹಾಗಾದಾಗಲೇ ತಾನೆ ರಿಲಯನ್ಸ್‌ನ ಬಿಡದಿ ಟೌನ್‌ಶಿಪ್‌ನ ಕಿಮ್ಮತ್ತು ಜಾಸ್ತಿಯಾಗುವುದು, ಆ ಮೂಲಕ ಕುಮಾರಸ್ವಾಮಿ ಜೇಬು ತುಂಬುವುದು.

ಇದೆಲ್ಲಾ ಬಿಟ್ಟು ಹೊಸ ಜಿಲ್ಲೆಗಳೆಂದು ಚಾಮರಾಜನಗರಕ್ಕೋ ಇಲ್ಲಾ ಹಾವೇರಿಗೋ ಹಣ ನೀಡಿದರೆ ಅಲ್ಯಾವ ಟೌನ್‌ಶಿಪ್ ಕಟ್ಟಲು ಸಾಧ್ಯ? ಅಂತದಕ್ಕೆ ಯಾವನು ತಾನೆ ಕಮಿಷನ್ ಕೊಡುತ್ತಾನೆ ಹೇಳಿ?

ಲಿಂಗಾಯತ ರೈತರ ಬಲಿ

ಇದೊಂದು ಉದ್ದೇಶಿತ ಪಿತೂರಿ ಆಗಿರದಿದ್ದರೂ ರಾಮನಗರದಲ್ಲೀಗ ಕುಮಾರಣ್ಣನ ಹೊಸ ಯೋಜನೆಗಳಿಗೆ ಬಲಿಯಾಗುತ್ತಿರುವವರ ಪೈಕಿ ಲಿಂಗಾಯತ ಮೆಜಾರಿಟಿ ಇರುವ ಹಳ್ಳಿಗಳೇ ಜಾಸ್ತಿ ಇವೆ ಎಂಬ ಕಹಿ ಭಾವನೆ ಬೆಳೆಯುತ್ತಿದೆ. ಬಿಡದಿ ಟೌನ್‌ಶಿಪ್‌ನ ವ್ಯಾಪ್ತಿಯೊಳಗೆ ಗೌಡರ ಕುಟುಂಬದ 300 ಎಕರೆಗೂ ಹೆಚ್ಚು (ಬೇನಾಮಿ ಸೇರಿ) ಜಮೀನಿದೆಯಾದರೂ ಅದನ್ನೆಂದೂ **KIADB** ವಶಪಡಿಸಿಕೊಳ್ಳಲಾರದು. ಆದರೆ ರಾಮನಗರದಲ್ಲಿ ಹೊಸ ಸರ್ಕಾರಿ ಕಚೇರಿಗಳು, ಕಾಲೇಜು, ಆಸ್ಪತ್ರೆ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯಗಳಿಗಾಗಿ ರೈತರಿಂದ ಕಿತ್ತುಕೊಳ್ಳುತ್ತಿರುವ ಬಹುತೇಕ ಭೂಮಿ ಲಿಂಗಾಯತ ರೈತರದ್ದು.

ಮೊನ್ನೆ ಜೂನ್ 28 ರಂದು ಕುಮಾರಸ್ವಾಮಿ ರಾಜೀವ್ ಗಾಂಧಿ ಆರೋಗ್ಯ ವಿವಿ ಕಾಮಗಾರಿಗೆ ಶಂಕುಸ್ಥಾಪನೆ ಮಾಡಿದಾಗ ಪ್ರತಿಭಟಿಸಲು ತಯಾರಾಗೇ ಬಂದಿದ್ದ ನೂರಾರು ರೈತರನ್ನು ಪೊಲೀಸರು ಬಂಧಿಸಿ ಕರೆದೊಯ್ದಿದ್ದರು. ಅವರೆಲ್ಲಾ ಅರ್ಚಕರಹಳ್ಳಿಯ ಲಿಂಗಾಯತ ರೈತರು. ಆರೋಗ್ಯ ವಿವಿಗಾಗಿ 216 ಎಕರೆ ಭೂಮಿ ಗುರುತಿಸಲಾಗಿದ್ದು ಅದರಲ್ಲಿ 200 ಎಕರೆ ಲಿಂಗಾಯತರದ್ದೇ ಆಗಿವೆ. ಉಳಿದದ್ದು ಪರಿಶಿಷ್ಟ ಜಾತಿ ರೈತರದ್ದು. ಭೂಮಿ ಕಳೆದುಕೊಳ್ಳಲಿರುವ ರೈತರಿಗೆ ಜುಜುಬಿ 30 ಲಕ್ಷ ರೂ. ಪರಿಹಾರ ನೀಡುವ ಆಮಿಷ ಒಡ್ಡಲಾಗಿದೆ. ಆದರೆ ಅಲ್ಲಿನ ಮಾರುಕಟ್ಟೆ ದರ ಎಕರೆಗೆ 70 ಲಕ್ಷ ಇದೆ. ಹಾಗಾಗಿ ರೈತರು ನಮಗೆ ನಗದು ಪರಿಹಾರ ಬೇಕಿಲ್ಲ, ಅಭಿವೃದ್ಧಿ ಪಡಿಸಿದ ಭೂಮಿಯಲ್ಲಿ ಪಾಲುದಾರಿಕೆ ನೀಡಿ ಎಂಬ ಬೇಡಿಕೆ ಮುಂದಿಟ್ಟುಕೊಂಡು ಹೋರಾಟ ಶುರು ಮಾಡಿದ್ದಾರೆ. ಭೂ ಸಂರಕ್ಷಣಾ ಸಮಿತಿ ಅರ್ಚಕರಹಳ್ಳಿ ಗೇಟ್ ಬಳಿ ಕಳೆದ ಒಂದು ತಿಂಗಳಿಂದ ಧರಣಿ ನಡೆಸುತ್ತಿದೆ.



ವೈದ್ಯಕೀಯ ಕಾಲೇಜು

ರೈತರೇನೊ ತಮ್ಮ ಭೂಮಿ ಬಿಟ್ಟುಕೊಡುವುದಿಲ್ಲ ಎನ್ನುತ್ತಿದ್ದಾರೆ. ಹಾಗಂತ ಕುಮಾರಸ್ವಾಮಿ ಸುಮ್ಮನಿರಬೇಕಲ್ಲ, ಭೂಮಿ ಬೇಕೇಬೇಕೆಂದರೆ ಒಂದೋ ಮಾರ್ಕೆಟ್ ರೇಟ್ ಕೊಡಿ ಇಲ್ಲಾ ನಮ್ಮನ್ನು ಪಾಲುದಾರರನ್ನಾಗಿಸಿಕೊಳ್ಳಿ ಎನ್ನುತ್ತಿದ್ದಾರೆ ರೈತರು. ಆದರೆ ಅವನ್ನು ಒಪ್ಪಿಕೊಂಡು ತನಗೆ ಬರಬೇಕಿರುವ ಕಮಿಷನ್ ಕಳೆದುಕೊಳ್ಳಲು ಕುಮಾರಸ್ವಾಮಿ ತ್ಯಾಗಮೂರ್ತಿಯೇ?


ರೈತರ ಪುನರ್ವಸತಿ ಖಾಸಗಿಯವರ ಹೊಣೆ

ಯಾವುದೇ ಬೃಹತ್ ಯೋಜನೆಯಲ್ಲಿ ನಿರಾಶ್ರಿತರಾಗುವ ಜನರ ಪುನರ್ವಸತಿಯ ಜವಾಬ್ದಾರಿ ಇಲ್ಲಿಯವರೆಗೂ ಸರ್ಕಾರದ್ದೇ ಆಗಿರುತ್ತಿತ್ತು. ಆದರೆ ಕುಮಾರಸ್ವಾಮಿ ಈಗ ಅದನ್ನು ಬದಲಾಯಿಸುತ್ತಿದ್ದಾರೆ. ಉದ್ದೇಶಿತ ಬಿಡದಿ ಟೌನ್‌ಶಿಪ್ ಯೋಜನೆಯಿಂದ ನಿರಾಶ್ರಿತರಾಗಲಿರುವ 8 ಗ್ರಾಮಗಳ 12 ಸಾವಿರ ರೈತ ಕುಟುಂಬಗಳ ಪುನರ್ವಸತಿ ಹಾಗೂ ಪರಿಹಾರ ನೀಡಿಕೆ ಜವಾಬ್ದಾರಿಯನ್ನು ಯೋಜನೆ ಗುತ್ತಿಗೆ ಪಡೆಯುವ ಖಾಸಗಿ ಕಂಪನಿಗೇ ವಹಿಸಲಾಗುತ್ತಿದೆ. ಅಂದರೆ ಪರಿಹಾರ ನೀಡಿಕೆಯಲ್ಲಾಗಲೀ ನೆಲೆ ಕಳೆದುಕೊಳ್ಳಲಿರುವ ರೈತರ ಪುನರ್‌ವಸತಿಯಾಗಲಿ ಸರ್ಕಾರದ ಜವಾಬ್ದಾರಿ ಏನೂ ಇರುವುದಿಲ್ಲ ಎಂದಾಯಿತು.

ಸಾಮಾಜಿಕ ಹೊಣೆಗಾರಿಕೆ ಇರುವ ಸರ್ಕಾರಗಳೇ ಈ ವಿಚಾರದಲ್ಲಿ ಅನ್ಯಾಯ ಮಾಡಿಕೊಂಡು ಬಂದಿರುವಾಗ ಇನ್ನು ಖಾಸಗಿ ಕಂಪನಿಗಳು ಅದರಲ್ಲೂ ರಿಲಯನ್ಸ್ ರೈತರನ್ನು ವಂಚಿಸುವುದಿಲ್ಲವೆ? ನಾಳೆ ಈ ಯೋಜನೆ ವಿರೋಧಿಸುವ, ಪರಿಹಾರದ ಬಗ್ಗೆ ಅತೃಪ್ತರಾಗುವ ರೈತರು ಯಾರಲ್ಲಿ ತಮ್ಮ ಅಹವಾಲು ಹೇಳಬೇಕು?

ಕೊಪ್ಪಳ ಜೆಡಿಎಸ್‌ನಲ್ಲಿ ನಿಷ್ಠರ ನಿಟ್ಟುಸಿರು!

ಬ್ಯಾಟ್ ಹಿಡಿಯಲು ಬಾರದವನು ಬ್ಯಾಟಿಂಗ್‌ಗೆ ಇಳಿದಂತಾಗಿದೆ ಗಂಗಾವತಿ ಶಾಸಕ ಕಂ ಹಾಲಿ ಸರ್ಕಾರದ ಕಾರ್ಮಿಕ ಮಂತ್ರಿ ಇಕ್ಬಾಲ್ ಅನ್ಸಾರಿಯದು. ಅನಿರೀಕ್ಷಿತವಾಗಿ ಕಾಂಗ್ರೆಸ್‌ನ್ನು ಬಿಟ್ಟು ಬಂದು ದೇವೇಗೌಡರ ಗುಂಪಿಗೆ ಸೇರಿದಾಗ ಈತನಿಗೆ ಜನಸಾಗರವೇ ಬೆಂಬಲಕ್ಕಿತ್ತು, ಹೇಗಿತ್ತೆಂದರೆ, ಅತ್ತ ಉಳ್ಳಾಲದ ಖಾದರ್‌ಗಿಂತ ಜೋರಾಗಿತ್ತು. ಆದರೆ ಇವತ್ತು ಏನಾಗಿದೆ?




ಸಚಿವ ಇಕ್ಬಾಲ್ ಅನ್ಸಾರಿ

ಚುನಾವಣೆಯಲ್ಲಿ 3 ಕೋಟಿ ಚಿಲ್ಲಿ ಮುನ್ನೂರು ಮತಗಳ ಕಡಿಮೆ ಅಂತರದಿಂದ ಗೆದ್ದಾಗಲೇ ಅನ್ಸಾರಿ ಹುಷಾರಾಗಿ ಒಂದಿಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಿತ್ತು. ಆದರೆ ಎಚ್.ಆರ್. ಶ್ರೀನಾಥನ ಮೇಲಿದ್ದ ಸಿಟ್ಟಿಗೆ, ಆತನೆದುರು ಮಂತ್ರಿಯಾಗಿ ಮೆರೆಯುವ ವಿಚಿತ್ರ ಸೇಡಿಗೆ ಬಲಿಬಿದ್ದ ಈತ ಗೌಡರಿಗೆ ಕಪ್ಪ ಸಲ್ಲಿಸಿ 'ಪೇಮೆಂಟ್ ಖೋಟಾ'ದಲ್ಲಿ ವೈದ್ಯಕೀಯ ಶಿಕ್ಷಣ ಮಂತ್ರಿಯಾದ. ಮಂತ್ರಿಯಾದದ್ದೇ ಬಂತು, ಕ್ಷೇತ್ರದಲ್ಲಿ ಅಲ್ಲಿ-ಇಲ್ಲಿ ಚೂರುಪಾರು ಕೆಲಸಗಳೂ ನಿಂತುಹೋದವು. ಪಕ್ಷದ ಹಿತದೃಷ್ಟಿಯಿಂದ ಅದು ಶೂನ್ಯವೇ. ಚುನಾವಣೆ ಸಂದರ್ಭದಲ್ಲಿ ಅದರಲ್ಲೂ ಕಾಂಗ್ರೆಸ್ಸಿನ ಭದ್ರಕೋಟೆ ಗಂಗಾವತಿ ಕ್ಷೇತ್ರದಲ್ಲಿ ಜೀವಕ್ಕೆ ಜೀವ ಕೊಟ್ಟಾದರೂ ಅನ್ಸಾರಿಯನ್ನು ಗೆಲ್ಲಿಸೋಣವೆಂದು ಓಡಾಡಿ ಗೆಲುವಿಗೆ ಶ್ರಮಪಟ್ಟವರಿಗೆ ಇಲ್ಲಿ ಸಿಕ್ಕಿರುವುದು ಅಕ್ಷರಶಃ ಖಾಲಿ ಚಿಪ್ಪು.

ಗಂಗಾವತಿ ಸರ್ವೆ ನಂ. 55ರಲ್ಲಿ ಅನಧಿಕೃತ ಅಯ್ಯಪ್ಪ ದೇಗುಲ ಕೆಡವಿದ ವಿಷಯದಲ್ಲಿ 'ನಾನೇ ಹೇಳಿದ್ದೆ, ಏನೀಗ?' ಎಂಬ ಅಹಂಕಾರದ ಮಾತುಗಳನ್ನಾಡಿ ವಿರೋಧಿಗಳಿಗೆ ಆಹಾರವಾದ ಇಕ್ಬಾಲ್ ಅನ್ಸಾರಿ ಸುತ್ತ ಚುನಾವಣೆಯಲ್ಲಿ ನಿಯತ್ತಾಗಿ ದುಡಿದವರಾರೂ ಇಲ್ಲ. ಬದಲಾಗಿ ಪರಮ ಲಂಪಟರಾದ ಕೆಲವರನ್ನು ತನ್ನ ಸುತ್ತ ಸಾಕಿಕೊಂಡಿದ್ದಾನೆ.

ವಯಸ್ಸು, ದುಡ್ಡು, ಜನಾಕರ್ಷಣೆಗಳಿಂದ ತನ್ನದೇ ಆದ ಚಾರ್ಮ್ ಹೊಂದಿದ್ದ ಅಂದಿನ ಅನ್ಸಾರಿ ಇಂದು ಜನಕ್ಕೆ ಬರೀ ಸಾರಿ ಹೇಳುವುದರಲ್ಲಿ ನಿರತನಾಗಿದ್ದಾನೆ. 'ಮಂತ್ರಿಯಾಗಬೇಡ, ಶಾಸಕನಾಗಿ ಗಂಗಾವತಿಯಲ್ಲಿ ಕೆಲಸ ಮಾಡಿ, ಮತ್ತೆ ಗೆದ್ದು ಬೇಕಿದ್ದರೆ ಮಂತ್ರಿಯಾಗು' ಎಂದ ಹಿತೈಷಿಗಳನ್ನು ಎಡಗೈಲಿ ಸರಿಸಿ ಸಚಿವನಾದಾತ ಕಾರ್ಯಕರ್ತರನ್ನು ಮರೆತೇಬಿಟ್ಟ. ಕಾರ್ಯಕರ್ತರು ಮೊದಲು ನೆಮ್ಮದಿಯಾಗಿದ್ದರೆ ನಾವು ನಾಯಕರು ಬದುಕುಳಿಯುತ್ತೇವೆ ಎಂಬ ಸತ್ಯ ಅರಿತು ಸತತವಾಗಿ ಗೆದ್ದುಬರುತ್ತಿರುವವರು ಹೆಚ್.ಕೆ. ಪಾಟೀಲ್ ಮತ್ತು ಬಸವರಾಜ ರಾಯರೆಡ್ಡಿ.



ಎಂ.ಡಿ. ಹುಸೇನ್

ವಿನಾಕಾರಣ ಲಿಂಗಾಯತರು ಎಲ್ಲಿ ತನ್ನ ಮೇಲೆ ಸಿಟ್ಟಾಗುತ್ತಾರೋ ಅಂತ ಅಯೋಧ್ಯೆ ಬಸವರಾಜ ಸ್ವಾಮಿಯನ್ನು ಗಂಗಾವತಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷನನ್ನಾಗಿಸಿದರೂ ಲಾಭ ಮಾತ್ರ ಸೊನ್ನೆ. ಸುಮ್‌ಸುಮ್ನೆ ವಿರೋಧಿಗಳನ್ನು ಸೃಷ್ಟಿಸಿಕೊಂಡಿರುವ ಅನ್ಸಾರಿ ಹಿಂದೊಬ್ಬ ಶಿವಾನಂದ ಎಂಬ ಭೂಪನಿದ್ದಾನೆ. ಇವನೇ ಅನ್ಸಾರಿಯ ವಿರೋಧಿಗಳಿರುವ ಕಾಂಗ್ರೆಸ್, ಜೆಡಿಎಸ್, ಬಿಜೆಪಿಗಳಿಗೆ ಅನ್ಸಾರಿಯ ಪ್ರತಿ ಹೆಜ್ಜೆಯಲ್ಲಿ ನಡೆದ ವಹಾತುಕತೆಯ ವಿವರ ಸಲ್ಲಿಸುತ್ತಾನೆ. 'ಶಿವಾನಂದ ನಿನ್ನ ಗೋರಿ ತೋಡಾಕ ನಿನ್ನ ಹಿಂದೆ ಐದ್ದಾನ' ಅಂತ ಹೇಳೋಕೆ ಹೋದ ಕಾರ್ಯಕರ್ತರಿಗೇ ಹಚಾ.. ಎಂದು ಅಟ್ಟಿದ್ದಾನೆ ಅನ್ಸಾರಿ.


ಗಂಗಾವತಿ ಇಂದಿರಾಗಾಂಧಿ ಕಾಲದಿಂದಲೂ ಕಾಂಗ್ರೆಸ್‌ನ ಭದ್ರಕೋಟೆ. ಇಂತಹ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಸೆಡ್ಡು ಹೊಡೆದ ಅನ್ಸಾರಿಯನ್ನು 'ಮನೆಮಗ ಬಂದಿದ್ದಾನೆ ಹರಸಿ' ಅಂತ ಬೀದಿ ತಿರುಗಿ ಮಹಿಳೆಯರು ಜಾತಿ ಭೇದವಿಲ್ಲದೆ ಮತ ಯಾಚಿಸಿದ್ದರು. ಕೊನೆಕೊನೆಗಂತೂ ಅನ್ಸಾರಿಯ ಗೆಲುವಿಗೆ ಹಿಟ್ನಾಳ ಹೋಬಳಿ ಕೈ ಹಿಡಿಯಿತು. ಇವತ್ತು ಅದೇ ಹಿಟ್ನಾಳ ಕೊಪ್ಪಳ ಕ್ಷೇತ್ರಕ್ಕೆ ಸೇರ್ಪಡೆಯಾಗಿದೆ. ಇದೇ ಹೋಬಳಿಯಲ್ಲಿ ಮಂತ್ರಿಯ ಬೆಂಬಲಿಗರನ್ನು ಟಾರ್ಚ್ ಲೈಟ್‌ನಿಂದ ಹುಡುಕಬೇಕಾದ ಸ್ಥಿತಿಯಿದೆ. ಕೆಲ ದಿನಗಳ ಹಿಂದೆ ಮುನಿರಾಬಾದ್‌ಗೆ ಬಂದಿದ್ದ ಮುಖ್ಯಮಂತ್ರಿ ಕುಮಾರಸ್ವಾಮಿಯ ಬಹಿರಂಗ ಸಭೆಗೆ ಅನ್ಸಾರಿ ಕಳಿಸಿದ್ದ ಲಾರಿಗಳಿಗೆ ಜನ ಏರಲೇ ಇಲ್ಲ, ಹೀಗಾಗಿ ಲಾರಿಗಳೆಲ್ಲ ವಾಪಸ್ಸು ಬಂದವು. ಬಂದಿದ್ದ ಕಮ್ಮಿ ಜನರೆದುರೇ ಸಿಎಂ ಭಾಷಣ ಬಿಗಿದು ಹೋದರು. ಈ ಅವಮಾನ ತಾಳದೆ ಹೊಸಪೇಟೆಯ ಮನೆಗೆ ಹೋಗಿ ಮಲಗಿಬಿಟ್ಟ ಮಂತ್ರಿ ಅನ್ಸಾರಿ. ಒಟ್ಟಿನಲ್ಲಿ ಅನ್ಸಾರಿಯ ಪರಿಸ್ಥಿತಿ ಮಾಡಿದ್ದುಣ್ಣೋ ಮಹರಾಯ ಎಂಬಂತಾಗಿದೆ.

ಬಳ್ಳಾರಿ ಜಿಲ್ಲೆ ಮೀಸಲಾತಿಗೆ ಸಿಕ್ಕು ಎಲ್ಲ ರಾಜಕಾರಣಿಗಳು ಕೊಪ್ಪಳ ಜಿಲ್ಲೆಯತ್ತ ಕಣ್ಣುಹಾಕಿದ್ದಾರೆ. ಶ್ರೀರಾಮುಲು, ಜನಾರ್ದನರೆಡ್ಡಿಯಂಥವರು ರಹಸ್ಯವಾಗಿ ಗಂಗಾವತಿಗೆ ಬಂದು ಹೋಗುತ್ತಿದ್ದಾರೆ. ಸದ್ಯದ ಪರಿಸ್ಥಿತಿ ನೋಡಿದರೆ ಅನ್ಸಾರಿ ಗೆಲ್ಲುವುದೇ ಕಷ್ಟ ಎಂಬಂತಾಗಿದೆ. ಹಾಗೇನಾದರೂ ಗೆದ್ದರೆ ಅದು ಪವಾಡವೇ ಸರಿ. ಅನ್ಸಾರಿಗೆ ಕೊನೆಯ ಹತ್ತು ಓವರ್ ಮಾತ್ರ ಬಾಕಿ ಉಳಿದಿದೆ. ಸ್ವಲ್ಪವಾದರೂ ಚೆನ್ನಾಗಿ ಬ್ಯಾಟಿಂಗ್ ಮಾಡಿದರೆ ಒಂದಿಷ್ಟು ರನ್ (ಓಟು)ಗಳಾದರೂ ಬಂದಾವು.

ಇನ್ನು ಗಂಗಾವತಿ ಬಿಟ್ಟು ಕೊಪ್ಪಳಕ್ಕೆ ಬಂದರೆ ಇಲ್ಲಿ ಎಂ.ಡಿ. ಹುಸೇನ್, ಎಂ.ವಿ. ಪಾಟೀಲ್, ಮಹಾಂತಯ್ಯ ಮಠರಂತಹ ಸೀನಿಯರ್‌ಗಳನ್ನೇ ಕಡೆಗಣಿಸಲಾಗಿದೆ. ಹತ್ತು ವರ್ಷಗಳಿಂದ ಜೆಡಿಎಸ್ ಸಂಘಟನೆಯಲ್ಲಿ ತೊಡಗಿರುವ ಪ್ರಧಾನ ಕಾರ್ಯದರ್ಶಿ ಎಂ.ಡಿ. ಹುಸೇನ್‌ರು ಬಯಸಿದ್ದರೆ ನಿವೃತ್ತಿ ಬದುಕನ್ನು ಹಾಯಾಗಿ ಕಳೆಯ ಬಹುದಿತ್ತು, ಅದೇಕೋ 1997ರಲ್ಲಿ ದೇವೇಗೌಡ ಮತ್ತು ಅವರ ಪಕ್ಷದ ಮೇಲಿನ ಮೋಹಕ್ಕೆ ಬಿದ್ದರು. ಆಗೆಲ್ಲ ಇವತ್ತಿನ ಮಂತ್ರಿ ಇಕ್ಬಾಲ್ ಅನ್ಸಾರಿಗೆ ಶಾಲೆಯಲ್ಲಿ ಪಾಠ ಹೇಳಿದ ಎಂ.ಡಿ. ಹುಸೇನ್ ತಮ್ಮ ಶಿಷ್ಯ ಅನ್ಸಾರಿಗೆ ಹೇಳಿಕೊಂಡರೂ ಯಾವುದೇ ಫಲ ವಿಲ್ಲ, ಯಾವುದೇ ಪಕ್ಷದವರಿರಲಿ ಗೌರವಿಸುವಂಥ ವ್ಯಕ್ತಿ ಈ ಹುಸೇನ್. ಬಹುಶಃ ಸಿದ್ದರಾಮಯ್ಯ ಜೆಡಿಎಸ್ ಬಿಟ್ಟು ಹೋಗದಿದ್ದರೆ ಇವರಿಗೆ ಅಲ್ಲದೇ ಪಾಟೀಲ್ ಮತ್ತು ಇತರರಿಗೆ ಸೂಕ್ತ ಸ್ಥಾನಮಾನವಾದರೂ ದೊರಕುತ್ತಿತ್ತು.

ನಿನ್ನೆಮೊನ್ನೆ ಸಂಗಣ್ಣ ಕರಡಿಯ ಹಿಂದೆ ಪಕ್ಷ ಸೇರಿರುವ ಗುರುಬಸವರಾಜ ಹೊಳಗುಂದಿ ಇವತ್ತು ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಧ್ಯಕ್ಷ. ನಿಗಮ ಮಂಡಳಿಗಳ ನೇಮಕದಲ್ಲಾದರೂ ಹುದ್ದೆಗಳನ್ನು ನೀಡಬಹುದಿತ್ತು, ಅನ್ಸಾರಿ ಹೆಸರಲ್ಲಿ ಇವತ್ತು ಕೆಲವರು ಸರ್ಕಾರಿ ಕಛೇರಿಗಳಲ್ಲಿ ಮಂತ್ರಿ ಮಾಮೂಲು ಎತ್ತುತ್ತಿರುವುದು ಗುಟ್ಟಾಗೇನೂ ಉಳಿದಿಲ್ಲ. ಎಪಿಎಂಸಿ, ಟಿಎಪಿಸಿಎಂಎಸ್ ಪ್ರಾಧಿಕಾರಗಳಿಗೆ ನೇಮಕದ ಸಂದರ್ಭದಲ್ಲಿ ಎಂ.ಡಿ. ಹುಸೇನ್ ಸೇರಿದಂತೆ ಅನೇಕರನ್ನು ಕಡೆಗಣಿಸಲಾಯಿತು. ಜೆಡಿಎಸ್ ದ್ರೋಹಿಗಳನ್ನೇ ಅಲ್ಲಲ್ಲಿ ನಾಮಿನೇಟ್ ಮಾಡಲಾಗಿದೆ. ಈ ಕಾರಣಗಳಿಗೆ ಎಂ.ಡಿ. ಹುಸೇನ್, ಎಂ.ವಿ. ಪಾಟೀಲ್, ಪಕ್ಷದ ಮರ್ಯಾದೆ ಉಳಿಸಿದ ಮಹಾಂತಯ್ಯನ ಮಠ, ಕೆ. ಶರಣಪ್ಪರಿಗೆ ಪಕ್ಷದ ವಿಷಯದಲ್ಲಿ ಯಾವುದೇ ಗೌರವವಿಲ್ಲದಂತಾಗಿದೆ.

ಸ್ವತಃ ದೇವೇಗೌಡರಿಂದ 'ಟೂರಿಸ್ಟ್ ಗ್ಯಾಂಗ್' ಎಂದು ಕರೆಸಿಕೊಳ್ಳುವ ಸಂಗಣ್ಣ ಕರಡಿ ಅಧಿಕಾರಕ್ಕಾಗಿ ಯಾವ ಪಕ್ಷಕ್ಕಾದರೂ ಹಾರಬಲ್ಲ, ಅಧಿಕಾರ ಸಿಗದಿದ್ದರೆ ಪಕ್ಷ ಬಿಟ್ಟು ಓಡಿಬರುವ ಕರಡಿ ಇಂದು ಜೆಡಿಎಸ್ ಸೇರಿ, ಅಧ್ಯಕ್ಷಗಿರಿ ಪಡೆದಿದ್ದಾನೆ. ಮೊದಲೆಲ್ಲ ಕಾಂಗ್ರೆಸ್ಸಿನ ಕುಟುಂಬ ರಾಜಕಾರಣವನ್ನು ಟೀಕಿಸುತ್ತಿದ್ದಾತ, ಇಂದು ದೇವೇಗೌಡರ ಕುಟುಂಬ ರಾಜಕಾರಣವನ್ನು ಉದಾಹರಣೆಯಾಗಿ ಕೊಟ್ಟು, ಹೊಗಳುತ್ತಾ.. ತಾನೇ ಕುಟುಂಬರಾಜಕಾರಣಕ್ಕೆ ಇಳಿದಿದ್ದಾನೆ. ಎರಡು ತಿಂಗಳ ನಂತರ ಬರುವ ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷಗಿರಿಗೆ ತನ್ನ ಅಳಿಯ ಹಲ್ಲುಬೀರ ಸಿದ್ಧಲಿಂಗಪ್ಪನನ್ನು ತರುವ ಹುನ್ನಾರ ನಡೆಸಿದ್ದಾನೆ. ಸದರಿ ಸಿದ್ಧಲಿಂಗಪ್ಪ ನಾಲ್ಕು ವರ್ಷಗಳ ಹಿಂದೆ ಪತ್ರಕರ್ತನೊಬ್ಬನನ್ನು ಬಡಿಯಲು ಹೋಗಿದ್ದ. ಈ ಆರೋಪದ ಮೇಲೆ ನಗರ ಠಾಣೆಯಲ್ಲಿ ಈತನ ಮೇಲೆ ಕಂಪ್ಲೇಂಟೂ ಆಗಿತ್ತು.



ಸಂಗಣ್ಣ ಕರಡಿ

ಇನ್ನು ಗಿರೀಶ್ ಕಣವಿಗೆ ಚುನಾವಣೆಯಲ್ಲಿ ಕರಡಿಯನ್ನು ಬೆಂಬಲಿಸಿ ಬರೆಯದ ಪತ್ರಕರ್ತರನ್ನು ಬೈಯ್ಯುತ್ತ ಓಡಾಡುವುದೇ ಕೆಲಸ. ಕರಡಿ ಇಂದು ಪಕ್ಷದ ಹೆಸರು ಹೇಳಿಕೊಂಡು ಬಿಬಿಎಂ ಕಾಲೇಜ್ ತೆರೆದು, ಪಕ್ಷ ಸಂಘಟನೆಯನ್ನು ಕಾಲಕಸ ಮಾಡುತ್ತಿದ್ದರೆ, ಅತ್ತ ಬಿಜೆಪಿಯ ಸಂಗಪ್ಪ ವಕ್ಕಳದ ಭಯಂಕರ ಘಾಸ್ಯಾಗಿ ಸಂಘಟನೆ ಮಾಡುತ್ತಿದ್ದಾನೆ.

ಕುಮಾರಸ್ವಾಮಿ ಮೇಲಿರುವ 150 ಕೋಟಿ ರೂ. ಲಂಚದ ಆರೋಪ ಇವತ್ತಿಗೂ ಸಂಗಣ್ಣ ಕರಡಿಗೆ ಕಾಡುತ್ತಿದೆ. ಅದಕ್ಕೆ ತಾನು ಜೆಡಿಎಸ್‌ನಿಂದ ಸ್ಪರ್ಧಿಸಿದರೆ ಹೊಡೆತ ಗ್ಯಾರಂಟಿ ಎಂದು ಭಾವಿಸಿರುವ ಕರಡಿ ಪಕ್ಷ ಸಂಘಟನೆಗಿಂತ ಸ್ವಂತ ಬೆಳವಣಿಗೆಯತ್ತ ಹೆಚ್ಚು ಗಮನ ಹರಿಸಿದ್ದಾನೆ. ಜಿಲ್ಲಾ ಜೆಡಿಎಸ್‌ನಲ್ಲಿ ಪಕ್ಷದ ಸಭೆಗಳನ್ನೇ ಕರೆದಿಲ್ಲ ಈತ. ತಡವಾಗಿ ಪಕ್ಷಕ್ಕೆ ಸೇರಿದ್ದರೂ, ಜೆಡಿಎಸ್‌ನ ಫೌಂಡರ್ ತಾನೇ ಎಂಬಂತೆ ವರ್ತಿಸುತ್ತಿರುವ ಕರಡಿಗೆ ಕಾರ್ಯಕರ್ತರು ಹಿಡಿ ಶಾಪ ಹಾಕುತ್ತಲೇ ಇದ್ದಾರೆ. ರಾಜ್ಯವನ್ನು ಜೆಡಿಎಸ್ ಆಳುತ್ತಿದ್ದರೂ ಇಲ್ಲಿನ ಕಾರ್ಯಕರ್ತರಲ್ಲಿ ಒಂದಿಷ್ಟೂ ಕಳೆ ಕಾಣುತ್ತಿಲ್ಲ.

ದೇವೇಗೌಡ, ಕುಮಾರಸ್ವಾಮಿ, ರೇವಣ್ಣನವರ ಮುಂದೆ ನಿಂತು ವಿಧೇಯತೆ ತೋರುವ ಸಂಗಣ್ಣ ಕರಡಿಯ ಜಿಲ್ಲೆಯಲ್ಲಿ ಪಕ್ಷದ ಗತಿ ಅಧೋಗತಿಯಾಗಿದೆ. ಕಾರ್ಯಕರ್ತರ ನೋವು ಅರ್ಥಮಾಡಿಕೊಳ್ಳುವ ತಾಳ್ಮೆ ಕುಮಾರಸ್ವಾಮಿಯಲ್ಲಿದೆಯಾ? ಇದು ಅನ್ಸಾರಿಗೂ ಅನ್ವಯಿಸುತ್ತೆ ಅಂತ ಬೇರೆ ಹೇಳಬೇಕಾಗಿಲ್ಲ.

-ವರದಿಗಾರ

ನಕ್ಸಲ್ ಬೆಂಬಲಿಗರ ಪಟ್ಟಿ ದೊಡ್ಡದಾಗಬೇಕು!

ಬಿಜೆಪಿ ಕಾರ್ಯಕರ್ತರ ಒತ್ತಡಕ್ಕೆ ಮಣಿದ ರಾಜ್ಯ ಪೊಲೀಸ್ ಇಲಾಖೆ, 'ನಕ್ಸಲರು, ಅವರ ಬೆಂಬಲಿಗರು' ಎಂಬ ಪಟ್ಟಿ ಬಿಡುಗಡೆ ಮಾಡುವ ಮೂಲಕ ತನ್ನ ಅಜ್ಞಾನವನ್ನು ಪ್ರದರ್ಶಿಸಿದೆ.

ಪೊಲೀಸ್ ಇಲಾಖೆಯ (ಸದ್ಯಕ್ಕೆ ಚೆಡ್ಡಿಗಳ) ಮಾನದಂಡಗಳ ಪ್ರಕಾರ ನೋಡುವುದಾದರೆ ನಕ್ಸಲ್ ಬೆಂಬಲಿಗರ ಪಟ್ಟಿ ಇನ್ನೂ ದೊಡ್ಡದಾಗಬೇಕಾಗುತ್ತದೆ. ಹಾಗೆ ನೋಡುತ್ತಾಹೋದರೆ ಇಡೀ ಮತದಾರರ ಪಟ್ಟಿಯನ್ನೇ (ರಾಜಕಾರಣಿಗಳು, ಅವರ ಚೇಲಾಗಳನ್ನು ಬಿಟ್ಟು) ನಕ್ಸಲ್ ಬೆಂಬಲಿಗರ ಪಟ್ಟಿ ಎಂದು ಬಿಡುಗಡೆ ಮಾಡಿಬಿಡಲು ನಕಲು ಅಡ್ಡಿಯೇನಿಲ್ಲ.

ಒಂದು ಪತ್ರ

ಈ ಬುದ್ಧಿಗೇಡಿ ಪೊಲೀಸ್ ಇಲಾಖೆಯನ್ನು ಬಿಟ್ಟುಬಿಡಿ. ಆದರೆ ನಾವು ಗೌರವಿಸುವ, ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ನಂಬಿಕೆ ಇಟ್ಟಿರುವ ಕೆಲ ಹಿರಿಯರು 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯ ಬಗ್ಗೆ ಆಧಾರರಹಿತ ಆಪಾದನೆ ಮಾಡುತ್ತಲೇ ಬಂದಿರುವುದು ಬೇಸರದ ವಿಷಯ.

ಅಧಿಕಾರದಲ್ಲಿದ್ದೂ ಬಾಬಾಬುಡನ್‌ಗಿರಿಯಲ್ಲಿ ಚೆಡ್ಡಿಗಳ ಕುತಂತ್ರ ನಡೆಯುತ್ತಿಲ್ಲ. ಇದು ಪ್ರಗತಿಪರರ ಹೋರಾಟಕ್ಕೆ ಸಿಕ್ಕ ಜಯ. ಈಗ ಹೇಳಿ, ಇಲ್ಲಿ ಪ್ರಗತಿಪರರೆಂದರೆ ಯಾರು? ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಲ್ಲವೆ? ಇಲ್ಲೂ ಮಾವೋವಾದವನ್ನು ಬೆಂಬಲಿಸುವವರಿರಬಹುದು. ಇಲ್ಲಿರುವ ಹಲವರಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳೂ ಇರಬಹುದು. ಆದರೆ ವೇದಿಕೆಯ ಸಮಗ್ರ ಆಶಯ ಮಾತ್ರ ಪ್ರಜಾಸತ್ತಾತ್ಮಕವಾಗಿಯೇ ಇದೆ. ಲಂಕೇಶ್, ತೇಜಸ್ವಿ, ರಾಮದಾಸ್, ನಂಜುಂಡಸ್ವಾಮಿ, ಸುಂದರೇಶ್ ಮುಂತಾದವರಿಂದ ಪ್ರಭಾವಿತರಾದ ಸಾವಿರಾರು ಜನ ವೇದಿಕೆಯಲ್ಲಿದ್ದಾರೆ. ಅಷ್ಟಕ್ಕೂ ಕರ್ನಾಟಕದಲ್ಲಿ ಸದ್ಯ ಚೆಡ್ಡಿಗಳಿಗೆ ಎದುರಾಗಿ ಇರುವ ಅತ್ಯಂತ ಶಿಸ್ತಿನ, ಬದ್ಧತೆಯ ಸಂಘಟನೆ ಎಂದರೆ ಅದು ಸೌಹಾರ್ದ ವೇದಿಕೆಯೊಂದೇ...

ಕಡಿದಾಳು ಶಾಮಣ್ಣ, ರಾಜೇಂದ್ರ ಚೆನ್ನಿ, ನಗರಿ ಬಾಬಯ್ಯ, ಕೆ.ಎಲ್. ಅಶೋಕ ಇನ್ನು ಮುಂತಾದವರು ನಕ್ಸಲ್ ಬೆಂಬಲಿಗರು ಎನ್ನುವುದಾದರೆ, ಇವರನ್ನು ಬೆಂಬಲಿಸಿ ಪತ್ರಿಕೆಗಳಿಗೆ ಪತ್ರ ಬರೆದಿರುವ ಅನಂತಮೂರ್ತಿ, ಜಿ.ರಾಜಶೇಖರ, ಕೆ.ಫಣಿರಾಜ್, ಸೋಮಯಾಜಿಗಳೂ ನಕ್ಸಲ್ ಬೆಂಬಲಿಗರೇ ಆಗುತ್ತಾರಲ್ಲವೆ? ಮತ್ತು ಇವರನ್ನೆಲ್ಲ ಬೆಂಬಲಿಸುವ, ಸೌಹಾರ್ದ ವೇದಿಕೆಯಲ್ಲಿ ಸಕ್ರಿಯವಾಗಿರುವ ನನ್ನಂತಹ ಸಾವಿರಾರು ಸಾಮಾನ್ಯರೂ ನಕ್ಸಲ್ ಬೆಂಬಲಿಗರೇ ಆಗುತ್ತಾರಲ್ಲವೆ? ನಂದಗುಡಿ SEZ ವಿರುದ್ಧ ಸರಕಾರ, ಪ್ರಭುತ್ವಗಳನ್ನು ಪ್ರಶ್ನಿಸುತ್ತಿರುವ ಅಲ್ಲಿಯ ಕೃಷಿಕರು, ಕೃಷಿ ಕಾರ್ಮಿಕರೂ ನಕ್ಸಲ್ ಬೆಂಬಲಿಗರೇ ಆಗಿಬಿಡುತ್ತಾರಲ್ಲವೆ?

ಹಾಗಾಗುವುದಾದರೆ, ದಯವಿಟ್ಟು ಆ ನಕ್ಸಲ್ ಪಟ್ಟಿಗೆ ನನ್ನಂತಹವರನ್ನು ಸೇರಿಸಿಬಿಡಿ. ಆ ಪಟ್ಟಿಯಲ್ಲಿ ನಂದಗುಡಿಯ ಜನ, ಸ್ಲಮ್ ನಿವಾಸಿಗಳು, ಗಿರಿಜನರು, ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರೆಲ್ಲರನ್ನೂ ಸೇರಿಸಿ...

ನಮ್ಮ ಪಟ್ಟಿ ದೊಡ್ಡದಾಗುತ್ತಲೇ ಹೋಗುತ್ತಿದೆ. ಅದು ಈ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದೇ!

- ಪಿ.ಕೆ.ಮಲ್ಲನಗೌಡರ್

ತೋಂಟಗುಂಟಿ (ಗದಗ)

'ಸೇತು ಸಮುದ್ರಂ' ಮತ್ತು 'ರಾಮ ಸೇತು' ವಿವಾದ

'ಸೇತು ಸಮುದ್ರಂ' ಎಂಬುದು ಭಾರತ ಮತ್ತು ಶ್ರೀಲಂಕಾಗಳ ನಡುವಿನ ಸಮುದ್ರದಲ್ಲಿ ಹಡಗುಗಳ ಸುಗಮ ಸಂಚಾರಕ್ಕೆ ಪೂರ್ವ - ಪಶ್ಚಿಮವಾಗಿ 167 ಕಿ.ಮೀ.ಗಳಷ್ಟು ಉದ್ದನಾದ ಕಾಲುವೆ ತೋಡುವ ಯೋಜನೆ. ಈ ಭಾಗದ ಸಮುದ್ರ ಆಳವಿಲ್ಲದೆ ಬಹು ಕೇಕವಾಗಿ ತಟ್ಟೆಯಂತಿರುವುದರಿಂದ ಇಲ್ಲಿ ಹಡಗುಗಳು ಸಂಚರಿಸಲಾರವು. ಪೂರ್ವ-ಪಶ್ಚಿಮವಾಗಿ ಹಡಗುಗಳು ಸಂಚರಿಸಬೇಕೆಂದರೆ ಶ್ರೀಲಂಕಾವನ್ನು ಸುತ್ತುಹಾಕಿ ಬರಬೇಕಾಗುತ್ತದೆ. ಹೀಗಾಗಿ ಇಲ್ಲಿ ಪೂರ್ವ-ಪಶ್ಚಿಮವಾಗಿ ಆಳವಾದ ಕಾಲುವೆಯನ್ನು ತೋದಿ ಹಡಗುಗಳು ಈ ಕಾಲುವೆಯ ಮೂಲಕವೇ ಓಡಾಡುವುದಕ್ಕೆ ಅನುವು ಮಾಡಿಕೊಡುವ ಯೋಜನೆಯೇ ಸೇತು ಸಮುದ್ರ ಯೋಜನೆ.



ಒಂದು ವೇಳೆ ಇದು ಕಾರ್ಯಗತವಾದರೆ ಶ್ರೀಲಂಕಾವನ್ನು ಸುತ್ತಿಬರುವುದು ತಪ್ಪುತ್ತದೆಯಾದ್ದರಿಂದ ಸುಮಾರು 30 ತಾಸುಗಳ ಹಡಗುಯಾನ ಕಡಿತವಾದಂತಾಗುತ್ತದೆ. ಅಲ್ಲದೆ ಈ ಯೋಜನೆಯಿಂದ ಹಲವಾರು ಜನರಿಗೆ ಉದ್ಯೋಗಾವಕಾಶಗಳೂ ದೊರೆಯುತ್ತವೆ. ಈ ಯೋಜನೆಯು ಒಂದು ಹಡಗುಯಾನ ಬಂದರು ಮತ್ತು ಹೊಸ ಮೀನುಗಾರಿಕಾ ಬಂದರುಗಳನ್ನು ನಿರ್ಮಿಸುವುದನ್ನೂ ಒಳಗೊಂಡಿದೆ. ಈ ಯೋಜನೆಯ ಕೊನೆಯ ಹೊತ್ತಿಗೆ ರಾಮೇಶ್ವರಂ ದೇಶದ ಅತ್ಯಂತ ದೊಡ್ಡ ಬಂದರಾಗಿ ಪರಿವರ್ತನೆಗೊಳ್ಳಲಿದೆ. ಈ ಯೋಜನೆಯು ತಮಿಳುನಾಡಿನ ಕರಾವಳಿಯಲ್ಲಿ ಆರ್ಥಿಕ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಒಂದು ಹೊಸ ತಿರುವನ್ನೇ ನೀಡುವ ಸಾಧ್ಯತೆ ಇದೆ. ಟ್ಯೂಟಿಕೋರಿನ್ ಬಂದರು ಈ ಯೋಜನೆಯಿಂದ ಬಹಳ ಪ್ರಯೋಜನ ಪಡೆದುಕೊಳ್ಳಲಿದೆ. ಜೊತೆಗೆ ಎನ್ನೂರ್, ಕುಡ್ಡಲೂರ್, ನಾಗಪಟ್ಟಣಂ, ತೋಂಡಿ, ವಲಿನೋಕಮ್ ಮತ್ತು ಕನ್ಯಾಕುಮಾರಿಗಳನ್ನೂ ಒಳಗೊಂಡಂತೆ ಒಟ್ಟು 13 ಇತರ ಬಂದರುಗಳನ್ನೂ ಈ ಯೋಜನೆಯ ಭಾಗವಾಗಿ ಅಭಿವೃದ್ಧಿಪಡಿಸಲಾಗುವುದೆಂದು ತಮಿಳುನಾಡು ಸರ್ಕಾರ ಘೋಷಿಸಿದೆ.

ಈ ಯೋಜನೆಯನ್ನು ಕೇಂದ್ರ ಸರ್ಕಾರ 2005ರಲ್ಲಿ ಪ್ರಾರಂಭಿಸಿತು. ತದನಂತರದಲ್ಲಿ ತಮಿಳುನಾಡಿನ ಮುಖ್ಯಮಂತ್ರಿ ಎಂ. ಕರುಣಾನಿಧಿಯವರು ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ವಿಶೇಷ ಕಾಳಜಿಯನ್ನು ವಹಿಸಿಕೊಂಡರು.

ಆದರೆ ಈ ಯೋಜನೆಗೆ ಸಂಘಪರಿವಾರ ತಾನೇಜಾ ಎಂಬ ಘಟಿಂಗನ ಮಾತುಕಟ್ಟಿಕೊಂಡು ಅನಗತ್ಯ ತಕರಾರು ಎತ್ತುತ್ತಿದೆ. ರಾಮಾಯಣ ಕಾಲದಲ್ಲಿ ಶ್ರೀರಾಮಚಂದ್ರ ತನ್ನ ಹೆಂಡತಿ ಸೀತೆಯನ್ನು ರಾವಣನಿಂದ ಬಿಡಿಸಿಕೊಂಡು ಬರುವುದಕ್ಕಾಗಿ ರಾಮನ ಸೈನ್ಯ ಹೋಗುವುದಕ್ಕೆ ಭಾರತ ಮತ್ತು ಶ್ರೀಲಂಕಾಗಳ ನಡುವೆ ಸೇತುವೆಯನ್ನು ನಿರ್ಮಿಸಿದ್ದ (ರಾಮ ಸೇತು). ಈ 'ಸೇತು ಸಮುದ್ರಂ' ಯೋಜನೆಯು ಅನುಷ್ಠಾನಕ್ಕೆ ಬಂದರೆ ರಾಮ ನಿರ್ಮಿಸಿದ ಸೇತುವೆಗೆ ಧಕ್ಕೆ ಬರುತ್ತದೆ ಎಂಬುದು ಅದರ ವಾದ. ಅಲ್ಲದೆ, ಇದನ್ನೊಂದು ರಾಷ್ಟ್ರೀಯ ಸ್ಮಾರಕ ಎಂದು ಪರಿಗಣಿಸಬೇಕೆಂದು ಒತ್ತಾಯಿಸುತ್ತಿದೆ. ಜೊತೆಗೆ ಅದನ್ನು ವಿಶ್ವ ಪರಂಪರೆ ಪಟ್ಟಿಗೆ ಸೇರಿಸಬೇಕೆಂದು ವಾದಿಸುತ್ತಿದೆ. ಈ ಪ್ರದೇಶದಲ್ಲಿ ಮರಳು ಮತ್ತು ಸುಣ್ಣದ ಕಲ್ಲಿನಿಂದ ನೈಸರ್ಗಿಕವಾಗಿ ನಿರ್ಮಿತವಾಗಿರುವ ಒಂದು ರೀತಿಯ ದಿಣ್ಣೆಯನ್ನೇ ಸಂಘಪರಿವಾರದವರು 'ರಾಮ ಸೇತು'ವಿನ ಅವಶೇಷವೆಂದು ವಾದಿಸುತ್ತಿದ್ದಾರೆ.

ಆದರೆ, ಭಾರತೀಯ ಭೂ ಸರ್ವೇಕ್ಷಣಾ ಇಲಾಖೆ ಈ ವಾದವನ್ನೆಲ್ಲಾ ಸಾರಾಸಗಟಾಗಿ ತಳ್ಳಿ ಹಾಕಿದೆ. ಈ ಕುರಿತು ವಿವರವಾಗಿ ಅಧ್ಯಯನ ನಡೆಸಿದ ಅದು ಭಾರತ ಮತ್ತು ಶ್ರೀಲಂಕಾಗಳ ನಡುವಿನ ಸಮುದ್ರದಲ್ಲಿ ಮರಳುಶಿಲೆ, ಜೇಡಿಮಣ್ಣು, ಸುಣ್ಣದ ಕಲ್ಲು ಮುಂತಾದವುಗಳು ಸಂಚಯಗೊಂಡು ಒಂದು ರೀತಿಯ ದೊಡ್ಡ ದಿಣ್ಣೆ ನಿರ್ಮಾಣಗೊಂಡಿದೆ. ಒಂದು ಖಂಡವನ್ನು ಮತ್ತೊಂದು ಖಂಡದ ಜೊತೆಗೆ ಜೋಡಿಸುವ ಸಮುದ್ರದ ತಳಭಾಗದಲ್ಲಿ ಈ ರೀತಿಯ ಭೂರಚನೆಗಳು ಸಾಮಾನ್ಯವಾಗಿದ್ದು ಅವನ್ನು ಇಲಾಖೆಯು 'ಕೂಡುನೆಲ', ಅಥವ 'ಚಾಚುಭೂಮಿ' (tombolo) ಎಂದು ಕರೆದಿದೆ. ಹಾಗಾಗಿ ಈ ದಿಣ್ಣೆ ಮಾನವ ನಿರ್ಮಿತವಾದುದಲ್ಲ, ಬದಲಾಗಿ ನೈಸರ್ಗಿಕವಾಗಿ ತನ್ನಿಂದ ತಾನೇ ರೂಪುಗೊಂಡದ್ದು ಎಂದು ಅದು ಸ್ಪಷ್ಟವಾಗಿ ಹೇಳಿದೆ.

ಆದರೆ ಸಂಘಪರಿವಾರವೆಲ್ಲಿ ಇಂತಹ ವೈಜ್ಞಾನಿಕ ತಳಹದಿಯ ಮೇಲೆ ನಿಂತ ವಾದಗಳನ್ನು ಕೇಳಲು ಸಿದ್ಧವಿರುತ್ತದೆ? ಅದಕ್ಕೇನಿದ್ದರೂ ತಾನೇಜನಂತಹ ಘಟಿಂಗನ ವಾದಗಳೇ ರುಚಿಸುತ್ತವೆ. ■

ಸಂಘಪರಿವಾರಕ್ಕೆ ಮಕ್ಮಲ್ ಟೋಪಿ!

ಇಡೀ ದೇಶಕ್ಕೆ ಸಂಸ್ಕೃತಿ, ಪರಂಪರೆ, ವಿಜ್ಞಾನ ಮುಂತಾದವುಗಳ ಬಗ್ಗೆ ಪುಂಖಾನುಪುಂಖವಾಗಿ ಪ್ರವಚನ ಬಿಗಿಯುವ ಸುದರ್ಶನ್ ಮತ್ತು ಅಶೋಕ್ ಸಿಂಘಾಲ್‌ರಂತಹ ಸಂಘಪರಿವಾರದ ಮಹಾನುಭಾವರು ಪುನೀಶ್ ತಾನೇಜ ಎಂಬ ಘಟಿಂಗ ಊದಿದ ಪುಂಗಿಗೆ ತಲೆಯಾಡಿಸುವಷ್ಟು ಮೂರ್ಖರಾಗಿ ಮಕ್ಮಲ್ ಟೋಪಿ ಹಾಕಿಸಿಕೊಂಡಿದ್ದಾರೆ.

ಯಾವುದಾದರೊಂದು ಜ್ಯಾತಿ ತೆಗೆದು ಸಮಾಜದಲ್ಲಿ ಶಾಂತಿ ಕದಡದಿದ್ದರೆ ಸಂಘಪರಿವಾರದ ಮಂಗಗಳಿಗೆ ನಿದ್ದೆ ಬರುವುದಿಲ್ಲ, ಅದಕ್ಕಾಗಿ ಏನಾದರೊಂದು ಗೊಂದಲವನ್ನು ಹುಡುಕುತ್ತಲೇ ಇರುತ್ತಾರೆ. ಇಂತಹ ವಿತಂಡವಾದಿ ಮಂಗಗಳಿಗೇ ಮಕ್ಮಲ್ ಟೋಪಿ ಹಾಕಿ ಕೇಕೆಹಾಕಿ ಗೇಲಿ ಮಾಡುವ ಭೂಪರೂ ಇದ್ದಾರೆಂದರೆ ನಂಬುತ್ತೀರಾ? ಹೌದು, ತಾನೇಜ ಎಂಬ ಮತ್ತೊಂದು ಮಂಗ ಇತ್ತೀಚೆಗೆ 'ಸೇತು ಸಮುದ್ರಂ' ವಿಚಾರದಲ್ಲಿ ಆರ್‌ಎಸ್‌ಎಸ್‌ನ ಸರಸಂಘಚಾಲಕ ಕೆ.ಎಸ್. ಸುದರ್ಶನ್ ಮತ್ತು ವಿಶ್ವ ಹಿಂದೂ ಪರಿಷತ್ತಿನ ಅಧ್ಯಕ್ಷ ಅಶೋಕ್ ಸಿಂಘಾಲ್‌ರನ್ನೂ ಒಳಗೊಂಡಂತೆ ಸಂಘಪರಿವಾರದ ಘಟಾನುಘಟಿಗಳಿಗೆ ಪಕ್ಕಾ ಮಕ್ಮಲ್ ಟೋಪಿ ಹಾಕಿ ಗೇಲಿ ಮಾಡಿದ್ದಾನೆ. ಈಗ ತನ್ನ ವಿರುದ್ಧ ಸಂಘಪರಿವಾರದ ಚೆಡ್ಡಿಗಳು ತಿರುಗಿಬೀಳಬಹುದೆಂದು ತಲೆಮರೆಸಿಕೊಂಡಿದ್ದಾನೆ.


ಮಕ್ಮಲ್ ಟೋಪಿ

ಮೂಲತಃ ಉತ್ತರ ಪ್ರದೇಶದ ಮೀರಟ್‌ನವನಾದ ಈತ ತನ್ನ ಹೆಸರು ಡಾ. ಪುನೀಶ್ ತಾನೇಜ ಎಂದೂ, ತಾನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಘಟನೆ - ಇಸ್ರೋ- ಯ ಬಾಹ್ಯಾಕಾಶ ವಿಜ್ಞಾನಿ ಎಂದೂ, ಪ್ರಧಾನಮಂತ್ರಿಗಳ ಕಾರ್ಯಾಲಯದಲ್ಲಿ ಹೆಚ್ಚುವರಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಪ್ರಸ್ತುತವಾಗಿ ಎರಡು ವರ್ಷಗಳ ರಜೆಯ ಮೇಲಿರುವುದಾಗಿಯೂ, ತಾನು ಸರ್ಕಾರ ಕೈಗೆತ್ತಿಕೊಂಡಿರುವ 'ಸೇತು ಸಮುದ್ರಂ' ಯೋಜನೆಯಿಂದ ರಾಮಾಯಣ ಕಾಲದಲ್ಲಿ ರಾವಣನಿಂದ ಸೀತೆಯನ್ನು ರಕ್ಷಿಸಿಕೊಂಡು ಬರುವುದಕ್ಕಾಗಿ ರಾಮನ ಸೈನ್ಯ ಭಾರತ ಮತ್ತು ಶ್ರೀಲಂಕಾಗಳ ನಡುವೆ ನಿರ್ಮಿಸಿದ 'ರಾಮ ಸೇತುವೆ'ಗೆ ಧಕ್ಕೆ ಬರುತ್ತದೆ ಎಂಬುದರ ಬಗ್ಗೆ ವಿವರವಾಗಿ ಅಧ್ಯಯನ ನಡೆಸಿರುವುದಾಗಿಯೂ ಹಾಗೂ ಈ ಅಧ್ಯಯನ ನಡೆಸಿದ್ದಕ್ಕಾಗಿ ತನಗೆ ಡಿಎಂಕೆ ಕಾರ್ಯಕರ್ತರಿಂದ ಪ್ರಾಣಾಪಾಯವಿದೆ ಎಂದೂ ಹೇಳಿಕೊಂಡು ಆರ್‌ಎಸ್‌ಎಸ್‌ನ ನಾಯಕರ ಮನ ಗೆದ್ದಿದ್ದಾನೆ. ಅಲ್ಲದೆ ತಾನೊಬ್ಬ ವಿಜ್ಞಾನಿ ಮತ್ತು ಪ್ರಧಾನಮಂತ್ರಿಗಳ ಕಾರ್ಯಾಲಯದಲ್ಲಿ ಹೆಚ್ಚುವರಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ನಂಬಿಸಲು ಕೆಲವು ಸುಳ್ಳು ವಿಜಿಟಿಂಗ್ ಕಾರ್ಡ್‌ಗಳನ್ನು ತೋರಿಸಿದ್ದಾನೆ. ಇವನನ್ನು ಆರ್‌ಎಸ್‌ಎಸ್‌ನ ನಾಯಕಮಣಿಗಳು ಎಷ್ಟರಮಟ್ಟಿಗೆ ನಂಬಬಿಟ್ಟರೆಂದರೆ ಆರ್‌ಎಸ್‌ಎಸ್‌ನ ಸರಸಂಘಚಾಲಕ ಕೆ.ಎಸ್. ಸುದರ್ಶನ್ ಕೂಡ ಖುದ್ದಾಗಿ ಈತನನ್ನು ಭೇಟಿ ಮಾಡಿ 'ಸೇತು ಸಮುದ್ರಂ' ಮತ್ತು 'ರಾಮಸೇತು'ಗಳ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ.



ಆದರೆ, ಈತ ನಿಜಕ್ಕೂ ಬಾಹ್ಯಾಕಾಶ ವಿಜ್ಞಾನಿ ಹೌದೇ? ಈತ ನಿಜಕ್ಕೂ ಪ್ರಧಾನಮಂತ್ರಿಗಳ ಕಾರ್ಯಾಲಯದಲ್ಲಿ ಹೆಚ್ಚುವರಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾನೆಯೇ, ಈತ ನಿಜಕ್ಕೂ 'ರಾಮಸೇತು-ಸೇತು ಸಮುದ್ರಂ'ಗಳ ವಿಚಾರವಾಗಿ ಅಧ್ಯಯನ ನಡೆಸಿದ್ದಾನೆಯೇ, ಈತ ತೋರಿಸುತ್ತಿರುವ ವಿಜಿಟಿಂಗ್ ಕಾರ್ಡ್‌ಗಳ ಸತ್ಯಾಸತ್ಯತೆ ಏನು, ಎಂಬ ವಿಚಾರಗಳ ಬಗ್ಗೆ ಖಚಿತಪಡಿಸಿಕೊಳ್ಳುವ ಗೋಜಿಗೆ ಹೋಗದ ಆರ್‌ಎಸ್‌ಎಸ್ ನಾಯಕಮಣಿಗಳು ಅವನು ಹೇಳಿದ್ದಕ್ಕೆಲ್ಲಾ ಕೋಲುಬಸವನಂತೆ ತಲೆಯಾಡಿಸುತ್ತಲೇ ಹೋದರು. ಬಾಬ್ರಿ ಮಸೀದಿ ಇದ್ದ ಜಾಗದಲ್ಲಿ ಹಿಂದೆ ರಾಮಮಂದಿರವಿತ್ತು ಎಂದು ಚಾರಿತ್ರಿಕ ಆಧಾರಗಳ ಮೂಲಕ ಸಾಬೀತುಪಡಿಸಲು ಬಿ.ಬಿ.ಲಾಲ್‌ನಂತಹ ಖೊಟ್ಟಿ ಇತಿಹಾಸಕಾರನನ್ನು ಬಳಸಿಕೊಂಡಂತೆ 'ಸೇತು ಸಮುದ್ರಂ' ಯೋಜನೆಯ ಸ್ಥಳದಲ್ಲಿ ರಾಮ ನಿರ್ಮಿಸಿದ ಸೇತುವಿಯಿದೆ ಎಂದು ವೈಜ್ಞಾನಿಕ ವಾಗಿ ನಿರೂಪಿಸಲು ಈ ತಾನೇಜನನ್ನು ಬಳಸಿಕೊಳ್ಳಲು ತಂತ್ರ ರೂಪಿಸಿದರು. ಈ 'ಸೇತು ಸಮುದ್ರಂ' ಯೋಜನೆಯ ವಿರೋಧಕ್ಕಾಗಿ ಹೀಗೆ ಬಲಿಷ್ಠ ತಾತ್ವಿಕ ಮತ್ತು ವೈಜ್ಞಾನಿಕ ತಳಹದಿ ರೂಪಿಸಲು ತಾನೇಜ ಬಹಳವಾಗಿಯೇ ಉಪಯೋಗಕ್ಕೆ ಬರುತ್ತಾನೆಂದು ಆ ನಾಯಕರೆಲ್ಲರೂ ನಂಬಿದ್ದರು. ಅಲ್ಲದೇ ಕೇಂದ್ರದ ಯುಪಿಎ ಸರ್ಕಾರದಲ್ಲಿ, ಅದರಲ್ಲೂ ಪ್ರಧಾನಮಂತ್ರಿಗಳ ಕಾರ್ಯಾಲಯದಲ್ಲಿ ಇಂತಹ ಒಬ್ಬ ಹಿರಿಯ ಅಧಿಕಾರಿ ಆರ್‌ಎಸ್‌ಎಸ್‌ನ ಪರವಾಗಿದ್ದರೆ ಆತನಿಂದ ಅನೇಕ ಗುಪ್ತವಿಚಾರಗಳನ್ನು ತಿಳಿದುಕೊಳ್ಳಬಹುದೆಂಬ ಆಲೋಚನೆಯೂ ಸಂಘಪರಿವಾರದ ಧುರೀಣರಿಗಿರದೇ ಇದ್ದಿಲ್ಲ. ತಾವು ಚಾಪೆಯ ಕೆಳಗೆ ನುಸುಳುತ್ತಾ ಈತನನ್ನು ಬಳಸಿಕೊಳ್ಳಬಹುದೆಂದು ಈ ಧುರೀಣರು ತಮ್ಮ ಬೆನ್ನುತಾವೇ ತಟ್ಟಿಕೊಂಡಿರಲೂಬಹುದು.

ನಂತರದಲ್ಲಿ ತಾನೇಜ ಹಲವಾರು ಬಾರಿ ಸುದರ್ಶನ್‌ರವರನ್ನು ಭೇಟಿ ಮಾಡಿದ, ಅವರೊಂದಿಗೆ ಬೇಕಾದಾಗಲೆಲ್ಲಾ ಅವರ ವೈಯಕ್ತಿಕ ಮೊಬೈಲ್ ಫೋನ್‌ನಲ್ಲಿ ಮಾತನಾಡಿದ. ಒಮ್ಮೆ ಈತ ತನಗೆ ಪ್ರಮೋಶನ್ ಸಿಕ್ಕು ಗೌಹಾತಿಗೆ ವರ್ಗಾವಣೆ ಮಾಡಲಾಗಿದೆ ಎಂದು ಪ್ರಧಾನಮಂತ್ರಿಗಳ ಸಚಿವಾಲಯದ ಲೆಟರ್‌ಹೆಡ್‌ನಲ್ಲಿದ್ದ ಆದೇಶವನ್ನು ತೋರಿಸಿದ. ಇದನ್ನೆಲ್ಲಾ ಸಂಘಪರಿವಾರದ ನಾಯಕಮಣಿಗಳು ನಂಬುತ್ತಲೇ ಬಂದರು. 2005ರಲ್ಲಿ ಅವನನ್ನು ಆರ್‌ಎಸ್‌ಎಸ್‌ನ ಪ್ರಚಾರಕನನ್ನಾಗಿ ನೇಮಿಸಿದರು.




ಒಟ್ಟಿನಲ್ಲಿ ತಾನೇಜ ಎಂಬ ಘಟಿಂಗ ಬಾಹ್ಯಾಕಾಶ ವಿಜ್ಞಾನಿಯ ವಾದಗಳನ್ನೇ ಆಧಾರವಾಗಿರಿಸಿಕೊಂಡು ಸಂಘಪರಿವಾರ 'ಸೇತು ಸಮುದ್ರಂ' ಯೋಜನೆಯನ್ನು ವಿರೋಧಿಸಲು ದೇಶದಾದ್ಯಂತ ಅಭಿಯಾನ ಹಮ್ಮಿಕೊಂಡಿತು.

ಆದರೆ, ಈ ತಾನೇಜ ಎಂಬ ಸ್ವಘೋಷಿತ ಘಟಿಂಗ ವಿಜ್ಞಾನಿ (ಅಜ್ಞಾನಿ ಎಂದರೇನೇ ಹೆಚ್ಚು ಸೂಕ್ತ) ರಂಗೋಲಿಯ ಕೆಳಗೆ ನುಸುಳುತ್ತಿದ್ದುದು ಅವರಿಗೆ ಗೊತ್ತೇ ಇರಲಿಲ್ಲ.

ಸಂಘಪರಿವಾರದ ತತ್ವಜ್ಞಾನಿ

ಈತನನ್ನು ಸಂಪೂರ್ಣವಾಗಿ ನಂಬಿದ ಸಂಘಪರಿವಾರದ ನಾಯಕರು ಈತನಿಗೆ 'ಸೇತು ಸಮುದ್ರಂ' ಕುರಿತು ಸಾಕ್ಷ್ಯಚಿತ್ರವನ್ನು ತಯಾರು ಮಾಡುವ ಜವಾಬ್ದಾರಿಯನ್ನು ವಹಿಸಿದರು. ಅದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನೂ ಅವನಿಗೆ ಕೊಟ್ಟರು. (ಸುಮಾರು ಏಳು ಲಕ್ಷಗಳನ್ನು ಕೊಡಲಾಗಿದೆ ಎಂದು ಸಂಘಪರಿವಾರದವರೇ ಒಪ್ಪಿಕೊಂಡಿದ್ದಾರೆ.) ಅಲ್ಲದೇ ಈತನಿಗೆ ಉಳಿದುಕೊಳ್ಳಲು ದೆಹಲಿಗೆ ಹೊಂದಿಕೊಂಡಿರುವ ನೊಯಿಡಾ ಎಂಬ ಬೃಹತ್ ಕೈಗಾರಿಕಾ ಉಪನಗರದ ಒಂದು ದೊಡ್ಡ ಅಪಾರ್ಟ್‌ಮೆಂಟ್‌ನಲ್ಲಿ ಒಂದು ವಿಶಾಲ ಮನೆಯನ್ನೂ ವ್ಯವಸ್ಥೆ ಮಾಡಿದರು. ಈತನಿಗೆ ಪ್ರಾಣ ಬೆದರಿಕೆ ಇದೆಯೆಂಬ ಕಾರಣವೊಡ್ಡಿ ಇವನ ವಾಸ ಸ್ಥಳವನ್ನು ಗೌಪ್ಯವಾಗಿಡಲಾಗಿತ್ತು, ಇನ್ನೂ ವಿಶೇಷವೆಂದರೆ, ಆರ್‌ಎಸ್‌ಎಸ್‌ನ ಸರಸಂಘಚಾಲಕ ಕೆ.ಎಸ್. ಸುದರ್ಶನ್‌ನನ್ನು ಯಾವಾಗ ಬೇಕಾದರೂ ಸಂಪರ್ಕಿಸಬಹುದಾದ ವ್ಯವಸ್ಥೆ ಮಾಡಲಾಗಿತ್ತು!



ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ತಾನೇಜ ತನ್ನ ಬಗ್ಗೆ ಹೇಳಿದ್ದಕ್ಕೆಲ್ಲಾ ಸಂಘಪರಿವಾರದ ನಾಯಕರು ಹೇಗೆ ತಲೆಯಲ್ಲಾಡಿಸಿದರೋ ಅಂತೆಯೇ ಅವನು 'ಸೇತು ಸಮುದ್ರಂ' ಮತ್ತು 'ರಾಮ ಸೇತು'ವಿನ ಬಗ್ಗೆ ಇಟ್ಟ ಎಲ್ಲ ಅವೈಜ್ಞಾನಿಕ ವಿತಂಡವಾದಗಳಿಗೆ ಇಡೀ ಸಂಘಪರಿವಾರ ತಲೆಯಲ್ಲಾಡಿಸಿತು. ಈ ಯೋಜನೆಯನ್ನು 'ರಾಮ ಸೇತು'ವಿಗೆ ಧಕ್ಕೆ ಬರದಂತೆ ಮಾರ್ಪಡಿಸಬೇಕೆಂದು ಯುಪಿಎ ಸರ್ಕಾರವನ್ನು ವಿಶ್ವ ಹಿಂದೂ ಪರಿಷತ್ ಮತ್ತು ಆರ್‌ಎಸ್‌ಎಸ್ ಎರಡೂ ಆಗ್ರಹಿಸತೊಡಗಿದವು. ಒಂದು ವೇಳೆ ಸರ್ಕಾರ ಯೋಜನೆಯನ್ನು ಮಾರ್ಪಡಿಸದಿದ್ದರೆ ಕೇಂದ್ರ ಸರ್ಕಾರದ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ನಡೆಸುವುದಾಗಿಯೂ ಈ ಸಂಘಟನೆಗಳು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟವು. ಆರ್‌ಎಸ್‌ಎಸ್‌ನ ರಾಜಕೀಯ ಮುಖವಾಣಿಯಾದ ಬಿಜೆಪಿಯಂತೂ ತಾನೇಜನ ವಿತಂಡವಾದಗಳನ್ನೆಲ್ಲಾ ಕಟ್ಟಿಕೊಂಡು ಸಂಸತ್ತಿನ ಎರಡೂ ಸದನಗಳಲ್ಲೂ ಗಲಾಟೆ ಎಬ್ಬಿಸಿಬಿಟ್ಟಿತು.

ಯಾವಾಗ ತಾನೇಜ ವಿಶ್ವಹಿಂದೂ ಪರಿಷತ್ತಿನ ಅಧ್ಯಕ್ಷ ಅಶೋಕ್ ಸಿಂಘಾಲ್ ಜೊತೆಯಲ್ಲಿ ನವದೆಹಲಿಯಲ್ಲಿ ಪತ್ರಿಕಾಗೋಷ್ಠಿಯನ್ನೂ ನಡೆಸಿ 'ಸೇತು ಸಮುದ್ರಂ' ಯೋಜನೆಯಿಂದ 'ರಾಮಸೇತು'ಗೆ ಹೇಗೆ ಅಪಾಯವಿದೆ ಎಂದು ವೈಜ್ಞಾನಿಕ(!)ವಾಗಿ ವಿವರಿಸಿ ಆ ಯೋಜನೆಯನ್ನು ವಿರೋಧಿಸಿದನೋ ಆಗ ಸೃಷ್ಟಿಯಾಗತೊಡಗಿತು ನೋಡಿ ನಿಜವಾದ ವಿವಾದ. ಒಂದೆಡೆ ಸಂಘಪರಿವಾರದ ಮಂಗಗಳು ಕಂಡಕಂಡಲ್ಲಿ 'ಸೇತು ಸಮುದ್ರಂ' ಯೋಜನೆಯ ವಿರೋಧದಲ್ಲಿ ಪ್ರತಿಭಟನೆ, ಪ್ರದರ್ಶನ, ಪತ್ರಿಕಾ ಹೇಳಿಕೆ

ಮುಂತಾದ ಚಟುವಟಿಕೆಗಳನ್ನು ತೀವ್ರಮಾಡಿಬಿಟ್ಟರೆ, ಇನ್ನೊಂದೆಡೆ ಕೆಲವು ಇಂಗ್ಲಿಷ್ ಪತ್ರಿಕೆಗಳು ಈ ತಾನೇಜನ ಅಸಲಿತ್ವವನ್ನು ಹೊರಗೆಳೆಯಲು ಪ್ರಾರಂಭಿಸಿಬಿಟ್ಟವು.

ವಿಜ್ಞಾನಿಯಲ್ಲ, ಘಟಿಂಗ

ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ನ ಭಾನುವಾರದ ಆವೃತ್ತಿ ದಿ ಸಂಡೆ ಎಕ್ಸ್‌ಪ್ರೆಸ್‌ನಲ್ಲಿ ತಾನೇಜನ ಜನ್ಮ ಜಾಲಾಡಿ ಆತ ಬಾಹ್ಯಾಕಾಶ ವಿಜ್ಞಾನಿ ಆಗುವುದಿರಲಿ, ಆತ ಯಾವುದೇ ಪ್ರಕಾರದ ವಿಜ್ಞಾನಿಯೇ ಅಲ್ಲವೆಂದೂ, ಅವನು ಎಂದೂ ಪ್ರಧಾನಮಂತ್ರಿಗಳ ಕಚೇರಿಯಲ್ಲಿ ಹೆಚ್ಚುವರಿ ಕಾರ್ಯದರ್ಶಿಯಾಗಿ ಇರಲಿ ಅಲ್ಲಿ ಯಾವುದೇ ರೀತಿಯ ಅಧಿಕಾರಿಯಾಗಿಯೂ ಕಾರ್ಯನಿರ್ವಹಿಸಿಲ್ಲವೆಂದೂ ಬರೆಯಿತು. ಇಂತಹದೊಂದು ವರದಿ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿದ್ದಂತೆಯೇ ಸಂಘಪರಿವಾರದ ನಾಯಕಮಣಿಗಳಿಗೆ ಕುಂಡೆಯ ಮೇಲೆ ಬರೆ ಇಟ್ಟಂತಾಯಿತು. ತಾನೇಜನನ್ನು ಇಟ್ಟುಕೊಂಡು 'ಸೇತು ಸಮುದ್ರಂ' ಪ್ರಾಜೆಕ್ಟ್‌ಗೆ ಪ್ರಬಲವಾದ ತಾತ್ವಿಕ ಮತ್ತು ವೈಜ್ಞಾನಿಕ ವಿರೋಧ ಒಡ್ಡಬಹುದೆಂಬ ನಿರೀಕ್ಷೆಯಿಂದ ಸಂಘಪರಿವಾರ ಕಟ್ಟಿದ್ದ ಗಾಳಿಗೋಪುರ ದಿಢೀರ್ ಅಂತ ನೆಲಕ್ಕಪ್ಪಳಿಸಿಬಿಟ್ಟಿತು. ತಾನೇಜ ತಮಗೆ ಎಂತಹ ಮಕ್ಮಲ್ ಟೋಪಿ ಹಾಕಿ ಒಳಗೊಳಗೇ ಕಿಲಕಿಲ ನಕ್ಕಿರಬಹುದೆಂದು ಪ್ರಾಯಶಃ ಆಗ ಅವರಿಗೆ ಅರ್ಥವಾಗಿರಬೇಕು. ಒಟ್ಟಿನಲ್ಲಿ ಸಂಘಪರಿವಾರದ ಮಂಗಗಳು ಇಂಗು ತಿಂದ ಮಂಗನಂತಾಗಿದ್ದಂತೂ ನಿಜ.

ಕುಮಾರ್ ಬುರಡಿಕಟ್ಟಿ



ಆ ವರದಿಗೆ ಪುಷ್ಠಿ ನೀಡುವಂತೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಘಟನೆಯ (ಇಸ್ರೋ) ಮಾಹಿತಿ ವಿಭಾಗದ ನಿರ್ದೇಶಕ ಎಸ್. ಕೃಷ್ಣಮೂರ್ತಿ ಬೆಂಗಳೂರಿನಲ್ಲಿ ಪತ್ರಿಕೆಗಳಿಗೆ ಹೇಳಿಕೆ ನೀಡಿ "ಈ ತಾನೇಜನಿಗೂ ಇಸ್ರೋಗೂ ಯಾವುದೇ ಸಂಬಂಧವಿಲ್ಲ, ನಾವು ಅವನ ಬಗ್ಗೆ ಈವರೆಗೆ ಕೇಳಿಯೇ ಇಲ್ಲ, ಬಾಹ್ಯಾಕಾಶ ಇಲಾಖೆಯ ಪ್ರಸ್ತುತ ಹೆಚ್ಚುವರಿ ಕಾರ್ಯದರ್ಶಿ ಎಸ್.ವಿ. ರಂಗನಾಥ್ ಎಂಬ ಐಎಎಸ್ ಅಧಿಕಾರಿಯಾಗಿದ್ದು ಅವರು ಬೆಂಗಳೂರಿನ ಕಚೇರಿಯಲ್ಲಿರುತ್ತಾರೆ. ಅಲ್ಲದೇ, 'ಸೇತು ಸಮುದ್ರಂ' ಪ್ರಾಜೆಕ್ಟಿಗೂ ಮತ್ತು ಇಸ್ರೋಗೂ ಯಾವುದೇ ಸಂಬಂಧವಿಲ್ಲ" ಎಂದು ಸ್ಪಷ್ಟಪಡಿಸಿದ ಮೇಲಂತೂ ಸಂಘ ಪರಿವಾರದ ಚೆಡ್ಡಿಯೊಳಗೆ ಚೇಳು ಸೇರಿಕೊಂಡಂತೆ ಚಟಪಟಿಸತೊಡಗಿದರು.

ಪತ್ರಿಕೆಗಳ ಮೂಲಕ ತಾನೇಜನ ಬಗ್ಗೆ ಆತನ ವಾದಗಳ ಬಗ್ಗೆ ವಿವರವಾಗಿ ಮಾಹಿತಿಗಳು ದೊರೆತವೋ ದೇಶದಾದ್ಯಂತ ಎಲ್ಲರೂ ಶಾರ್ಟ್ ಪಿಚ್ ಸಿಕ್ಕವರಂತೆ ಸಂಘಪರಿವಾರದ ವಿರುದ್ಧ ಸಿಕ್ಸರ್ ಬಾರಿಸಲಾರಂಭಿಸಿದರು. ಪ್ರಧಾನಮಂತ್ರಿಗಳ ಸಚಿವಾಲಯದಲ್ಲಿ ಹೆಚ್ಚುವರಿ ಕಾರ್ಯದರ್ಶಿಯಂತಹ ಉನ್ನತ ಹುದ್ದೆಯಲ್ಲಿರುವ ಒಬ್ಬ ಅಧಿಕಾರಿ ಏಕೆ ಎರಡು ವರ್ಷಗಳ ತನಕ ರಜೆ ಹಾಕಿ ಹೋಗುತ್ತಾರೆಂಬ ಸಾಮಾನ್ಯ ಜ್ಞಾನ ಸಂಘಪರಿವಾರಕ್ಕಿಲ್ಲ ಎಂದು ಕೆಲವರು ದಾಳಿ ಮಾಡಿದರೆ, ಮತ್ತೆ ಕೆಲವರು, ಅಂತಹ ಉನ್ನತ ಅಧಿಕಾರಿ ತನ್ನ ರಕ್ಷಣೆಗೆ ಸರ್ಕಾರವನ್ನು ನಂಬದೆ ಆರ್‌ಎಸ್‌ಎಸ್‌ನ ಮೊರೆ ಏಕೆ ಹೋಗುತ್ತಾನೆ ಎಂಬ ಕನಿಷ್ಠ ತಿಳಿವಳಿಕೆ ಇಲ್ಲ ಎಂದು ಸುದರ್ಶನ್‌ಗೆ ಬೊಟ್ಟು ಮಾಡಿ ತೋರಿಸಿದರು.

ಮೀಸೆ ಮಣ್ಣಾಗಿಲ್ಲ


ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎಂದು ಹೂಂಕರಿಸಿದನಂತೆ. ಹಾಗೇ ಸಂಘಪರಿವಾರದ ಮಾನ ಮರ್ಯಾದೆ ತಾನೇಜನಿಂದ ಬೀದಿ ಪಾಲಾದರೂ ಯಾರು ಏನೇ ಹೇಳಿದರೂ ತಾನು ಮಾತ್ರ 'ಸೇತು ಸಮುದ್ರಂ' ವಿರೋಧಿ ಅಭಿಯಾನವನ್ನು ಮುಂದುವರೆಸುವುದಾಗಿ ಮತ್ತೆ ಹೂಂಕರಿಸಿದೆ. 'ಸೇತು ಸಮುದ್ರಂ' ಪ್ರಾಜೆಕ್ಟಿನ ಜಾಗದಲ್ಲಿ ರಾಮ ಸೇತುವಿರುವುದು ತಾನೇಜನ ಸಂಶೋಧನೆಯಿಂದ ತಿಳಿದುಬಂದದ್ದೇನಲ್ಲ, ಬದಲಾಗಿ ಸಂಘಟನೆ ನಡೆಸಿದ ಆಳವಾದ ಸಂಶೋಧನೆಯಿಂದ ತಿಳಿದುಬಂದಿದೆ ಎಂದು ಮೀಸೆಯ ಮೇಲೆ ಕೈಯಾಡಿಸುತ್ತಿದೆ. ಜೊತೆಗೆ 'ಸೇತು ಸಮುದ್ರಂ' ಪ್ರಾಜೆಕ್ಟಿನಿಂದ ರಾಷ್ಟ್ರದ ಭದ್ರತೆಗೆ ಭಾರಿ ದುಷ್ಪರಿಣಾಮಗಳಾಗಲಿವೆ ಎಂದು ತಲೆಬುಡವಿಲ್ಲದ ವಾದವನ್ನು ಆರ್‌ಎಸ್‌ಎಸ್‌ನ ವಕ್ತಾರ ರಾಮ್ ಮಾಧವ್ ಹರಿಬಿಟ್ಟದ್ದಾನೆ.

ಆದರೆ ತಾನೇಜನ ಬಗ್ಗೆ ಕೆಲವು ದೂರುಗಳು ಬಂದಿರುವುದರಿಂದ ಆತನನ್ನು ಪ್ರಚಾರಕನ ಹುದ್ದೆಯಿಂದ ತೆಗೆದುಹಾಕಲಾಗಿದೆ ಎಂದು ಒಟ್ಟಾರೆ ತಾನೇಜನಿಂದಾದ ಸಂಘಪರಿವಾರಕ್ಕಾದ ಅವಮಾನವನ್ನು ತೇಲಿಸುವ ಪ್ರಯತ್ನದಲ್ಲಿ ಹೆಣಗಾಡುತ್ತಿದೆ.

ಅದೇನೇ ಇರಲಿ, ಇಡೀ ದೇಶಕ್ಕೆ ಸಂಸ್ಕೃತಿ, ಪರಂಪರೆ, ವಿಜ್ಞಾನ ಮುಂತಾದವುಗಳ ಬಗ್ಗೆ ಪುಂಖಾನುಪುಂಖವಾಗಿ ಪ್ರವಚನ ಬಿಗಿಯುವ ಸುದರ್ಶನ್ ಮತ್ತು ಅಶೋಕ್ ಸಿಂಘಾಲ್‌ನಂತಹ ಸಂಘಪರಿವಾರದ ಮಹಾನುಭಾವರು ಪುನೀಶ್ ತಾನೇಜ ಎಂಬ ಘಟಿಂಗ ಊದಿದ ಪುಂಗಿಗೆ ತಲೆಯಾಡಿಸುವಷ್ಟು ಮೂರ್ಖರಾಗಿದ್ದಾರೆ ಎಂಬುದಂತೂ ಜನರಿಗೆ ಗೊತ್ತಾಯಿತು. ■

ಸಂಘಪರಿವಾರದ ವಿರುದ್ಧ ಪುರಿ ಶಂಕರಾಚಾರ್ಯರ ಹೋರಾಟ

'ಸೇತು ಸಮುದ್ರಂ' ವಿಚಾರವಾಗಿ ಸಂಘಪರಿವಾರದ ಕುತಂತ್ರಗಳು, ಮಂಗನಾಟಗಳು ಬೆತ್ತಲೆಯಾಗಿ ನಿಲ್ಲುತ್ತಿದ್ದಂತೆ ಎಲ್ಲೆಡೆ ಅದರ ವಿರುದ್ಧದ ಕೋಪವೂ ಮಡುಗಟ್ಟಲಾರಂಭಿಸಿದೆ. ಹೀಗೆ ಸಂಘಪರಿವಾರದ ವಿರುದ್ಧ ದನಿ ಎತ್ತಿದವರ ಲಿಸ್ಟ್‌ನಲ್ಲಿ ಕೆಲವು ಮಠಾಧೀಶರೂ ಇರುವುದು ಗಮನಾರ್ಹ.



ಪುರಿಯ ಗೋವರ್ಧನ ಪೀಠದ ಮಠಾಧೀಶ ಶಂಕರಾಚಾರ್ಯರು "ಆರ್‌ಎಸ್‌ಎಸ್‌ನ ಅಜೆಂಡಾವನ್ನು ಬಯಲಿಗೆಳೆಯುವುದೇ ತಮ್ಮ ಪ್ರತಿಭಟನೆಯ ಉದ್ದೇಶ" ಎಂದು ಹೇಳಿದ್ದಾರೆ. ಈ ನಿಟ್ಟಿನಲ್ಲಿ 'ಸೇತು ಸಮುದ್ರಂ' ಪ್ರಾಜೆಕ್ಟಿನ ಸ್ಥಳ ಪರಿಶೀಲನೆಗೆ ಒಂದು ಸತ್ಯಶೋಧನಾ ತಂಡವನ್ನು ಅವರು ಕಳಿಸಿಕೊಟ್ಟಿದ್ದಾರಲ್ಲದೇ ತಾವೂ ಕೂಡ ಅಲ್ಲಿಗೆ ಶೀಘ್ರವೇ ಹೋಗಿ ಸರ್ಕಾರದ ಸಕಾರಾತ್ಮಕ ನಿರ್ಧಾರದ ಬಗ್ಗೆ ಹಾಗೂ ಸಂಘಪರಿವಾರದ ಸೋಗಲಾಡಿತನದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದಾಗಿಯೂ ಹೇಳಿದ್ದಾರೆ.

ಇನ್ನು ಹಿಂದೂ ಧರ್ಮದ ನಾಲ್ಕು ಪ್ರಧಾನ ಮಠಗಳ ನಾಯಕರಲ್ಲೊಬ್ಬರಾದ ಜಗದ್ಗುರು ಸ್ವಾಮಿ ಅಧೋಕ್ಷಾನಂದರವರು, "ಇದೊಂದು ಉತ್ತಮ ಯೋಜನೆಯಾಗಿದ್ದು ಇದರಿಂದ ಹಲವಾರು ಉದ್ಯೋಗಗಳು ಸೃಷ್ಟಿಯಾಗಲಿವೆ. ಆರ್‌ಎಸ್‌ಎಸ್ ಮತ್ತು ವಿಶ್ವ ಹಿಂದೂ ಪರಿಷತ್ತಿನಂತಹ ಸಂಘಟನೆಗಳು ಅಯೋಧ್ಯೆಯ ವಿಚಾರದಲ್ಲಿ ಹೀನಾಯ ಮುಖಭಂಗ ಮಾಡಿಸಿಕೊಂಡ ನಂತರ ಈಗ 'ಸೇತು ಸಮುದ್ರಂ' ವಿಚಾರವಾಗಿ ಹುಯಿಲೆಬ್ಬಿಸಿ ಹಿಂಸಾಚಾರ ಭುಗಿಲೆಬ್ಬಿಸಲು ಪ್ರಯತ್ನಿಸುತ್ತಿವೆ" ಎಂದು ಖಾರವಾಗಿಯೇ ಹೇಳಿದ್ದಾರೆ.

ಒಟ್ಟಿನಲ್ಲಿ ಸಂಘಪರಿವಾರದ ಮಹತ್ವಾಕಾಂಕ್ಷೆ ಸೇತು ಸಮುದ್ರಂ ವಿರೋಧಿ ಆಂದೋಲನಕ್ಕೆ ತಾನೇಜನ ಮಕ್ಮಲ್ ಟೋಪಿ ಆರಂಭದಲ್ಲಿಯೇ ಪೆಟ್ಟು ನೀಡಿರುವುದಂತೂ ನಿಜ. ■

ಶಂಕರಬಿದರಿಗೂ ನಕ್ಸಲ್‌ಪಟ್ಟಿಗೂ ಸಂಬಂಧವಿದೆಯಾ?

ಥೂತ್ತೇರಿ

ಯಾಹೂ

ಇದ್ದಕ್ಕಿದ್ದಂತೆ ನಕ್ಸಲರೆಂಬ ಪಟ್ಟಿಯೊಂದು ಬಿಡುಗಡೆಗೊಂಡು ಅದರಿಂದ ಹಲವಾರು ಮಂದಿ ಸರಕಾರದ ಒಳಗೆ ಮತ್ತು ಹೊರಗೆ ಮುಜುಗರ ಪಡುವಂತಾಗಿದೆಯಂತಲ್ಲಾ. "ಈ ಪಟ್ಟಿ ಬಿಡುಗಡೆಯಾದ ಕ್ರಮ ಹೇಗೆ?" ಎಂದು ಸರಕಾರವನ್ನು ಪ್ರಶ್ನಿಸಿದರೆ, ಸುಮಾರು ಜನ ಶಂಕರಬಿದರಿ ಕಡೆ ಕೈ ತೋರುತ್ತಾರೆ; ಮತ್ತಷ್ಟು ಜನ ಗೃಹಮಂತ್ರಿ ಪ್ರಕಾಶ್ ಕಡೆ ಪ್ರಶ್ನಾರ್ಥಕ ನೋಟ ಬೀರುತ್ತಾರೆ; ಮತ್ತೆ ಹಲವರು ಶಿವಮೊಗ್ಗದ ಪೊಲೀಸ್ ಪೇದೆಗಳತ್ತ ಬೆರಳು ಮಾಡುತ್ತಾರೆ. ಅಂತೂ, ನಕ್ಸಲ್ ಪಟ್ಟಿಯು ಸುಂಟರಗಾಳಿ ಶಿವಮೊಗ್ಗ, ಶಂಕರ ಬಿದರಿ ಮತ್ತು ಪ್ರಕಾಶ್ ಸುತ್ತಲೇ ತಿರುಗುತ್ತ ಪದ್ಮನಾಭನಗರದ ಕಡೆ ಸುಳಿಯುತ್ತಿಲ್ಲವಂತಲ್ಲಾ, ಥೂತ್ತೇರಿ!

****

ಹಾರುವಯ್ಯ ಮಾಡಿದ ಅವಾಂತರದ ಅರಿವಾಗಲು ಕನಿಷ್ಠ ಆರು ತಿಂಗಳ ಅವಧಿ ಬೇಕಾಗುತ್ತದೆಂಬುದು ಅರಿವಿಲ್ಲದವರ ಅಭಿಪ್ರಾಯ. ಈ ಅಭಿಪ್ರಾಯವನ್ನು ಅಂಗೈಲಿಡಿದು ನೋಡಿದರೆ ಅರಿವಿಗೋಸ್ಕರ ಹಾರುವಯ್ಯರ ಸಂಗ ಮಾಡಿ, ಅವರಿಂದ ಭಾಷಣ ಬರೆಸಿಕೊಂಡು ಉರು ಹೊಡೆದು ಮಾತನಾಡುತ್ತ ಕಡೆಗೆ ಅವರನ್ನೇ ಯಾಮಾರಿಸಿ ಕುಳಿತಿರುವ ಪದ್ಮನಾಭನಗರದ ದೇವು ಶಾಸ್ತ್ರಿಗಳ ಕಡೆಗೇ ನಕ್ಸಲ್ ಪಟ್ಟಿಯು ಕೈ ತೋರುತ್ತಿದೆಯಂತಲ್ಲಾ. ಹೂಸಿದವಳ್ಯಾರೆಂದರೆ ಮಾಸಲು ಸೀರೆಯವಳು ಎಂಬಂತೆ ಈ ಕೋ-ಜಾ ಸರಕಾರದಲ್ಲಿ ಏನೇ ಸಂಭವಿಸಿದರೂ ಅದನ್ನ ದೇವು ತಲೆಗೆ ಕಟ್ಟುವುದು ತಲೆ ಸರಿಯಿದ್ದವರ ಕೆಲಸವಲ್ಲ ಎಂಬ ಟೀಕೆಯನ್ನು ಮನಸ್ಸಿಗೆ ತಾಕಿಸಿಕೊಳ್ಳದೆ ಹೇಳುವುದಾದರೆ, "ಮುಂದೆ ಎಡೂರಪ್ಪ ಮುಖ್ಯಮಂತ್ರಿಯಾದರೆ, ಶಂಕರ ಬಿದರಿ ಎಡಿಜಿ ಆಗೇಆಗುತ್ತಾರೆ. ಎಡೂರಪ್ಪನಂತಹ ಮುಖ್ಯಮಂತ್ರಿ ಕೈಗೆ ಶಂಕರ ಬಿದರಿ ಎಂಬ ಪಟೇಲ್ ಶಿಷ್ಯ ಸಿಕ್ಕರೆ ಗತಿಯೇನು?" ಎಂದು ಹೆದರಿದ ದೇವು ಶಾಸ್ತ್ರಿಗಳು ಈಗಲೇ ಪ್ಲಾನ್ ಮಾಡಿ ಮುಗಿಸಿದ್ದಾರಂತಲ್ಲಾ, ಥೂತ್ತೇರಿ!!

****

ಈ ವಾದವನ್ನು ಹಿಡಿದೇ ನೋಡುವುದಾದರೆ, ಅಲ್ಲಿಗೆ ಎಡೂರಪ್ಪ ಮುಖ್ಯಮಂತ್ರಿಯಾಗುವುದು ಖಚಿತವಾಯ್ತು ಎಂದು ಭಾವಿಸುವಂತಿಲ್ಲ, ಆಗಲಿ, ಆಗದೇ ಹೋಗಲಿ, ಆದರೆ ಪದ್ಮನಾಭನಗರದ ಕುಟಿಲ ಕಾರಾಸ್ಥಾನದಲ್ಲಿ ನಾಡಿನ ಪ್ರಬಲ ಕೋಮಿನ ರಾಜಕಾರಣಿಗಳು ಮತ್ತು ಅಧಿಕಾರಿಗಳನ್ನ ಹೇಗೆ ಮುರಿಯಬೇಕು, ಅವರನ್ನೆಲ್ಲಾ ಪಾರ್ಟಿಯಲ್ಲೋ ಅಥವಾ ಸರಕಾರದಲ್ಲೋ ಅವರವರ ಯೋಗ್ಯತಾನುಸಾರವಾಗಿ ಜೇಷ್ಠತೆಗೆ ಪ್ರಾಪ್ತವಾಗಿ ಉನ್ನತ ಅಧಿಕಾರ ಪಡೆಯದಂತೆ ಮಾಡುವುದೇ ದೇವು ಶಾಸ್ತ್ರಿಗಳ ಹುನ್ನಾರವೆಂದು ಅವರನ್ನು ಅನಾದಿಕಾಲದಿಂದ ಬಲ್ಲವರ ಅಭಿಪ್ರಾಯವಾಗಿದೆಯಂತಲ್ಲಾ, ಥೂತ್ತೇರಿ!!

****

ಸದರಿ ನಕ್ಸಲ್ ಪಟ್ಟಿಯಿಂದ ಎಂ.ಪಿ. ಪ್ರಕಾಶ್‌ಗೆ ಉಸಿರು ಸಿಕ್ಕಿಕೊಂಡಂತಾಗಿದ್ದಾರೆ. ಅದೇ ಸಮಯಕ್ಕೆ ಶಂಕರ ಬಿದರಿಯೂ ಹಾಗೇ ಆಗಿದ್ದಾರೆ, ಇದ್ದುದರಲ್ಲಿ ಸೇಫಾಗಿರುವವನೇ ಪಟ್ಟಿಕೊಟ್ಟ ಶಿವಮೊಗ್ಗದ ಪೊಲೀಸ್ ಪೇದೆಯೆಂದು. ಪಟ್ಟಿಯಲ್ಲಿ ಸೇರಿಹೋದ ಪತ್ರಕರ್ತನ ಅಭಿಮಾನಿಗಳ ಆಕ್ರೋಶವಾಗಿದೆಯಂತಲ್ಲಾ.

ಈ ಮಧ್ಯೆ ಟಿಡ್ಡಿ ಚತುರರು "ಯಾರನ್ನೂ ಬಿಡದೆ ಅರೆಸ್ಟು ಮಾಡಿ, ಎನ್‌ಕೌಂಟರ್ ಮಾಡಿ. ಇಲ್ಲವಾದರೆ ನೀವು ಮಾಡುವಂತಹ ಸನ್ನಿವೇಶ ನಿರ್ಮಾಣವಾಗುವಂತೆ ಯಜ್ಞ ಮಾಡುತ್ತೇವೆ" ಎಂದು ಆಗಲೇ ಕಾಸು ಸಂಗ್ರಹಿಸುತ್ತಿವೆಯಂತಲ್ಲಾ, ಇದನ್ನೆಲ್ಲಾ ನೋಡಿದರೆ, ಈ ನಕಲಿ ನಕ್ಸಲರ ಪಟ್ಟಿ ಎಡೂರಪ್ಪ ಮತ್ತು ಈಶ್ವರಿ ಪಟಾಲಂಗಳದ್ದೇ ಇರಬೇಕೆಂದು ಜನ ಗುಮಾನಿ ಪಡುತ್ತಿರಬೇಕಾದರೆ, ಅದಕ್ಕೆ ಪೂರಕವಾಗಿ ಟೆಡ್ಡಿಗಳು ತೊಣಚಿಗಳ ನಿವಾರಣೆಯಾದಂತೆ ಕುಣಿಯತೊಡಗಿವೆಯಂತಲ್ಲಾ, ಥೂತ್ತೇರಿ!!

****

ಚೆಡ್ಡಿ ಅಂದಕೂಡಲೇ ನೆನಪಿಗೆ ಬಂತು. ಚೆಡ್ಡಿಗಳಿಗೇಕೆ ಏಡ್ಸ್ ಬರಲ್ಲ ಎಂದರೆ "ಅವು ಸ್ತ್ರೀ ವಿರೋಧಿಗಳಂತೆ, ಮತ್ತು ಅಂಗೈ ಪ್ರಿಯರಂತೆ, ಹಾಗಾಗಿ ಅವುಗಳಿಗೂ ಈ ಏಡ್ಸಿಗೂ ಬಹಳ ದೂರ" ಎಂದು ದೇವೇಗೌಡರ ಹತ್ತಿರದಲ್ಲಿದ್ದ ಹಲವು ಜೆಡಿಎಸ್ ಗಡವರು ಮಾತನಾಡಿಕೊಂಡು ನಗುತ್ತಿರಬೇಕಾದರೆ, ಗೌಡರು ಆ ಭಯಂಕರ ರೋಗಕ್ಕೆ ತುತ್ತಾಗದಂತೆ, ಇನ್ನು ನೂರು ವರ್ಷ ಬದುಕುವ ಅಪೇಕ್ಷೆ ವ್ಯಕ್ತ ಪಡಿಸಿದರಂತಲ್ಲಾ. ಜೊತೆಗೆ ಅಂತಹ ರೋಗದವರ ಜೊತೆ ಕೂರಲೂ ಹೆದರಿಕೊಂಡಿರುವ ಗೌಡರನ್ನ ಮಾತನಾಡಿಸಬೇಕೆನ್ನಿಸಿತಲ್ಲಾ ಕೂಡಲೇ ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

"ಹಲೋ ಸಾರ್, ನಾನು ಯಾಹೂ."

"ಏನ್ಹೇಳಿ ಯಾಹೂ ಅವರೇ?"

"ಏನಿಲ್ಲ ಸಾರ್, ಎಚ್‌ಐವಿ ಬಗ್ಗೆ ತಾವು ತುಂಬ ಹೆದರಿದ್ದೀರಿ ಅಂತ ಗೊತ್ತಾಯ್ತು ಅದ್ಕೆ ಫೋನ್ ಮಾಡಿದೆ."

"ಹೆದರೋ ಅಂತ ವಿಷಯವೇ ಅಲ್ಲವೆ? ಈ ಎಪ್ಪತ್ತಾರನೇ ವಯಸ್ಸಿನಲ್ಲಿ ನಾನು ಏಡ್ಸ್ ರೋಗಿಯಾದ್ರೆ ಚೆನ್ನಮ್ಮನಿಗೆ ಹೇಗೆ ಮುಖ ತೋರಲಿ? ಆಕೆಯ ತಂಗಿ, ಕಳ್ಳುಬಳ್ಳಿ ಸಂಬಂಧಿಕರು ಕೇಳೋ ಪ್ರಶ್ನೆಗೆ ಆಕೆ ಏನುತ್ತರ ಹೇಳ್ತಳೇ?"

"ಎಚ್‌ಐವಿ. ನಿಮ್ಮಂಥವರಿಗೆಲ್ಲಾ ಬರಲ್ಲ ಸಾರ್. ಆ ಸೋಂಕು ತಗುಲಬೇಕಾದ್ರೆ ರಕ್ತದಿಂದ ಮಾತ್ರ ಹರಡುತ್ತೆ ಮುಖ್ಯವಾಗಿ ಲೈಂಗಿಕ ಸಂಪರ್ಕದಿಂದ. ಅದುಬಿಟ್ರೆ ಬೇರೆಯವರಿಗೆ ಮಾಡಿದ ಇಂಜಕ್ಷನ್ ಸಿರಂಜಿನಿಂದ. ಆದ್ರಿಂದ ನೀವು ಅಷ್ಟೊಂದು ಹೆದರಬೇಡಿ."

"ನಾನು ಹೆದರದೇಯಿದ್ರೂ ನಮ್ಮ ಕುಮಾರನ ಧೈರ್ಯ ನೋಡಿ. ಆತ ಹೆದರದೆ ಏಡ್ಸ್ ಪೀಡಿತರ ಮನೆಯಲ್ಲಿ ಮಲಗಿದ್ದು ಬರ್ತನೆ ಅಂದ್ರೆ ಇಂತಹ ಮುಖ್ಯಮಂತ್ರಿ ಈ ಪ್ರಪಂಚದಲ್ಲೆಲ್ಲಾದ್ರು ಇರ್ತಾನ ತೋರಿಸಿ?"



"ಇಲ್ಲ ಬಿಡಿ ಸಾರ್. ಕುಮಾರಣ್ಣನ ಧೈರ್ಯ ನಿಮಗೆಲ್ಲಿಂದ ಬರಬೇಕು?"

"ಅದೇ ಹೇಳಿದೆನಲ್ಲಾ, ನನ್ನ ಎಲ್ಲಾ ಅವತಾರವೂ ಮುಗಿದು ಇನ್ನೇನು ಮಾಡಿದ ಸಾಧನೆಗಳನ್ನೆಲ್ಲಾ ನೆನಸಿಕೊಂಡು ಇರೋಣ ಅನ್ನೋ ವಯಸ್ಸಿನಲ್ಲೂ ಏಡ್ಸಿಗೆ ಹೆದರತಾಯಿದ್ದಿನಿ. ಈ ಹೆದರಿಕೆ ಬಂದಿದ್ದು ಈಗಲ್ಲ."

"ಯಾವಾಗ ಬಂತೂ ಸಾರ್?"

"ನನ್ನ ತಮ್ಮ ಬಸವೇಗೌಡನ ಮಗ, ಅದೆ ನಮ್ಮ ಶ್ರೀಮತಿಯವರಿಗೆ ಆಸಿಡ್ ಹಾಕಿದನಲ್ಲ, ಈ ಹುಡುಗ ನಮಗೆಲ್ಲಾ ಏಡ್ಸ್ ಇಂಜಕ್ಷನ್ ಚುಚ್ಚುತಿನಿ ಅಂತ ಹೆದರಿಸಿದ್ದ, ಆಗ ಬಂದ ಹೆದರಿಕೆ ಇದು. ದೇವರ ದಯದಿಂದ ಆ ಹುಡುಗ ಜೈಲುಪಾಲಾದ."

"ಆತ ಈಗಾಗ್ಲೆ ಬಿಡುಗಡೆಯಾಗಿರಬೇಕು ಸಾರ್."

"ಅದಕ್ಕೇ ನಮ್ಮ ಮನೆವಾಗಲೆ ಯಾರನ್ನೂ ಬಿಡಬೇಡಿ ಅಂತ ಹೇಳಿದ್ದೀನಿ."

"ಥೂತ್ತೇರಿ!!!"


–ಯಾಹೂ

ಬಾಲಕೃಷ್ಣೇಗೌಡನ ಜಂಟಿ ಲೂಟಿ!

ಕುಪೇಂದ್ರ ರೆಡ್ಡಿಯ ಕಳ್ಳರ ಕೂಟ

ದೇಶಪಾಂಡೆ, ಖರ್ಗೆ, ಕೊಂಡಯ್ಯ, ಅರ್ಧ ಡಜನ್ ಐಎಎಸ್‌ಗಳು ಬಾಲಕೃಷ್ಣೇಗೌಡನ ಜಂಟಿ ಲೂಟಿ ರೆಡ್ಡಿ ವೀರಣ್ಣನ ಮಾಯಾಜಾಲ.....

ಮೂರು ಸಾವಿರ ಕೋಟಿಯ ಭೂದರೋಡೆಗೆ ಕಲ್ಲುಬಿದ್ದಿದೆ! ಮಣ್ಣಿನ ಹಿರಿಮಗ ಬಾಲಕೃಷ್ಣೇಗೌಡನ ಕೊಳ್ಳೆಯ ಮುದ್ದು, ಖರ್ಗೆಯ ಖದೀಮ ಅಳಿಯ ರಾಧಾಕೃಷ್ಣನ ಅಕ್ರಮ ಸಂಪತ್ತು, ಭೂಕಂಟಕರ ಅಧಿಪತಿ ಆರ್.ವಿ. ದೇಶಪಾಂಡೆಯ ಕಾಳನಿಧಿ, ನಿವೃತ್ತ ಐಎಎಸ್ ಅಧಿಕಾರಿ ಅಲೆಕ್ಸಾಂಡರ್‌ನ ದರೋಡೆಯ ಮುದ್ದು, ಹಿರಿಯ ಐಎಎಸ್ ಅಧಿಕಾರಿ ಕೊಂಗವಾಡ್, ಮತ್ತೊಬ್ಬ ಐಎಎಸ್ ಉಮಾಕಾಂತ್, ಇನ್ನೊಬ್ಬ ಐಎಎಸ್ ಮಹೇಂದ್ರ ಜೈನ್ ಮತ್ತು ರೆಡ್ಡಿ ಮೂಲದ ಇಬ್ಬರು ಐಪಿಎಸ್ ಅಧಿಕಾರಿಗಳ ಭೂದರೋಡೆಯ ಒಂದು ಪಾಲು ಐಟಿ ಅಧಿಕಾರಿಗಳ ವಶವಾಗಿದೆ!



ಖತರ್‌ನಾಕ್ ಭೂಕಂಟಕ ಕುಪೇಂದ್ರ ರೆಡ್ಡಿ ಮತ್ತು ಪುಟಂದ ನೆಲಗಳ್ಳ ರೆಡ್ಡಿ ವೀರಣ್ಣ ಎಂಬಿಬ್ಬರು ವೈಟ್‌ಕಾಲರ್ ಡಕಾಯಿತರ ಮೇಲೆ ನಡೆದ ಐಟಿ ದಾಳಿಗೆ ಮುಖ್ಯಮಂತ್ರಿ ಕುಮಾರಸ್ವಾಮಿಯಾಗಲಿ, ದೇವೇಗೌಡ-ಬಾಲಕೃಷ್ಣೇಗೌಡಾದಿಗಳಷ್ಟೇ ಹೈರಾಣಾಗುತ್ತಾರೆಂಬ ಸೋನಿಯಾ ಲೆಕ್ಕಾಚಾರ ತಲೆಕೆಳಗಾಗಿದೆ.

ಕುಪೇಂದ್ರ ರೆಡ್ಡಿಯ ಮನೆಯಿಂದ ಜಪ್ತಿಯಾದ ದಾಖಲೆಗಳಲ್ಲಿ ಮಾಜಿ ಭಾರೀ ಕೈಗಾರಿಕಾ ಮಂತ್ರಿ ಆರ್.ವಿ.ದೇಶಪಾಂಡೆಯ ಪತ್ನಿ ರಾಧಾ ದೇಶಪಾಂಡೆಯ ಹೆಸರಲ್ಲಿದ್ದ ಭೂ ದಾಖಲೆಗಳ ಪಾಲೇ ದೊಡ್ಡದಂತೆ! ರೆಡ್ಡಿ ವೀರಣ್ಣನ ರಿಚ್‌ಮಂಡ್ ರೋಡ್ ಅಡ್ಡೆಯಲ್ಲಿ ಖರ್ಗೆ ಅಳಿಯ ರಾಧಾಕೃಷ್ಣನ ಅಕ್ರಮ ಸಂಪತ್ತಿನ ಕಾಗದಪತ್ರಗಳೇ ವಿಪರೀತವಾಗಿದ್ದವಂತೆ! ಕುಪೇಂದ್ರ ರೆಡ್ಡಿಗೆ ಅರ್ಧ ಡಜನ್ ಐಎಎಸ್ ಅಧಿಕಾರಿಗಳೂ, ಇಬ್ಬರು ಐಪಿಎಸ್ ಅಧಿಕಾರಿಗಳೂ ಪಾರ್ಟ್‌ನರ್‌ಗಳಾದರೆ, ರೆಡ್ಡಿ ವೀರಣ್ಣನ ಮಡಿಲಲ್ಲಿ ಇನ್ನೂ ದೊಡ್ಡ ತಿಮಿಂಗಿಲಗಳಿದ್ದವಂತೆ!

ಇದು ಇನ್‌ಕಂಟ್ಯಾಕ್ಸ್ ಅಧಿಕಾರಿಗಳ ವಲಯದ ಮೂಲಗಳು ನೀಡುವ ಮಾಹಿತಿ. ಈ ಪೈಕಿ ಒಂದಷ್ಟು ವಿವರಗಳನ್ನು ಇನ್‌ಕಂಟ್ಯಾಕ್ಸ್ ಅಧಿಕಾರಿಗಳೇ ಪತ್ರಿಕೆಗೆ ನೀಡಿದ್ದಾರೆ. ಕುಪೇಂದ್ರ ರೆಡ್ಡಿ ಮತ್ತು ರೆಡ್ಡಿ ವೀರಣ್ಣ ಎಂಬ ಖದೀಮ ಜೋಡಿ ನಡೆಸಿದ ಭೂದರೋಡೆಯಲ್ಲಿ ಹಾಲಿ ಕೈಗಾರಿಕಾ ಮಂತ್ರಿ ಕಟ್ಟಾ ಸುಬ್ರಮಣ್ಯ ನಾಯ್ಡು ಕೂಡ ಪಾಲುದಾರನೆ. ಜೊತೆಗೆ ಕಟ್ಟಾ ನಾಯ್ಡುವಿನ ಗಾಡ್‌ಫಾದರ್ ಬಿಜೆಪಿ ರಾಷ್ಟ್ರನಾಯಕ ವೆಂಕಯ್ಯ ನಾಯ್ಡುವೂ ಕೆಐಎಡಿಬಿಯ ಭೂಡಕಾಯಿತಿಯಲ್ಲಿ ಪಾಲುದಾರನಾಗಿದ್ದಾನೆಂಬ ಸಂಗತಿಯೂ ಬಯಲಾಗಿದೆ.

ರೆಡ್ಡಿ ವೀರಣ್ಣನ ರಿಚ್ಮಂಡ್ ರೋಡ್ ಅಡ್ಡೆ ಮತ್ತು ಕುಪೇಂದ್ರ ರೆಡ್ಡಿಯ ಕೋರಮಂಗಲದ ಆಫೀಸಿನ ಮೇಲೆ ರೇಡುಬಿದ್ದ ಐಟಿ ಅಧಿಕಾರಿಗಳಿಗೆ ದೇವೇಗೌಡರ ಕುಟುಂಬದ ಕಳ್ಳಸೊತ್ತಿನ ವಾಸನೆಯಿತ್ತಾದರೂ ಅದರ ಜೊತೆಗೇ ದೇಶಪಾಂಡೆ, ಖರ್ಗೆ ಮತ್ತು ಕೆ.ಸಿ. ಕೊಂಡಯ್ಯನ ಕೊಳ್ಳೆಯ ವಿವರಗಳೂ ದೊರಕಬಹುದೆಂಬ ಲೆಕ್ಕಾಚಾರವಿರಲಿಲ್ಲ. ಸದ್ಯ ಐಟಿ ಮೂಲಗಳು ಒದಗಿಸಿದ ದಾಖಲೆಗಳನ್ನೇ ಆಧರಿಸಿ ಹೇಳಬಹುದಾದರೆ ಕುಪೇಂದ್ರ ರೆಡ್ಡಿ ಒಬ್ಬನೇ ಮೂರು ಸಾವಿರ ಕೋಟಿಯಷ್ಟು KIADBಯ ಭೂಮಿಯನ್ನು ಕೊಳ್ಳೆ ಹೊಡೆದಿದ್ದಾನೆ.


ಮೂಲತಃ ಬೆಳ್ಳಂದೂರು ಪಕ್ಕದ ಆಗರ ಗ್ರಾಮದ ವಂಗಲಹಳ್ಳಿಯ ದಾಸರೆಡ್ಡಿ ಎಂಬ ಬಡರೈತನ ಮಗನಾದ ಕುಪೇಂದ್ರ ರೆಡ್ಡಿ ಇವತ್ತು ಎಚ್‌ಎಸ್‌ಆರ್ ಲೇಔಟಿನಲ್ಲಿ ಕಟ್ಟಿಸಿದ ಬಂಗಲೆಯೊಂದೇ ಎಂಟು ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಅಲ್ಲಿಂದ ರಿಂಗ್ ರಸ್ತೆಗೆ ಬಂದರೆ ಬೆಳ್ಳಂದೂರು ಸರ್ವೆ ನಂಬರ್ 20 ರಿಂದ 50 ರವರೆಗಿನ 27 ಎಕರೆಯಲ್ಲಿ 'ಇಕೋಸ್ಪೇಸ್' ಎಂಬ ಮಿನಿ ಟೌನ್‌ಶಿಪ್ ನಿರ್ಮಿಸಿದ್ದಾರೆ. ಅದರ ಪಕ್ಕದ ಬೆಳ್ಳಂದೂರು ಕೆರೆಯ ರಾಜಕಾಲುವೆಯನ್ನು ಇಡಿಯಾಗಿ ಕಬಳಿಸಿದ್ದಾನೆ. ಇದರ

ರಾ. ಸೋಮನಾಥ್

ಹಿಂಭಾಗದಲ್ಲೇ **Primal Projects** ಹೆಸರಿನ ಮತ್ತೆ 32 ಎಕರೆಯ ವಿಶಾಲ ಭೂಮಿಗೆ ಕಾಂಪೌಂಡ್ ಹಾಕಿದ್ದಾನೆ. ಸರ್ಜಾಪುರ ರಿಂಗ್ ರಸ್ತೆಯನ್ನು ಸಂಪರ್ಕಿಸುವ ಕೋರಮಂಗಲದ ಈ ಔಟರ್ ರಿಂಗ್‌ರೋಡ್‌ನ ಒಂದೆಕರೆ ಭೂಮಿಗೆ ಕನಿಷ್ಠ ಐದರಿಂದ ಎಂಟು ಕೋಟಿ ರೂಪಾಯಿ ಮಾರ್ಕೆಟ್ ಬೆಲೆಯಿದೆ!

ರಿಂಗ್‌ರೋಡ್‌ಗೆ ಹೊಂದಿಕೊಂಡ ಇಕೋಸ್ಪೇಸ್ ಟೌನ್‌ಶಿಪ್‌ನ 27 ಎಕರೆ ಮತ್ತು ಅದರ ಹಿಂಭಾಗದ **primal project** ನ 32 ಎಕರೆ ಭೂಮಿಯೊಂದೇ ಮುನ್ನೂರು ಕೋಟಿಯ ಆಸ್ತಿಯಾಗುತ್ತದೆ!

ಸದ್ಯ ದೇವೇಗೌಡರ ಹಿರಿಮಗ ಬಾಲಕೃಷ್ಣಗೌಡ, ಅವರ ಪತ್ನಿ ಕವಿತಾ ಸೇರಿ ಮೂರು ಕೋಟಿಗೆ ಖರೀದಿಸಿದ 25 ಸಾವಿರ ಚದುರಡಿಯ ಒಂದು ಕಾಂಪ್ಲೆಕ್ಸ್, ಅದಕ್ಕೆ ಹೊಂದಿಕೊಂಡಂತೆ ಕವಿತಾರ ಸಹೋದರಿ ಸವಿತಾ, ತಮ್ಮ ರವೀಂದ್ರ ಮತ್ತು


ಬಾಲಕೃಷ್ಣೇಗೌಡ

ಡಿಸ್ಕೋ ಮಂಜನ ಮನೆಯಲ್ಲಿ ಹನ್ನೆರಡು ಕೋಟಿ!

ಡಿಸ್ಕೋ ಮಂಜನ ಮನೇಲಿ ಹನ್ನೆರಡು ಕೋಟಿ ರೂಪಾಯಿ ಸಿಕ್ತಂತೆ! ಅಂವ ಹಾಕ್ಕೊಂಡಿದ್ದ 45 ಲಕ್ಷದ ಡೈಮಂಡ್ ರಿಂಗನ್ನೂ ಬಿಡದೇ ಐಟಿ ಅಧಿಕಾರಿಗಳು ಜಪ್ತಿ ಮಾಡುದ್ರಂತೆ!! ಎಂದು ಇಡೀ ಬನ್ನೇರುಘಟ್ಟ ರಸ್ತೆಗುಂಟ ಹಬ್ಬಿದ ಸುದ್ದಿ ಕೇಳಿ ಮೊದಲು ಬೆಚ್ಚಿದ್ದು ಗೊಟ್ಟಿಗೆರೆಯ ಮಂದಿಯೇ!

ಮುಖ್ಯಮಂತ್ರಿ ಕುಮಾರಣ್ಣ ಜೆ.ಪಿ. ನಗರದಲ್ಲಿದ್ದಷ್ಟೂ ದಿನ ಅವರ ಮನೆಗೆ ಪುದಿ ತರಕಾರಿ ಕೊಂಡೊಯ್ಯುತ್ತಿದ್ದರಿಂದ 'ತರಕಾರಿ ಮಂಜ' ಎಂಬ ಬಿರುದನ್ನೂ, ಪಕ್ಕದ ಟ್ಯುಲಿಪ್ಸ್ ರೆಸಾರ್ಟಿನಲ್ಲಿ ಬ್ಯಾಂಡ್ ಹುಡುಗಿಯರನ್ನು ಗುಡ್ಡೆಹಾಕಿ ಅವರ ಜೊತೆ ಡಿಸ್ಕೋ ಕುಣಿಯುತ್ತಿದ್ದರಿಂದ 'ಡಿಸ್ಕೋ ಮಂಜ' ಎಂಬ ಬಿರುದು ಬಾವಲಿಯನ್ನೂ ಒಟ್ಟೊಟ್ಟಿಗೇ ಪಡೆದವನು ಗೊಟ್ಟಿಗೆರೆ ಮಂಜ ಅಲಿಯಾಸ್ ಸಿ. ಮಂಜುನಾಥ್. ಇಲ್ಲಿಗೆ ಹತ್ತು ವರ್ಷಗಳ ಹಿಂದೆ ಪಕ್ಕದ ವೀವರ್ಸ್ ಕಾಲೋನಿಗೆ ನುಗ್ಗಿ ಅಸಹಾಯಕ ಹೆಂಗಸರನ್ನು ಪೀಡಿಸುತ್ತಿದ್ದವನು, ಅದಕ್ಕೂ ಮುನ್ನ ಲಡಾಸಿ ಸ್ಕೂಟರ್ ಇಟ್ಟುಕೊಂಡು ಐನೂರು ರೂಪಾಯಿ ಕೂಲಿಗೆ ಕಕ್ಕಸ್ಸಿನ ಪಿಟ್ ಅಗೆಯುತ್ತಿದ್ದವನು, ಗೊಟ್ಟಿಗೆರೆ, ಬೇಗೂರು, ಹುಳಿಮಾವು, ಬನ್ನೇರಘಟ್ಟ ಲಿಮಿಟ್ಟಿನಲ್ಲಿ ತರ್ಲೆ-ಪರ್ಲೆ ಮಾಡಿಕೊಂಡಿದ್ದ ಯಕಶ್ಚಿತ್ ಪುಂಡನೊಬ್ಬ ಕುಮಾರಣ್ಣನ ಸರ್ಕಾರ ಬರುತ್ತಿದ್ದಂತೆ 45 ಲಕ್ಷ ರೂಪಾಯಿ ಬೆಲೆಬಾಳುವ ವಜ್ರದ ಉಂಗುರ ತೊಡುತ್ತಾನೆಂದರೆ ಗೊಟ್ಟಿಗೆರೆಯ ಜನಕ್ಕೆ ಅಚ್ಚರಿಯಾಗದೇ ಇನ್ನೇನು?


ಡಿಸ್ಕೋ ಮಂಜ

ಕೇವಲ ಎರಡೂವರೆ ವರ್ಷದಲ್ಲಿ ಕೋಟ್ಯಾಧಿಪತಿಯಾದವನು ಗೊಟ್ಟಿಗೆರೆ ಮಂಜ. ಮೂಲತಃ ಹೊಸೂರು ರಸ್ತೆಯ ಹೆಬ್ಬಗೋಡಿಯ ಚಂದ್ರಪ್ಪನ ಮಗನಾದ ಈತನನ್ನು ಗೊಟ್ಟಿಗೆರೆಗೆ ಕರೆತಂದವನು ಈತನ ತಾಯಿ ದೊಡ್ಡ ತಿಮ್ಮಯ್ಯಮ್ಮನ ತಮ್ಮ ಮಾಜಿ ಪಂಚಾಯ್ತಿ ಛೇರ್ಮನ್ ರಾಜಣ್ಣ. ಇನ್ನೆಲ್ಲಿ ಹೆಬ್ಬಗೋಡಿಯನ್ನೇ ಕುಲಗೆಡಿಸುತ್ತಾನೋ ಎಂದು ಹೆದರಿಯೇ ಗೊಟ್ಟಿಗೆರೆಗೆ ತಂದುಬಿಟ್ಟರೆ ಅಲ್ಲಿನ ವೀವರ್ಸ್ ಕಾಲೋನಿಯ ಅಸಹಾಯಕ ಹೆಣ್ಣುಮಕ್ಕಳ ಪಾಲಿಗೆ ಕೀಚಕನಾದ. ಯಾವತ್ತು ಕುಮಾರಸ್ವಾಮಿ ಕನಕಪುರ ಲೋಕಸಭಾ ಕ್ಷೇತ್ರಕ್ಕೆ ಚುನಾವಣೆಗೆ ನಿಂತರೋ ಮಂಜನ ಲಕ್ಕು ಕುದುರಿತು. ಬನ್ನೇರುಘಟ್ಟ ರಸ್ತೆ ಸುತ್ತಮುತ್ತ ದಿಕ್ಕಿಲ್ಲದ ಜೆಡಿಎಸ್‌ಗೆ ಇವನೇ ದೊಣ್ಣೆ ನಾಯಕನಾಗಿ ಅವತರಿಸಿದ. ಧರ್ಮಸಿಂಗ್ ಮುಖ್ಯಮಂತ್ರಿಯಾಗುತ್ತಿದ್ದಂತೆ ಹಿಂದೆ ಸತತ ಐದು ವರ್ಷಗಳ ಕಾಲ ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಎಸ್.ಐ ಆಗಿದ್ದು ಲ್ಯಾಂಡ್ ಡೀಲಿನ ರುಚಿಕಂಡಿದ್ದ ಮಲ್ಲಿಕಾರ್ಜುನ ಎಂಬ ಇನ್ಸ್‌ಪೆಕ್ಟರ್‌ನನ್ನು ಆನೇಕಲ್ ಪೊಲೀಸ್ ಠಾಣೆಗೆ ಹಾಕಿಸಿಕೊಂಡಿದ್ದೇ ಈ ಗೊಟ್ಟಿಗೆರೆ ಮಂಜ. ಐಪಿಎಸ್ ನಾರಾಯಣ ಗೌಡರಿಗೆ ಆಪ್ತನಾಗಿ ಬೆಂಗಳೂರು ಗ್ರಾಮಾಂತರ ಎಸ್.ಪಿ. ಶ್ರೀನಿವಾಸ್‌ರನ್ನು ಪದೇಪದೇ ಟ್ಯೂಲಿಪ್ಸ್ ರೆಸಾರ್ಟಿಗೆ ಕರೆಸಿ ಡಿಸ್ಕೋ ಕುಣಿಸತೊಡಗಿದ್ದರ ಫಲವೇ ಇವತ್ತಿನ ಐಟಿ ರೇಡು!

ಅಲ್ಲಿಗೆ ಹೊಸೂರು ರಸ್ತೆ ಮತ್ತು ಬನ್ನೇರುಘಟ್ಟ ರಸ್ತೆಯ ಲ್ಯಾಂಡ್ ಡೀಲಿಗೆಲ್ಲ ಈತನೇ ಹೋಲ್‌ಸೇಲ್ ಏಜೆಂಟಾಗಿಬಿಟ್ಟ. ಇನ್ಸ್‌ಪೆಕ್ಟರ್ ಮಲ್ಲಿಕಾರ್ಜುನನನ್ನು ಛೂಬಿಟ್ಟು ತನಗಾದವರನ್ನೆಲ್ಲ ಲಾಕಪ್ಪಿಗೆ ಹಾಕಿಸಿ ಬೇಗೂರು, ಬನ್ನೇರು ಘಟ್ಟ ಸುತ್ತಮುತ್ತಲ ಹುಡುಗರೆಲ್ಲ ತನ್ನ ಮನೆ ಮುಂದೆಯೇ ಕೈಕಟ್ಟಿ ನಿಲ್ಲುವಂತೆ ಮಾಡಿಕೊಂಡ. ಪಕ್ಕದ ನಿಸರ್ಗ ಲೇಔಟಿನಲ್ಲಿ ಇನ್ಸ್‌ಪೆಕ್ಟರ್ ಮಲ್ಲಿಕಾರ್ಜುನ ಮತ್ತು ಈತ ಸೇರಿಕೊಂಡು ಡಬ್ಬಲ್ ಬಂಗಲೆ ಎಬ್ಬಿಸಿದರು. ಜಿಗಣಿಯ ಹಾರ ಗದ್ದೆ ಬಳಿ ಅರೆಕರೆಯ ಫಾರ್ಮ್‌ಹೌಸ್ ಮಾಡಿ ಅಲ್ಲಿಯೂ ಡಿಸ್ಕೋ ಶುರು ಹಚ್ಚಿಕೊಂಡ. ಜೊತೆಗೆ ಹುಳಿಮಾವು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಬಾಬು ಪುಟಾಣಿಗೂ ಧಮಕಿ ಹಾಕಿ ಕಂಡಕಂಡ ಸೈಟಿಗೆ ಕೈಯಿಟ್ಟ. ಈತನ ಹಾವಳಿಗೆ ರೋಸತ್ತ ಡಿಸಿಪಿ ಅಲೋಕ್ ಕುಮಾರ್ ಈತನಿಗೆ ಪದೇಪದೇ ಎಚ್ಚರಿಕೆ ಕೊಟ್ಟಾಗೆಲ್ಲ ಮಂಜ ಬಳಸುತ್ತಿದ್ದದ್ದು ಬಾಲಕೃಷ್ಣೇಗೌಡರ ಹೆಸರು. ಬಳೇಕಳ್ಳಿಯಲ್ಲಿ ಮಾರ್ವಾಡಿಯೊಬ್ಬನ ಭರ್ಜರಿ ಸೈಟನ್ನು ಅನಿತಕ್ಕನ ಹೆಸರಲ್ಲಿ ಕಬಳಿಸಿ ಅದನ್ನು ಆರುಕೋಟಿಗೆ ಮಾರಿಕೊಂಡ.


ಡಿಸ್ಕೋ ಮಂಜನ ಮನೆ ಮುಂದೆ ಹತಾಶ ಇನ್ಸ್‌ಪೆಕ್ಟರ್ ಮಲ್ಲಿಕಾರ್ಜುನ

ಏಳೇನಹಳ್ಳಿಯಲ್ಲಿ ಯಾವತ್ತೋ ಜಮೀನು ಮಾರಿಕೊಂಡಿದ್ದವರನ್ನು ಹಿಡಿದು ತನ್ನ ಹೆಸರಿಗೆ ಬೋಗಸ್ ದಾಖಲೆ ಸೃಷ್ಟಿಸಿಕೊಂಡು ಇಪ್ಪತ್ತಕ್ಕೂ ಹೆಚ್ಚು ಸೈಟುಗಳನ್ನು ಲಪಟಾಯಿಸಿದ. ಸೈಟುದಾರರು ಡಿಸಿಪಿ ಅಲೋಕ್ ಕುಮಾರ್‌ಗೆ ದೂರುಕೊಟ್ಟರೆ "ಅದು ನನಗಲ್ಲ, ಬಾಲಕೃಷ್ಣೇಗೌಡರಿಗೆ" ಎಂದು ಪಟ್ಟುಕಟ್ಟಿದ. ಬೇಗೂರಿನಲ್ಲೂ ದೇವೇಗೌಡರ ಹೆಸರಲ್ಲಿ ಭೂಮಿ ಕದ್ದ. ಒಂದಲ್ಲ ಎರಡು ಆದ್ದೂರಿಯ ಕಾರು ಖರೀದಿಸಿದ. ಮಗನಿಗೆ ಸಿಂಗಾಪೂರ್‌ನಿಂದ ಎರಡು ಲಕ್ಷದ ರೋಲೆಕ್ಸ್ ವಾಚು ತರಿಸಿದ. ಹೆಂಡತಿಗೆ ಇಪ್ಪತ್ತು ಲಕ್ಷದ ಡೈಮಂಡ್ ನೆಕ್ಲೆಸ್, ಅರ್ಧ ಡಜನ್ ಚಿನ್ನದ ಬಳೆ; ಎಲ್ಲವನ್ನೂ ಕೊಡಿಸಿದ.



ಡಿಸ್ಕೋ ಮಂಜು ಕಟ್ಟಿಸುತ್ತಿರುವ ಕಾಂಪ್ಲೆಕ್ಸ್

ಬಹುಶಃ ಗೊಟ್ಟಿಗೆರೆ ಮಂಜನ ಪಾಪದ ಕೊಡ ತುಂಬಿದೆ. ದೇವೇಗೌಡರ ಕುಟುಂಬದ ಹೆಸರಲ್ಲಿ ಏನೆಲ್ಲ ಹಾವಳಿಯಿಟ್ಟನೋ ಅದೇ ಆತನಿಗೆ ಮುಳುವಾಗಿದೆ. ಮುಖ್ಯಮಂತ್ರಿಯ ಬೇನಾಮಿ ಸೊತ್ತಿನ ವಾಸನೆ ಹಿಡಿದು ಬಂದ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗೆ ಸಿಕ್ಕಿದ್ದು ಕುಮಾರಣ್ಣನ ಸೊತ್ತೋ ಅಥವಾ ಬಾಲಕೃಷ್ಣೇಗೌಡರ ಸೊತ್ತೋ ಗೊತ್ತಿಲ್ಲ, ಆದರೆ ಮಂಜನ ಪಾಪಿ ಸೊತ್ತು ಮಾತ್ರ ಪರಾಯಿ ಪಾಲಾದ ಬಗ್ಗೆ ಯಾರಿಗೂ ಅನುಮಾನಗಳಿಲ್ಲ!

ತಮಾಷೆಯೆಂದರೆ ಮಂಜನ ಹಗಲು ದರೋಡೆಯ ಪಾರ್ಟ್‌ನರ್ ಆನೇಕಲ್ ಇನ್ಸ್‌ಪೆಕ್ಟರ್ ಮಲ್ಲಿಕಾರ್ಜುನನ ಬೇನಾಮಿ ಆಸ್ತಿಯ ದಾಖಲೆ ಪತ್ರಗಳು, ಆತ ಅಬ್ಬಾಸ್ ಅಲಿ ಬೋಹ್ರಾನನ್ನು ಹೆದರಿಸಿ ಕಿತ್ತ ಸೈಟಿನ ಕಾಗದ ಪತ್ರಗಳೆಲ್ಲವನ್ನೂ ಮಂಜನ ಮನೆಯಲ್ಲೇ ಇಟ್ಟಿದ್ದ. ಅದನ್ನು ಐಟಿ ಅಧಿಕಾರಿಗಳು ಜಪ್ತಿ ಮಾಡುತ್ತಿದ್ದರೆ ಇದೇ ಇನ್ಸ್‌ಪೆಕ್ಟರ್ ಮಲ್ಲಿಕಾರ್ಜುನ ಬೆವರೊರೆಸಿಕೊಳ್ಳುತ್ತಾ ರೇಡ್ ತಂಡ ರಕ್ಷಣೆಗೆ ನಿಂತ ಕೊಳ್ಳೆಯ ಸೊತ್ತು ಕಂಡವರ ಪಾಲಾಗುತ್ತದೆ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?


ಬ್ಬಳ ಸಂಬಂಧಿ ಕೆ.ಎಂ. ನಿರ್ಮಲ. ಈ ವರೂ ತಲಾ ಐದು ಸಾವಿರ ಅಡಿಗಳಂತೆ ಖರೀದಿ ಇನ್ನೊಂದು ಕಾಂಪ್ಲೆಕ್ಸ್; ಇದೇ ಕುಪೇಂದ್ರ ರೆಡ್ಡಿಯ ಲೋಸ್ಪೇಸ್' ಟೌನ್‌ಶಿಪ್‌ಗೆ ಸೇರಿದ ಅವಿಭಾಜ್ಯ ಆಸ್ತಿ ುವದರಲ್ಲಿ ಎರಡು ಮಾತಿಲ್ಲ. ಈ ರೀತಿ ಕುಪೇಂದ್ರ ುಂವ ದೇವೇಗೌಡರ ಸಂತತಿ ಖರೀದಿಸಿದ ಒಟ್ಟೂ ಸಾವಿರ ಚದುರಡಿಗಳ ಸ್ಥಿರಾಸ್ತಿಯ ಒಟ್ಟೂ ಮೊತ್ತವೇ ುಮಾರು ಐದು ಕೋಟಿ ರೂಪಾಯಿಯಷ್ಟಾಗು ! ಆದರೆ ಹಕೀಕತ್ತೇ ಬೇರೆ.

ಯಾವ ಆಸ್ತಿಯನ್ನು ಚದುರ ಅಡಿಗೆ ಏಳುನೂರು ಪಾಯಿಯಂತೆ ಕುಪೇಂದ್ರ ರೆಡ್ಡಿ ದೇವೇಗೌಡರ ುಂಬಕ್ಕೆ ಮಾರಿದ್ದಾನೋ ಅದೇ ಚದುರ ಅಡಿಗೆ ಹತ್ತು ಸಾವಿರ ರೂಪಾಯಿ ಮಾರ್ಕೆಟ್ ಮೌಲ್ಯವಿದೆ! ಹತ್ತು ಸಾವಿರ ರೂಪಾಯಿ ಬೆಲೆಬಾಳುವ ಚದುರ ಯನ್ನು ಕೇವಲ ಏಳುನೂರು ರೂಪಾಯಿಗೆ


ಕವಿತಾ ಬಾಲಕೃಷ್ಣೇಗೌಡ

ಮಾರಲು ಕುಪೇಂದ್ರ ರೆಡ್ಡಿಗೇನು ಹುಚ್ಚಾ? ಅಂದರೆ ನಲವತ್ತು ಕೋಟಿ ರೂಪಾಯಿಯ ಆಸ್ತಿಯನ್ನು ಕೇವಲ ಐದು ಕೋಟಿಗೆ ಬಾಲಕೃಷ್ಣೇಗೌಡರ ಪತ್ನಿ ಮತ್ತಾಕೆಯ ಸಂಬಂಧಿಗಳಿಗೆ ಕುಪೇಂದ್ರ ರೆಡ್ಡಿ ಿದ್ದಾನೆ! ಮೇಲುನೋಟಕ್ಕೆ ಇದು ಸೀದಾಸಾದಾ ಾರದಂತಿದ್ದರೂ 'ಇಕೋಸ್ಪೇಸ್' ಪರಭಾರೆ ವ್ಯವ ದ ಆಳ-ವಿಸ್ತಾರ ಮಾತ್ರ ನಿಗೂಢವಾಗುತ್ತಲೇ ಗುತ್ತದೆ.

ಇದು ಕುಪೇಂದ್ರ ರೆಡ್ಡಿಯ ಮಾಯಾಜಾಲದ ಿ ಸ್ಯಾಂಪಲ್ ಮಾತ್ರ. ಅಷ್ಟಕ್ಕೂ ಈಗ ದೇವೇ ರ ಕುಟುಂಬ ಖರೀದಿಸಿದ ಐಟಿ ಕಾಂಪ್ಲೆಕ್ಸ್‌ನ ು ಕುಪೇಂದ್ರ ರೆಡ್ಡಿಗೆ ದಕ್ಕಿದ್ದಾದರೂ ಹೇಗೆ? ು ಕೆದಕಿದಂತೆಲ್ಲ ಅದು ಮಾಜಿ ಭಾರೀ ಕೈಗಾರಿಕಾ ್ರಿ ದೇಶಪಾಂಡೆಯ ಢಕಾಯಿತಿ ಹಿನ್ನೆಲೆಯನ್ನೂ


ದೇಶಪಾಂಡೆ

ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಹಗಲು ದರೋಡೆಯನ್ನೂ ಮತ್ತು ಬೆಂಗಳೂರು ಸುತ್ತಮುತ್ತಲ ಬಡರೈತರ ದುರಂತಕತೆಯನ್ನೂ ಒಟ್ಟೊಟ್ಟಿಗೆ ಬಿಚ್ಚಿಡುತ್ತದೆ.

ಇದೇ ಿಮಂಗಲ ಸಮೀಪದ ವಂಗಲಹಳ್ಳಿಯ ಬಡರೈತ ರೆಡ್ಡಿಯ ಮಗ ಕುಪೇಂದ್ರ ರೆಡ್ಡಿ ಒಂದಾನೊಂದು ್ಕ ಪುಡಿ ಕಂಟ್ರಾಕ್ಟರ್. ಬೆಳ್ಳಂದೂರು ಕೆರೆಯ ವೆಯ ಮುಚ್ಚುತ್ತುವುದು, ರೈತರಿಗೆ ಪಂಪ್‌ಹೌಸ್ ುವುದು ಮಾಡಿಕೊಂಡಿದ್ದ. ಕ್ರಮೇಣ ಬೆಳ್ಳಂದೂರು ಲೇಔಟ್ ಮಾಡಿ ಒಂದು ಸೈಟನ್ನು ಹತ್ತಾರು ಮಾರಿ ದುಡ್ಡು ದೋಚಿದ. ಸೈಟು ಕವರು ಬಡಿದಾಡಿಕೊಂಡರು. ಕೆಲವರು ಾಲಾದರು. ಕುಪೇಂದ್ರನ ಗಾಯತ್ರಿ ಪರ್ಸ್ ಮತ್ತು ಗಾಯತ್ರಿ ಫ್ಯಾಷನ್ಸ್ ಗಾರ್ಮೆಂಟ್ ಫ್ಯಾಕ್ಟರಿಗಳು ಮಾತ್ರ ಿಯಿಂದ ಕೊಬ್ಬಲಾರಂಭಿಸಿದವು. ಹೊತ್ತಿಗೆ ಬಿಡಿಎ ಅಧಿಕಾರಿಗಳ ಕುಪೇಂದ್ರ ರೆಡ್ಡಿಯೇ [illegible] ಿದ.

[illegible] ರಲ್ಲಿ ಬಿಡಿಎ ಅಧಿಕಾರಿಗಳ [illegible] ಅಗರಕೆರೆಯ 27 ಎಕರೆಯಲ್ಲಿ n Glen ಎಂಬ ಐಷಾರಾಮಿ [illegible] ಮಾಡಿದ. ಪಕ್ಕದಲ್ಲೇ ಕೋರ ಂ. ಎದುರಿಗೇ ಏರ್‌ಪೋರ್ಟ್.

ರೆಡ್ಡಿ ವೀರಣ್ಣನ ಬಾಯಿಗೆ ಮೂರು ಹಳ್ಳಿಗಳು


ಅರ್ಕಾವತಿ ಲೇಔಟಿಗೆಂದು ತನ್ನಪ್ಪನ ಒಂದೂವರೆ ಎಕರೆ ಭೂಮಿಯನ್ನು ಬಿಡಿಎ ವಶಪಡಿಸಿಕೊಂಡಾಗ ದಾಸರಹಳ್ಳಿಯ ಬಡರೈತನ ಮಗ ಅಶೋಕ್ ಆತ್ಮಹತ್ಯೆ ಮಾಡಿಕೊಂಡ. ಆಗ ದೇವೇಗೌಡರೇ ಚಕ್ರಪಾಣಿಯ ಜೊತೆ ದಾಸರಹಳ್ಳಿಗೆ ಹೋಗಿ ಕಾಂಗ್ರೆಸ್ ಸರ್ಕಾರದ ಭೂಸ್ವಾಧೀನದ ವಿರುದ್ಧ ಗುಡುಗಿದ್ದರು. ಹಾಗೇ ಅರ್ಕಾವತಿ ಲೇಔಟಿಗೆಂದು ಬಿಡಿಎ ನೋಟಿಫೈ ಮಾಡಿದ್ದ 160 ಎಕರೆ ಬಡರೈತರ ಭೂಮಿಯನ್ನು ಇದೇ ಜೆಡಿಎಸ್ ಸರ್ಕಾರ ರೆಡ್ಡಿ ವೀರಣ್ಣನಿಗೆಂದು ಡೀನೋಟಿಫೈ ಮಾಡಿದಾಗ ದೇವೇಗೌಡರ ಪೌರುಷವೇ ಉಡುಗಿ ಹೋಗಿತ್ತು!

ಅದು ರೆಡ್ಡಿ ವೀರಣ್ಣನ ತಾಕತ್ತು. ಆತನಿಗೆ ಎಂ.ಪಿ. ಪ್ರಕಾಶ್ ಪರಮಾಪ್ತ. ಅವರ ಮಗ ರವೀಂದ್ರ ಮನೆಮಗನಿದ್ದಂತೆ. ಖರ್ಗೆಯ ಖದೀಮ ಅಳಿಯ ರಾಧಾಕೃಷ್ಣನೇ ಆತನಿಗೆ ಪಾರ್ಟ್‌ನರ್. ದೇಶಪಾಂಡೆಯೇ ಗಾಡ್‌ಫಾದರ್. ಇನ್ನು ಕರ್ನಾಟಕ ಸರ್ಕಾರದ ಒಂದು ಡಜನ್ ಐಎಎಸ್ ಅಧಿಕಾರಿಗಳು ಈ ರೆಡ್ಡಿ ವೀರಣ್ಣನ ಡಕಾಯಿತಿಗೆ ಬಂಡವಾಳ ಹಾಕುತ್ತಾರೆಂದರೆ ಆತನಿಗೆ ಅರ್ಕಾವತಿ ಲೇಔಟಿನ 160 ಎಕರೆ ಯಾವ ಲೆಕ್ಕ?


ಮೂಲತಃ ಹೂವಿನಹಡಗಲಿಯ ರೆಡ್ಡಿ ವೀರಣ್ಣ ಮನೆಮನೆಗೆ ಸೈಕಲ್ ತಳ್ಳಿಕೊಂಡು ಹಾಲು ಮಾರುತ್ತಿದ್ದ. ಕ್ರಮೇಣ ಕೃಷ್ಣಾ ಮೇಲ್ದಂಡೆ ಕಾಮಗಾರಿಗೆ ಬಿದ್ದು ಕಳ್ಳ


ಕುಪೇಂದ್ರನ ಕೋರಮಂಗಲದ ಅಡ್ಡೆ

ಕಂಟ್ರಾಕ್ಟರ್ ಎನ್ನಿಸಿಕೊಂಡ. ರೆಡ್ಡಿ ವೀರಣ್ಣ ಕನ್ಸಟ್ರಕ್ಷನ್ಸ್ ಪ್ರೈ ಲಿ. ಎಂಬ ಕಂಪೆನಿ ಮಾಡಿ 1990ರ ಸುಮಾರಿಗೆ ಬೆಂಗಳೂರಿಗೆ ಕಾಲಿಟ್ಟ ರೆಡ್ಡಿ ವೀರಣ್ಣನಿಗೆ ಆರ್.ವಿ. ದೇಶಪಾಂಡೆಯನ್ನು ಗಂಟು ಹಾಕಿದ್ದು ಮತ್ತೊಬ್ಬ ಭೂಕಂಟಕ ದಯಾನಂದ ಪೈ. ಅಲ್ಲಿಗೆ ನಾಗವಾರದ 70 ಎಕರೆಯ KIADB ಯ ಲ್ಯಾಂಡು ಈತನ ಮಾನ್ಯತಾ ಪ್ರೊಮೋಟರ್ಸ್ ಪ್ರೈ ಲಿ. ಪಾಲಾಗಿತ್ತು. ಚಿಕ್ಕಜಾಲ, ದೇವನಹಳ್ಳಿ, ನಾಗವಾರ, ಹೆಬ್ಬಾಳ ಸುತ್ತಮುತ್ತ ಕಂಡಕಂಡ ದಲಿತರ ಜಮೀನನ್ನು ಮುಂಡಾಮೋಚಿದ ಈತನಿಗೆ ಖರ್ಗೆ ಅಳಿಯನೇ ಗಾಡ್‌ಫಾದರ್ ಆಗಿ ದಕ್ಕಿದ್ದು 1996 ರಲ್ಲಿ. ಆನಂತರ ಖರ್ಗೆಯ ಮನೆಯೇ ರೆಡ್ಡಿ ವೀರಣ್ಣನ ಅಡ್ಡೆಯಾಯಿತು.



ಅಲ್ಲಿಯ ತನಕ ಕುಪೇಂದ್ರ ರೆಡ್ಡಿ ಮತ್ತು ರೆಡ್ಡಿ ವೀರಣ್ಣ ಬಿಡಿಬಿಡಿಯಾಗಿಯೇ ಲ್ಯಾಂಡ್ ಗ್ರ್ಯಾಬಿಂಗ್ ಮಾಡುತ್ತಿದ್ದವರು 2002 ರಲ್ಲಿ ಒಂದಾಗಿ ಬಿಟ್ಟರು. ಕುಪೇಂದ್ರ ರೆಡ್ಡಿ, ಆತನ ಪತ್ನಿ ಪುಷ್ಪಾವತಿ ಮತ್ತು ರೆಡ್ಡಿ ವೀರಣ್ಣ ಸೇರಿಕೊಂಡು Saphire Infrastruture Development Pvt Ltd., ಎಂಬ ನಕಲಿ ಕಂಪೆನಿಯೊಂದನ್ನು ಸೃಷ್ಟಿಸ ಲಾಯ್ತು. ಅದಕ್ಕೂ ಮುನ್ನ ಇಬ್ಬರೂ ಸೇರಿ RGA Software Solutions Pvt Ltd., ಹೆಸರಲ್ಲಿ ಬೇಗೂರು ವೀರಸಂದ್ರದ 20 ಎಕರೆಯನ್ನು KIADB ಯ ಮೂಲಕ ದೋಚಿದ್ದರು. Pritech Park Ltd., ಹೆಸರಲ್ಲಿ ಬೆಳ್ಳಂದೂರಿನ 30 ಎಕರೆ ನುಂಗಿಬಿಟ್ಟರು. ಹೀಗೆ ನಕಲಿ ಐಟಿ ಕಂಪೆನಿಗಳ ಪ್ರಾಜೆಕ್ಟ್ ರಿಪೋರ್ಟು ಕೊಟ್ಟು ದೋಚಿದ ಭೂಮಿ ಮಾರಿದ ರೆಡ್ಡಿ ದ್ವಯರಿಗೆ 2005 ರ ಹೊತ್ತಿಗೆ ಎಂಥಾ ಶಕ್ತಿ ಬಂದಿತ್ತೆಂದರೆ ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿಯ ನೆರಿಗ, ವಿ. ಕಲ್ಲಹಳ್ಳಿ ಮತ್ತು ಚಂಬೇನಹಳ್ಳಿ ಎಂಬ


ರಾಧಾಕೃಷ್ಣ

ಮೂರು ಗ್ರಾಮಗಳನ್ನೇ ಸಾರಸಗಟಾಗಿ ನುಂಗಿ ಹಾಕಲು ಮುಂದಾದರು.

ಈ ಮೂರೂ ಹಳ್ಳಿಗಳ ಸಾವಿರದ ಇನ್ನೂರ ಇಪ್ಪತ್ತು ಎಕರೆ ಭೂಮಿಯನ್ನು SEZ ಅನ್ವಯ ತಮಗೆ ನೋಟಿಫೈ ಮಾಡಿಕೊಟ್ಟರೆ ಅಲ್ಲಿ ತಾವು 2867 ಕೋಟಿ ರೂಪಾಯಿ ಬಂಡವಾಳ ಹೂಡುತ್ತೇವೆಂದು ಬೋಗಸ್ ಪ್ರಾಜೆಕ್ಟ್ ರಿಪೋರ್ಟ್ ಕೊಟ್ಟರು. ಅದನ್ನು ತೋರಿಸಿಯೇ ಸರ್ಜಾಪುರ ಸುತ್ತಮುತ್ತಲ 13 ಹಳ್ಳಿಗಳ ರೈತರನ್ನು ಹೆದರಿಸಿ ತೀರ ಕಮ್ಮಿ ದರಕ್ಕೆ ಭೂಮಿಗೆ ಅಡ್ವಾನ್ಸ್ ಮಾಡತೊಡಗಿದರು. ಅಲ್ಲಿ ಹೋಟೆಲ್, ಗಾಲ್ಫ್‌ಕೋರ್ಸ್, ಕ್ಲಬ್ ಹೌಸ್, ಸಿನಿಮಾ ಟಾಕೀಸ್, ಸಾವಿರಾರು ಮನೆಗಳನ್ನು ನಿರ್ಮಿಸಿ ದುಡ್ಡು ದೋಚುವುದು ಈ ಧೂರ್ತರ ಹುನ್ನಾರ. ಮೊದಮೊದಲು ಹತ್ತೋ ಇಪ್ಪತ್ತೋ ಸಾವಿರ ಅಡ್ವಾನ್ಸ್ ಕೊಟ್ಟು ಅಗ್ರಿಮೆಂಟ್ ಮಾಡಿಕೊಂಡು ಆನಂತರ ರೈತರನ್ನು ಮನೆಬಾಗಿಲಿಗೆ ಅಲೆಸುತ್ತಾರೆ. ಒಮ್ಮೆ KIADB ನೋಟಿಫೈ ಮಾಡಿತೆಂದರೆ ವಿದೇಶಿ ಕಂಪನಿಗಳಿಗೆ ಜಮೀನು ಮಾರಿಕೊಳ್ಳುತ್ತಾರೆ. ಇದಕ್ಕೆ SEZ ಆಯುಧ ಬಳಸುತ್ತಾರೆ. ಅದಕ್ಕೆಂದು ಈಗಾಗಲೇ ಸರ್ಜಾಪುರ ಸುತ್ತಮುತ್ತಲ ರೈತರಿಗೆ 150 ಕೋಟಿಯಷ್ಟು ಅಡ್ವಾನ್ಸ್ ಕೊಟ್ಟಿದ್ದಾರೆ. ಹೀಗೆ ಅಡ್ವಾನ್ಸ್ ಮಾಡಿದ ದಾಖಲೆಗಳು, ರೈತರ ಜೊತೆ ಮಾಡಿಕೊಂಡ ಅಗ್ರಿಮೆಂಟುಗಳು, ಬೇನಾಮಿ ಪತ್ರಗಳು ಎಲ್ಲವನ್ನೂ ಈಗ ರೇಡು ಮಾಡಿದ ಐಟಿ ಅಧಿಕಾರಿಗಳು ಹೊತ್ತೊಯ್ದಿದ್ದಾರೆ.

ಇವತ್ತು ನಂದಗುಡಿ, ನಾಳೆ ಈ ರೆಡ್ಡಿದ್ವಯರಿಗಾಗಿ ಸರ್ಜಾಪುರದ ನೆರಿಗ, ಚಂಬೇನಹಳ್ಳಿಯಂಥ ಗ್ರಾಮಗಳು. ಪರಿಸ್ಥಿತಿ ಹೀಗಿರುವಾಗ ನಕ್ಸಲರು ಹುಟ್ಟಿಕೊಳ್ಳದೇ ಹೇಡಿಗಳು ಹುಟ್ಟುತ್ತಾರಾ? ಈ ಮೂರು ಗ್ರಾಮಗಳ ರೈತರನ್ನು ಉಳಿಸಲು ಆನೇಕಲ್ ತಾಲ್ಲೂಕಿನ ಎಲ್ಲ ಜನಪರ ಸಂಘಟನೆಗಳು ಹೋರಾಟ ನಡೆಸಬೇಕಿದೆ. ಐಟಿ ರೇಡಿನಿಂದಾದರೂ ಇವರ ಭೂದಾಹಕ್ಕೆ ಬೆಂಕಿ ಬೀಳಲಿ.

ಎನ್ನಾರೈಗಳಿಗೆ ಸೈಟು ಮಾರಿದ ದುಡ್ಡಲ್ಲಿ ಏಳಕರೆಯ ಗ್ರೀನ್‌ಫೀಲ್ಡ್, 20 ಎಕರೆಯ Green Abode, 80 ಎಕರೆಯಲ್ಲಿ Green Acers ಎಂಬ ಮೂರು ಭರ್ಜರಿ ಲೇಔಟುಗಳನ್ನು ಹುಟ್ಟುಹಾಕಿದ. ಜೊತೆಗೆ Green Castle ಎಂಬ ವೈಭವೋಪೇತ ಮತ್ತೊಂದು ಅಪಾರ್ಟ್‌ಮೆಂಟ್ ನಿರ್ಮಿಸಿ ಸಾರಾಸಗಟಾಗಿ ಲ್ಯಾಂಡ್ ದಂಧೆಗೆ ಧುಮುಕಿದ. 95 ರ ಸುಮಾರಿಗೆ ಆರ್.ವಿ. ದೇಶಪಾಂಡೆಯ ಮನೆಯಲ್ಲಿ ಕಾಣಿಸಿಕೊಂಡ ಕುಪೇಂದ್ರ ರೆಡ್ಡಿಯ ಲಕ್ಕು ಮತ್ತು ಭೂದಾಹ ಎರಡೂ ಒಟ್ಟೊಟ್ಟಿಗೆ ಕುದುರಿದವು. 1996 ರಲ್ಲಿ ದೇಶಪಾಂಡೆ ಭಾರೀ ಕೈಗಾರಿಕಾ ಮಂತ್ರಿಯಾಗುತ್ತಿದ್ದಂತೆ KIADB ಎಂಬ ಚಿನ್ನದ ಗಣಿಯನ್ನು ರೆಡ್ಡಿ ಸಂಭಾಳಿಸಲಾರಂಭಿಸಿದ.

ಇದರ ಫಲವೇ ಹೊಸೂರು ರಸ್ತೆಯ ಎಲೆಕ್ಟ್ರಾನಿಕ್ ಸಿಟಿಯ ಮೂರು ಭರ್ಜರಿ ಸೈಟುಗಳು. ಒಂದರಲ್ಲಿ ಸೂರ್ಯಪಾರ್ಕ್ ಎಂಬ ಐಷಾರಾಮಿ ಕಾಂಪ್ಲೆಕ್ಸ್ ಕಟ್ಟಿಸಿದ. ಒಂದೆಕರೆಯ ಮತ್ತೊಂದು ಪ್ಲಾಟಿನಲ್ಲಿ ಸೂರ್ಯ ಸಫೈರ್ ಹೆಸರಿನ ಇನ್ನೊಂದು ಅಪಾರ್ಟ್‌ಮೆಂಟ್ ನಿರ್ಮಿಸಿ ಅದನ್ನು HCL ಕಂಪೆನಿಗೆ ಬಾಡಿಗೆಗೆ ಬಿಟ್ಟ. ಮಗದೊಂದು 4 ಲಕ್ಷ ಅಡಿಗಳ ಸೈಟಿನಲ್ಲಿ ಸೂರ್ಯ ವೇವ್ ಎಂಬ ಮಾಲ್ ಕಟ್ಟಿಸಿ ಅದನ್ನೂ ಮಲ್ಟಿನ್ಯಾಷನಲ್ ಕಂಪೆನಿಯೊಂದಕ್ಕೆ ಬಾಡಿಗೆಗೆ ಕೊಟ್ಟ. ಹೀಗೆ ನಕಲಿ ಐಟಿ ಕಂಪನಿಯ ಪ್ರಾಜೆಕ್ಟ್ ರಿಪೋರ್ಟ್ ಕೊಟ್ಟು ಎಲೆಕ್ಟ್ರಾನಿಕ್ ಸಿಟಿಯಲ್ಲಿ ಅಗದೀ ದರಕ್ಕೆ ಹೊಡೆದ. ಈ ಮೂರು ಸೈಟಿಗೆ ದೇಶಪಾಂಡೆಯ ಧರ್ಮಪತ್ನಿ ರಾಧಾ ದೇಶಪಾಂಡೆಯೇ ಸ್ಲೀಪಿಂಗ್ ಪಾರ್ಟ್‌ನರ್ ಆದಳು. ಅಷ್ಟಕ್ಕೂ ಕುಪೇಂದ್ರ ರೆಡ್ಡಿಯನ್ನು ದೇಶಪಾಂಡೆಗೆ ಗಂಟು ಹಾಕಿದ್ದು ಬಳ್ಳಾರಿಯ ಖದೀಮ ಕೆ.ಸಿ. ಕೊಂಡಯ್ಯ!


ಕುಪೇಂದ್ರ ರೆಡ್ಡಿಯ ಬಂಗಲೆ

ಹೀಗೆ ಶುರುವಾದ ದೇಶಪಾಂಡೆ-ಕುಪೇಂದ್ರ ರೆಡ್ಡಿ ನೆಂಟಸ್ತಿಕೆ ಸತತ ಹನ್ನೆರಡು ವರ್ಷಗಳ ಕಾಲ ದೇಶಪಾಂಡೆ ಕೈಗಾರಿಕಾ ಮಂತ್ರಿಯಾಗಿದ್ದಷ್ಟೂ ದಿನ ನಿರಾತಂಕವಾಗಿತ್ತು. ತನ್ನ ಭೂಕಬಳಿಕೆಗೆ ಅನುಕೂಲವಾಗುವಂತೆ KIADB ಯ ಕಾಯ್ದೆಯನ್ನೇ ಬದಲಾಯಿಸಿದ ದೇಶಪಾಂಡೆ ಕೈಗಾರಿಕಾ ಭೂಮಿಯನ್ನು ಕೇವಲ ಕೈಗಾರಿಕೆಗಳಿಗಷ್ಟೇ ಅಲ್ಲ; ಕೈಗಾರಿಕೆಗಳಿಗೆ ಪೂರಕವಾದ ಹೋಟೆಲ್, ಬಾರು, ಡಿಸ್ಕೋಥೆಕ್, ಅಪಾರ್ಟ್‌ಮೆಂಟ್ಸ್, ಕ್ಲಬ್ ಹೌಸ್, ಬಂಗಲೆ ಇತ್ಯಾದಿಗಳಿಗೆಲ್ಲ ಮಂಜೂರು ಮಾಡಬಹುದೆಂದು ತಿದ್ದುಪಡಿ ಮಾಡಿದ.


ಕವಿತಾ ಬಾಲಕೃಷ್ಣೇಗೌಡ ಖರೀದಿಸಿರುವ ಬೃಹತ್ ಕಟ್ಟಡ

ಅಕ್ಷರಶಃ ಕಳ್ಳರ ಅಡ್ಡೆಯಾಗಿ ರೂಪುಗೊಂಡ KIADBಯ ದಗಲುಬಾಜಿತನ ಯಾವ ಮಟ್ಟಕ್ಕಿತ್ತೆಂದರೆ; ಸಾಕ್ಷಾತ್ ಇನ್‌ಫೋಸಿಸ್ ಕಂಪೆನಿಯೇ ಬೆಳ್ಳಂದೂರಿನಲ್ಲಿ ತನಗೆ 126 ಎಕರೆ ಭೂಮಿ ಮಂಜೂರು ಮಾಡಿ ಎಂದು KIADB ಗೆ ಅರ್ಜಿ ಹಾಕಿತ್ತು. ಇನ್‌ಫೋಸಿಸ್ ಅದೆಷ್ಟೇ ಸಮಾಜಘಾತುಕ ಕಂಪೆನಿಯಾದರೂ ಅದು ಪಕ್ಕಾ ಐಟಿ ಕಂಪೆನಿಯೆಂಬುದಂತೂ ಸತ್ಯವಾಗಿತ್ತು. ಐಟಿ ಅಥವಾ ಕೈಗಾರಿಕೆಯ ಅಭಿವೃದ್ಧಿಯೇ ಮಂತ್ರಿ ದೇಶಪಾಂಡೆಯ ಉದ್ದೇಶವಾಗಿದ್ದರೆ ಇನ್‌ಫೋಸಿಸ್‌ಗೆ ಭೂಮಿ ಕೊಡಬೇಕಿತ್ತು. ದುರಂತವೆಂದರೆ ಇನ್‌ಫೋಸಿಸ್‌ಗೆ ಭೂಮಿ ನಿರಾಕರಿಸಿದ KIADB ಇದೇ ಬೆಳ್ಳಂದೂರಿನ ಸರ್ವೆ ನಂಬರ್ 20 ರಿಂದ 51 ರ ಮಧ್ಯದ 27 ಎಕರೆಯನ್ನು ಕುಪೇಂದ್ರ ರೆಡ್ಡಿಯ Primal Project Pvt Ltd., ಎಂಬ ನಕಲಿ ಐಟಿ ಕಂಪೆನಿಗೆ ಮಂಜೂರು ಮಾಡಿತ್ತು!

ನೆಲ ದೋಚುವುದು, ತಲೆ ತಿಕ್ಕುವುದರ ಹೊರತಾಗಿ ಬೇರೇನೂ ಗೊತ್ತಿಲ್ಲದ ಕುಪೇಂದ್ರ ರೆಡ್ಡಿಗೆ ನಿಜಕ್ಕೂ ಐಟಿಯ ತಲೆಬುಡ ಗೊತ್ತಾ? ಕನಿಷ್ಠ ಕಂಪ್ಯೂಟರ್‌ನ ಕೀ ಒತ್ತುವುದಾದರೂ ಬರುತ್ತಾ? ಇತ್ಯಾದಿ ಯಾವುದೂ KIADB ಯ ಕಳ್ಳರಿಗೆ ಬೇಕಿರಲಿಲ್ಲ. ನಕಲಿ ಕಂಪನಿ, ನಕಲಿ ಪ್ರಾಜೆಕ್ಟ್ ರಿಪೋರ್ಟಿನ ಆಧಾರದ ಮೇಲೆ ಎಕರೆಗೆ ಎಂಟು ಕೋಟಿ ರೂಪಾಯಿ ಬೆಲೆಬಾಳುವ ಬಡರೈತರ ಭೂಮಿಯನ್ನು ಕೇವಲ 15 ಲಕ್ಷಕ್ಕೆ ಕಿತ್ತುಕೊಂಡು ರೆಡ್ಡಿಗೆ ಧಾರೆಯೆರೆದರು. ಹಾಗೇ ಕಬಳಿಸಿದ ಭೂಮಿಯನ್ನು ರೆಡ್ಡಿ RMZ ಮತ್ತು ಮಿಲೇನಿಯಾ ರಿಯಲೇಟರ್ಸ್ ಪ್ರೈ. ಲಿ. ಎಂಬ ವಿದೇಶಿ ಕಂಪೆನಿಗೆ ಮಾರಿಕೊಂಡ. ಪಕ್ಕದ ಬೆಳ್ಳಂದೂರು ಕೆರೆಯ ಮೂರೆಕರೆಯ ರಾಜಕಾಲುವೆಯನ್ನೂ ಒತ್ತುವರಿ ಮಾಡಿದ ಈ ಹಗಲು ದರೋಡೆಯನ್ನು ಪ್ರತಿಭಟಿಸಿದ

■ ■ ■

ಲಂಚಬಾಕ ಜಗನ್ನಾಥನಿಗೆ ಮೂಗುದಾರ ಹಾಕೋರ್ಯಾರು

ಬಿಡುವರ, ದೀನ-ದಲಿತರ ಉದ್ಧಾರಕ್ಕೆಂದೇ ನಮ್ಮ ಘನವೆತ್ತ ಸರ್ಕಾರಗಳು ಹುಟ್ಟು ಹಾಕಿದ, ಹಾಕುತ್ತಿರುವ ಇಲಾಖೆ, ನಿಗಮ, ಮಂಡಳಿಗಳು ಯಾವ್ಯಾವು ಇವೆ, ಎಷ್ಟಿವೆ, ಎಲ್ಲಿವೆ ಎಂದು ತಿಳಿದುಕೊಳ್ಳುವುದೇ ಒಂದು ಪಡಿಪಾಟಲು. ಆದರೆ, ಅವುಗಳನ್ನು ಯಾವ ಬಡಜನರ ಹೆಸರಿನಲ್ಲಿ ತೆರೆಯಲಾಗುತ್ತೋ ಅಂಥವರಿಗೆ ಅವುಗಳ ಸೌಲಭ್ಯಗಳು ಯಾವಾಗಲೂ ಗಗನಕುಸುಮವೇ. ಒಟ್ಟಿನಲ್ಲಿ ಬಡಜನರ ಹೆಸರಿನಲ್ಲಿ ಕೆಲವು ಹೊಟ್ಟೆಬಾಕಗಳು ತಮ್ಮ ಹೊಟ್ಟೆಯನ್ನು ನೀಗಿಸಿಕೊಳ್ಳುತ್ತವಷ್ಟೆ. ಉಡುಪಿಯ ಬ್ರಹ್ಮಗಿರಿ ಯಲ್ಲಿರುವ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇಂತಹ ಪಟ್ಟಿಗೆ ಸೇರುತ್ತದೆ.

ಇಲ್ಲಿ ಚೈತನ್ಯ ಸ್ಕೀಮ್‌ನ ಲೋನ್, ವೃತ್ತಿಪರ ತರಬೇತಿ ಕಾರ್ಯಕ್ರಮ, ಉದ್ಯೋಗ ಅರಿವು ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ ಎಂದೆಲ್ಲಾ ಹತ್ತು ಹಲವು ಯೋಜನೆಗಳಿವೆ. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ನಿರುದ್ಯೋಗಿ ಯುವಕ-ಯುವತಿ ಯರಿಗಾಗಿ ಸಾಲ ಸೌಲಭ್ಯ ನೀಡಿ ಅವರಿಗೆ ಜೀವನಾಧಾರ ವಾಗುವುದು ಈ ಎಲ್ಲ ಯೋಜನೆಗಳ ಗುರಿಯಾಗಿರ ಬೇಕು. ರಾಜ್ಯ ಸರ್ಕಾರದ ಹಣಕಾಸು ಸಹಾಯದೊಂದಿಗೆ ಸಬ್ಸಿಡಿ ಮತ್ತು ಕಡಿಮೆ ಬಡ್ಡಿ ದರದಲ್ಲಿ ಎರಡು ಲಕ್ಷಗಳವರೆಗೆ ಸಾಲ ನೀಡುತ್ತದೆ. ರಾಜ್ಯದ ಇತರ ಜಿಲ್ಲೆಗಳ ಕಥೆ ಏನಿದೆಯೋ ಗೊತ್ತಿಲ್ಲ, ಆದರೆ ಉಡುಪಿಯಲ್ಲಿರುವ ಜಿಲ್ಲಾ ಕಚೇರಿ ಮಾತ್ರ ಅಕ್ಷರಶಃ ಜಗನ್ನಾಥ ಶೆಟ್ಟಿ ಎಂಬ ವ್ಯವಸ್ಥಾಪಕನ ಜೇಬು ತುಂಬಿಸುವ ಒಂದು ಸಾಧನವಾಗಿ ಮಾತ್ರ ಪರಿವರ್ತಿತವಾಗಿದೆ.

ಉಡುಪಿ

ಮೂಲತಃ ಉಡುಪಿಯವನಾದ ಈ ಜಗನ್ನಾಥ ಶೆಟ್ಟಿ ಈ ಹಿಂದೆ ಮಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಾ ಕಂಡಕಂಡಲ್ಲಿ ಕಾಸು ಗೆಬರುವ ಕಲೆಯನ್ನು ಚೆನ್ನಾಗಿ ಕರಗತ ಮಾಡಿಕೊಂಡಿದ್ದಾನೆ. ಯಾವಾಗ ಉಡುಪಿಯು ಒಂದು ಜಿಲ್ಲೆಯಾಗಿ ಪರಿವರ್ತನೆಯಾಯಿತೋ, ಅದರ ಪರಿಣಾಮವಾಗಿ ಅಲ್ಲೊಂದು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ಕಚೇರಿ ಸ್ಥಾಪನೆಯಾಗಿಬಿಟ್ಟಿತೋ ಆಗ ಈ ಗೆಬರು ಗಿರಾಕಿ ಖಾಯಂ ಆಗಿ ವಕ್ಕರಿಸಿಕೊಂಡ. ತನ್ನ ಸ್ವಂತ ಊರು ಕೂಡ ಆಗಿದ್ದರಿಂದ ಇವನ ಆಟ ಎಲ್ಲೆ ಮೀರಿ ನಡೆಯತೊಡಗಿತು.

ಸುಮ್ಮನೇ ಎಂದಾದರೂ ಇವನ ಕಚೇರಿಗೆ ಹೋಗಿ ಸರ್ಕಾರದ ವಿವಿಧ ಯೋಜನೆಗಳಡಿಯಲ್ಲಿ ಸಾಲ ಬೇಕಿತ್ತು ಅಂತ ಅವನನ್ನು ವಿಚಾರಿಸಿ. "ಈ ಬಾರಿಯ ಸಾಲ ವನ್ನೆಲ್ಲಾ ಕೊಟ್ಟಾಯ್ತು, ಮುಂದಿನ ಬಾರಿ ಬನ್ನಿ" ಎಂಬ ರೆಡಿಮೇಡ್ ಉತ್ತರ ಅವನ ಬಾಯಿಂದ ಉದುರುತ್ತದೆ. ನೀವು ಅಲ್ಲಿಗೆ ಸುಮ್ಮನಾಗದೇ ಹಲ್ಲು ಕಿರಿಯುತ್ತಾ ಮೆದುವಾಗಿ ಬೇಕಾದಷ್ಟು ಲಂಚ ಕೊಡಲು ಸಿದ್ಧರಾಗಿದ್ದೀ ರೆಂದು ನಿಮ್ಮ ಹಾವಭಾವಗಳ ಮೂಲಕ ತೋರಿಸಿದರೆ ಸಾಕು ಅವನೂ ಮೆತ್ತಗೆ ಮಾತನಾಡಲು ಶುರುಮಾಡು ತ್ತಾನೆ. "ಈ ಬಾರಿಯ ಸಾಲವನ್ನೆಲ್ಲಾ ಕೊಟ್ಟಾಗಿದೆ. ನಿಮಗೆ ಬೇಕೆಂದರೆ ಮೇಲಧಿಕಾರಿಗಳ ಹತ್ತಿರ ವಿಶೇಷವಾಗಿ ಮಾತನಾಡಬೇಕು. ಅದಕ್ಕೆ ಅವರಿಗೆ ಕಾಸು ಕೊಡಬೇಕು. ನೀವು ಸಿದ್ಧರಿದ್ದರೆ ಮಾಡಿಸಿಕೊಡುತ್ತೇನೆ" ಎಂದು ನಾಜೂಕಾಗಿ ಕೆರೆಯಲು ಪ್ರಾರಂಭಿಸುತ್ತಾನೆ. ನೀವು ಅರ್ಜಿ ಹಾಕುವುದಕ್ಕೆ ಮುಂದಾದರೆ ಆರಂಭದ ಲ್ಲಿಯೇ ಅವನು ಒಂದು ಸಾವಿರ ಗೆಬರುತ್ತಾನೆ. ಒಂದು ವಾರ ಕಳೆಯುತ್ತಿದ್ದಂತೆ ಸುಕಾ ಸುಮ್ಮನೆ ಮತ್ತೆ ಎರಡು ಸಾವಿರ ಗೆಬರುತ್ತಾನೆ. ಹೀಗೆ ಎರಡು ಲಕ್ಷ ಸಾಲ ಮಂಜೂರಾಗುವ ಹೊತ್ತಿಗೆ ಹೆಚ್ಚು ಕಡಿಮೆ ಇಪ್ಪತ್ತೈದು ಸಾವಿರವನ್ನು ನೇರವಾಗಿ ಜೇಬಿಗಿಳಿಸಿರುತ್ತಾನೆ. ಇವನ ಲಂಚಗುಳಿತನಕ್ಕೆ, ಉಡುಪಿಯ ಅದೆಷ್ಟು ಆಟೋ ಚಾಲಕರು, ಬಡ ಮತ್ತು ಹಿಂದುಳಿದ ವರ್ಗಗಳ ಜನರು ಬಲಿಯಾಗಿದ್ದಾರೋ ಲೆಕ್ಕವಿಲ್ಲ.

ಬ್ರೋಕರ್‌ಗಳದ್ದೂ ಹಾವಳಿ

ಉಡುಪಿಯಲ್ಲಿ ಜಗನ್ನಾಥ ಶೆಟ್ಟಿಯ ದೆಸೆಯಿಂದ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ಉದ್ಧಾರ ಅದೆಷ್ಟು ತೀವ್ರಗತಿಯಲ್ಲಿ ನಡೆಯುತ್ತಿದೆ ಎಂದರೆ ವಿವಿಧ ಯೋಜನೆಗಳ ಫಲಾನುಭವಿಗಳ ಕೆಲಸವನ್ನು ಸುಗಮವಾ ಗಿಸಲು ಇವನು ಮಧ್ಯವರ್ತಿಗಳ ಒಂದು ದೊಡ್ಡ ದಂಡನ್ನೇ ಹುಟ್ಟು ಹಾಕಿದ್ದಾನೆ. ಈ ಬ್ರೋಕರ್‌ಗಳ ನಡುವೆ ಇತ್ತೀಚೆಗೆ ಉಡುಪಿಯ ಬೈಪಾಸ್ ಬಳಿ ಜಟಾಪಟ ನಡೆದು ಪೊಲೀಸ್ ಸ್ಟೇಷನ್‌ವರೆಗೂ ಹೋಗಿ ಬಂದಿದ್ದಾರೆ. ಮಲ್ಪೆಯ ಉದಯ ಎಂಬಾತನು ನಿಗಮ ದಿಂದ ಸಾಲ ಪಡೆಯುವುದಕ್ಕೋಸ್ಕರ ಬ್ರೋಕರ್ ಒಬ್ಬನಿಗೆ 10,000 ರೂಪಾಯಿಗಳನ್ನು ಕೊಟ್ಟಿದ್ದಾನೆ. ಕೊನೆಗೆ ಸಾಲವೂ ಇಲ್ಲ, ಕೊಟ್ಟ ಹಣವೂ ಇಲ್ಲ, ಕೊಟ್ಟ ಹಣವನ್ನು ವಾಪಸ್ಸು ಕೇಳಿದ್ದಕ್ಕೆ ಅವನ ಮೇಲೆಯೇ ಹಲ್ಲೆ! ಪ್ರಾಯಶಃ ಆ ಹಣ ಆಗಲೇ ಜಗನ್ನಾಥ ಶೆಟ್ಟಿಯ ಜೇಬು ಸೇರಿದ್ದಿರಬೇಕು.

ಹೀಗೆ ಜಗನ್ನಾಥ ಶೆಟ್ಟಿ ಯಾವ ಎಗ್ಗಿಲ್ಲದೇ ಲಂಚ ತಿನ್ನುತ್ತಾ ಕೊಬ್ಬಿ ದುಂಡಗಾಗಿದ್ದಾನೆ. ಎರಡು ವರ್ಷದ ಹಿಂದೆಯೇ ಈತ ಅಂದಿನ ಲೋಕಾಯುಕ್ತ ವೆಂಕಟಾಚಲ ಅವರ ಕೈಯಲ್ಲಿ ಸಿಕ್ಕಿಹಾಕಿಕೊಂಡು ಛೀ... ಥೂ... ಅಂತ ಉಗಿಸಿಕೊಂಡಿದ್ದ. ಅವರೆದುರು ಗೊಳೋ ಅಂತ ಅತ್ತು ಕರೆದು ಹೇಗೋ ಬೀಸುವ ದೊಣ್ಣೆಯಿಂದ ಪಾರೂ ಆಗಿದ್ದ. ಆದರೆ ನಾಯಿ ಬಾಲ ಡೊಂಕು ಎಂಬಂತೆ ಸ್ವಲ್ಪ ದಿನ ಕಳೆದು ಅದೆಲ್ಲ ಜನರ ಮನಸ್ಸಿನಿಂದ ಮಾಸುತ್ತಿದ್ದಂತೆ ಮತ್ತೆ ತನ್ನ ಹಳೇ ಚಾಳಿಯನ್ನು ಶುರುವಿಟ್ಟುಕೊಂಡಿದ್ದಾನೆ.

ಸಿಬ್ಬಂದಿಗಳಿಗೆ ಯಮಹಿಂಸೆ

ಒಂದೆಡೆ ಹಿಂದುಮುಂದು ನೋಡದೆ ಕಂಡಕಂಡಲ್ಲಿ ಕಂಡಕಂಡಷ್ಟು ಗೆಬರಿ ಮುಕ್ಕುವುದು ಇವನ ಚಾಳಿ ಯಾದರೆ ಇನ್ನೊಂದೆಡೆ ತನ್ನ ಕೈಕೆಳಗೆ ಕೆಲಸ ಮಾಡುವ ಉದ್ಯೋಗಿಗಳಿಗೆ, ಅದರಲ್ಲೂ ವಿಶೇಷವಾಗಿ ದಿನಗೂಲಿ ನೌಕರರಿಗೆ ಯಮಹಿಂಸೆ ಕೊಟ್ಟು ಗೋಳು ಹೊಯ್ದು ಕೊಳ್ಳುವುದು ಇವನ ಖಯಾಲಿ. ದಿನಗೂಲಿ ನೌಕರರನ್ನು ಹಗಲುರಾತ್ರಿ ಎನ್ನದೇ, ರಜಾ, ಹಬ್ಬ ಹರಿದಿನಗಳೆನ್ನದೆ ಕತ್ತೆಯಂತೆ ದುಡಿಸಿಕೊಳ್ಳುವುದು, ಈತನ ಹೊಲಸು ಬಾಯಿಂದ ಕೇಳಲಸಾಧ್ಯವಾದ ಬೈಗುಳಗಳನ್ನು ಉದುರಿ ಸುವುದು, ಮರು ಮಾತನಾಡಿದರೆ ಸಂಬಳದಲ್ಲಿ ಕತ್ತರಿ ಹಾಕಿ ಅದನ್ನೂ ತನ್ನ ಜೇಬಿಗೆ ಇಳಿಸಿಕೊಳ್ಳುವುದು – ಹೀಗೆ ಒಂದೇ ಎರಡೇ ಜಗನ್ನಾಥನ ಮಹಿಮೆಗಳು. ಇದನ್ನೆಲ್ಲಾ ತಾಳಲಾರದೆ ಅದೆಷ್ಟು ಜನ ಕೆಲಸ ತೊರೆದು ಮನೆಸೇರಿದ್ದಾರೋ ಪ್ರಾಯಶಃ ಅವನಿಗೇ ಗೊತ್ತಿರಲಿಕ್ಕಿಲ್ಲ. ಇಂತಹ ವಿಕೃತ ಮನಸ್ಸಿನ ಜಗನ್ನಾಥನ ಲೇಟೆಸ್ಟ್ ಬಲಿಪಶು ಎಂದರೆ ಮೋಹಿನಿ ಎಂಬ ಯುವತಿ.

ಕಳೆದ ಮೂರುವರೆ ವರ್ಷಗಳಿಂದ ಈತನ ಕೈಕೆಳಗೆ ದಿನಗೂಲಿ ನೌಕರಿ ಮಾಡುತ್ತಿದ್ದ ಮೋಹಿನಿ ಈತನ ಶೋಷಣೆ, ಹಿಂಸೆ, ಕಿರುಕುಳಗಳಿಂದ ರೋಸಿ ಹೋಗಿ ದ್ದಾಳೆ. ಆದರೆ ಎಲ್ಲಿಯ ತನಕ ಸಹಿಸುತ್ತಾಳೆ? ಕೊನೆ ಗೊಂದು ದಿನ ಧೈರ್ಯ ಮಾಡಿ ಮಾರ್ಚ್ 18ರಂದು ಉಡುಪಿಯ ಎಸ್‌ಪಿ ಮತ್ತು ನಗರ ಪೊಲೀಸ್ ಠಾ[...] ದೂರು ಕೊಟ್ಟೇ ಬಿಟ್ಟಳು. ಮರುದಿನ ಯುಗಾ[...] (ಅದು ರಜಾ ದಿನ). ಜಗನ್ನಾಥ ಶೆಟ್ಟಿ ಆ ರಜಾ ದಿ[...] ದಂದು ಮೋಹಿನಿಯ ಕೈಯಲ್ಲಿ ಕೆಲಸ ಮಾಡಿಸುತ್ತಿ[...] ವಾಗಲೇ ತನಿಖೆಗೆಂದು ಬಂದ ಸಬ್ ಇನ್ಸ್‌ಪೆಕ್ಟರ್[...] ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದ. ನಂತರ ಈತನನ್ನು ಠಾ[...] ಕರೆದುಕೊಂಡು ಹೋಗಿ ಈತನ ಮೇಲೆ ಕೇಸ್ ಜಡಿ[...] ಲಾಗಿದೆಯಾದರೂ ಈತನಿಗೆ ಅದೆಲ್ಲ ಎಷ್ಟು ಮಾಮೂ[...] ಎಂದರೆ ಸಲೀಸಾಗಿ ಬೇಲ್ ಪಡೆದು ಹೊರಬಂದ[...]

ಆದರೆ ಹೊರಬಂದ ಮೇಲಂತೂ ಮೋಹಿನಿ[...] ಮೇಲೆ ಈತನ ಕಿರುಕುಳ ದುಪ್ಪಟ್ಟಾಗಿಹೋಯಿ[...] ಮೋಹಿನಿಯೂ ಸುಮ್ಮನಾಗಲಿಲ್ಲ, ಆಕೆ ಉಡುಪಿ[...] ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್ ಕಾರ್ಯನಿ[...] ಹಕ ಅಧಿಕಾರಿಗಳಿಗೆ, ಜಿಲ್ಲಾ ಉಸ್ತುವಾರಿ ಮಂತ್ರಿಗಳಿ[...] ಸಮಾಜ ಕಲ್ಯಾಣ ಸಚಿವರಿಗೆ- ಹೀಗೆ ಒಬ್ಬರನ[...] ಬಿಡದೆ ಜಗನ್ನಾಥನ ವಿರುದ್ಧ ದೂರು ಕೊಟ್ಟಳು. ಆದ[...] ಜಗನ್ನಾಥ ಶೆಟ್ಟಿಯ ಕೈ ಎಲ್ಲಿಯವರೆಗೆ ಚಾಚುತ್ತದೆಂದ[...] ಯಾವೊಬ್ಬ ಅಧಿಕಾರಿಯೂ, ಯಾವ ಮಂತ್ರಿಯೂ ಅ[...] ಒಂದು ಕೂದಲನ್ನೂ ಕಿತ್ತುಕೊಳ್ಳಲಾಗಲಿಲ್ಲ. ಎಲ್ಲರ[...] ತನಿಖೆ, ಅದೂ ಇದೂ ಅಂತ ನಾಟಕವಾಡಿ ಮುಗಿಸಿದ[...] ಜಿಲ್ಲಾಧಿಕಾರಿಯಂತೂ ತನಿಖೆಯ ನೆಪದಲ್ಲಿ ಜಗನ್ನಾ[...] ಶೆಟ್ಟಿಯ ಕಿರುಕುಳದ ಬಗ್ಗೆ ಸಾಕ್ಷಿ, ಪುರಾವೆ ಎಂತೆ[...] ಕೇಳಿ ಕೊನೆಗೆ ಮೋಹಿನಿಗೇನೇ ಕೆಲಸ ಬಿಡುವ[...] ಉಪದೇಶ ಮಾಡಿದರು. ಜಗನ್ನಾಥ ಶೆಟ್ಟಿಯ ಕಿರುಕು[...] ದೌರ್ಜನ್ಯ, ಶೋಷಣೆಯನ್ನು ಪ್ರಶ್ನಿಸಿದವರು ತುಂ[...] ಕಡಿಮೆ. ಆದರೆ ದುರಂತ ಎಂದರೆ, ಪ್ರಶ್ನಿಸಿ ಪ್ರತಿಭಟಿ[...] ಒಬ್ಬ ಮಹಿಳೆ, ಮೋಹಿನಿಯು ತನ್ನ ಕೆಲಸ ಕಳೆದುಕೊ[...] ಪರಿಸ್ಥಿತಿ ನಿರ್ಮಾಣವಾಗಿದೆ. ಅತ್ತ ಜಗನ್ನಾಥ ಶೆಟ್ಟಿ[...] ಎಲ್ಲ ಖಯಾಲಿ, ಚಾಳಿಗಳು, ದೌರ್ಜನ್ಯಗಳು ಎಗ್ಗಿಲ್ಲ[...] ಮುಂದುವರೆಯುತ್ತಿವೆ. ಮೋಹಿನಿಯನ್ನು ತೋರಿಸು[...] ತನ್ನ ವಿರೋಧ ಕಟ್ಟಿಕೊಂಡವರ ಪರಿಸ್ಥಿತಿ ಎಲ್ಲಿಗೆ ಬರುತ್[...] ಎಂದು ಹೂಂಕರಿಸುತ್ತಾ ಮುಂದುವರೆದಿದ್ದಾನೆ ಅ[...] ಇಂತಹ ಒಬ್ಬ ಯಕಶ್ಚಿತ್ ಅಧಿಕಾರಿಗೆ ಮೂಗುದಾ[...] ಹಾಕಲಾರದಷ್ಟು ನಿತ್ರಾಣವಾಗಿದೆ ನಮ್ಮ ಕೋ-[...] ಸರ್ಕಾರ. ನಿಜಕ್ಕೂ ಇದು ಕೊಜಾ ಸರ್ಕಾರವೇ ಹೌದ[...]

–ವರದಿಗಾ[...]

ಬೆಳ್ಳಂದೂರಿನ ರೈತ ಜಾಗೃತಿ ಸಮಿತಿಯ ಕಾರ್ಯದರ್ಶಿ ಪುರುಷೋತ್ತಮ್ ಮೇಲೆ ತನ್ನ ನೆಂಟ ಎಚ್‌ಎಎಲ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಎಚ್.ವಿ. ರಾಮಯ್ಯನನ್ನು ಛೂಬಿಟ್ಟು ಮೂರು ಬಾರಿ ಕ್ರಿಮಿನಲ್ ಕೇಸುಗಳನ್ನು ಹಾಕಿಸಿದ. ತನ್ನ ಜಮೀನು ಬಿಟ್ಟುಕೊಡಲು ಒಪ್ಪದ ತಿಗಳರ ಯುವಕ ಶ್ರೀನಿವಾಸ್‌ನನ್ನು ಹೊಸಕೋಟೆಯ ಹಂತಕ ಭೂಪಾಲ್ ರೆಡ್ಡಿಯನ್ನು ಬಿಟ್ಟು ಆತನ ಕೈಕಾಲು ಕತ್ತರಿಸಿದ.



ಕೆ.ಸಿ. ಕೊಂಡಯ್ಯ

ಇವತ್ತು ದೇವೇಗೌಡರ ಸೊಸೆ ಕವಿತಾ ಬಾಲಕೃಷ್ಣೇಗೌಡ ಮತ್ತು ಆಕೆಯ ಸಂಬಂಧಿ ಗಳು ಖರೀದಿಸಿದ 40 ಸಾವಿರ ಚದುರ ಅಡಿಯ ಕಾಂಪ್ಲೆಕ್ಸ್ ಇದೇ ಹಗಲು ದರೋಡೆಯ ಒಂದು ಭಾಗವಷ್ಟೇ. ವಿಶೇಷವೆಂದರೆ ಸದರಿ Primal Projects Pvt Ltd., ಕಂಪೆನಿಗೂ ದೇಶಪಾಂಡೆಯ ಪತ್ನಿ ರಾಧಾ ದೇಶ ಪಾಂಡೆಯೇ ಸ್ಲೀಪಿಂಗ್ ಪಾರ್ಟ್‌ನರ್!



ಅಲೆಕ್ಸಾಂಡರ್

ಇದು 2001ರ ಹಗಲು ದರೋಡೆ ಯಾದರೆ ಇದೇ 'ಇಕೋಸ್ಪೇಸ್' ಹಿಂಭಾ ಗದ 32 ಎಕರೆಯ ಮತ್ತೊಂದು ಪ್ಲಾಟನ್ನು 2003ರಲ್ಲಿ KIADB ರೈತರಿಂದ ಕಿತ್ತು ಕುಪೇಂದ್ರ ರೆಡ್ಡಿಗೆ ಕೊಡುತ್ತದೆ. ವಿಪ್ರೋ, ಇನ್‌ಫೋಸಿಸ್ ಥರದ ಅಪ್ಪಟ ಐಟಿ ಕಂಪೆನಿಗಳಿಗೆ ಭೂಮಿ ಕೊಡದ KIADB ಈ ಬಾರಿ ಬೆಳ್ಳಂದೂರು ಸರ್ವೆ ನಂಬರ್ 51ರಿಂದ 65ರವರೆಗಿನ ರೈತರನ್ನೆಲ್ಲ ಒಕ್ಕಲೆಬ್ಬಿಸಿ Primal Projects Pvt Ltd Phase II ಎಂಬ ನಕಲಿ ಪ್ರಾಜೆಕ್ಟಿಗೆ ಮತ್ತೆ 32 ಎಕರೆ ಮಂಜೂರು ಮಾಡುತ್ತದೆ. 280 ಕೋಟಿ ಬಂಡವಾಳ ಹಾಕ್ತೀನಿ, 15 ಸಾವಿರ ಕನ್ನಡಿಗರಿಗೆ ಕೆಲಸ ಕೊಡ್ತೀನಿ ಎಂದಿದ್ದ ರೆಡ್ಡಿಯ ಬಳಿ ನಿಜಕ್ಕೂ ಅಷ್ಟೊಂದು ದುಡ್ಡಿತ್ತಾ? ಒಬ್ಬನಿಗಾದರೂ ಕೆಲಸ ಕೊಟ್ಟನಾ? ಎಂಬುದನ್ನೂ KIADB ಪರಿಶೀಲಿಸುವುದಿಲ್ಲ.



ಕೊಂಗವಾಡ

ನಯಾಪೈಸೆಯ ಬಂಡವಾಳವಿಲ್ಲದೆ, ತನ್ನ ಪ್ರಾಜೆಕ್ಟ್ ರಿಪೋರ್ಟಿನಲ್ಲಿ ವಿವರಿಸಿದ ಯಾವ ಷರತ್ತನ್ನೂ ಜಾರಿ ಗೊಳಿಸದೆ ಮುನ್ನೂರು ಕೋಟಿ ರೂಪಾಯಿ ಬೆಲೆಬಾಳುವ ಜಮೀನನ್ನು ರೆಡ್ಡಿ ದೋಚಿಬಿಟ್ಟ.

ಯಾವತ್ತು ದೇವೇಗೌಡರು ಭೂಗಳ್ಳರನ್ನು ಜೈಲಿಗೆ ಹಾಕ್ತೀನಿ ಎಂದು ಗುಡುಗತೊಡಗಿ ದರೋ ಹೆದರಿದ ದೇಶಪಾಂಡೆ ಕುಪೇಂದ್ರ ರೆಡ್ಡಿಗೆ ದೇವೇಗೌಡರನ್ನು ಸಂಭಾಳಿಸು ಎಂದಿ ದ್ದಾನೆ. ದೇವೇಗೌಡ ಪ್ರಧಾನಿಯಾಗಿದ್ದಾಗಲೇ ಮಸ್ತಾ ಹೊಡೆದುಕೊಂಡಿದ್ದ ಕುಪೇಂದ್ರ ರೆಡ್ಡಿ ಆಗಾಗ ಕುಮಾರಣ್ಣನಿಗೂ ಪ್ರಸಾದ ತಿನ್ನಿಸಿದ್ದ. ಆದರೆ ಕಳೆದ ಚುನಾವಣೆಯಲ್ಲಿ ಅಪ್ಪ-ಮಕ್ಕಳಿಬ್ಬರಿಗೂ ಕೈಕೊಟ್ಟ. ಡೀಕೆ ಮತ್ತು ದೇಶಪಾಂಡೆಯನ್ನು ಹಿಡ ಕೊಂಡ. ಅದೇ ಜೆಡಿಎಸ್ ಅಧಿಕಾರಕ್ಕೆ ಬರುತ್ತಿದ್ದಂತೆ ಬಾಲಕೃಷ್ಣೇಗೌಡರನ್ನು ಬುಟ್ಟಿಗೆ ಹಾಕಿಕೊಂಡ. ಹೀಗೆ ನಲವತ್ತು ಕೋಟಿಯ ಆಸ್ತಿಯನ್ನು ಕೇವಲ ಐದು ಕೋಟಿಗೆ ಬಾಲಕೃಷ್ಣೇಗೌಡರ ಬಾಯಿಗೆ ಹಾಕುತ್ತಾನೆಂದರೆ ಅದು ಸುಮ್ಮನೇ ಅಲ್ಲ. ಅದಕ್ಕಿರುವ ಕಾರಣವೇ ಬೇರೆ. ಅದೇ ಇನ್ನೊಂದು ಭಯಾನಕ ಹಗಲು ದರೋಡೆಯ ಕತೆಯಾಗುತ್ತದೆ.

ಸದ್ಯ ಐಟಿ ಅಧಿಕಾರಿಗಳು ಜಪ್ತಿ ಮಾಡಿಕೊಂಡ ದಾಖಲೆಗಳೇ ಹೇಳು ವಂತೆ KIADB ಯ ಮೂಲಕ ಕುಪೇಂದ್ರ ರೆಡ್ಡಿ ಕೊಳ್ಳೆ ಹೊಡೆದದ್ದು ಕೇವಲ ಬೆಳ್ಳಂದೂರಿನ ಈ ಎರಡು ಆಸ್ತಿಗಳಷ್ಟೇ ಅಲ್ಲ, ಇಂಥ ಅದೆಷ್ಟು ನಕಲಿ ಐಟಿ ಕಂಪೆನಿಗಳನ್ನು ಹುಟ್ಟು ಹಾಕಿ ದ್ದಾನೋ; ಅದೆಷ್ಟು ಬೋಗಸ್ ಪ್ರಾಜೆಕ್ಟ್ ರಿಪೋರ್ಟುಗಳ ಆಧಾರದ ಮೇಲೆ ರೈತರ ಭೂಮಿ ದೋಚಿದ್ದಾನೋ ಎಂಬ ಲೆಕ್ಕವೇ ನಿಖರವಾಗಿ ಸಿಗುತ್ತಿಲ್ಲ.

ಈಗ ಸಿಕ್ಕಿರುವ ದಾಖಲೆಗಳ ಪ್ರಕಾರವೇ 2002ರ ನವೆಂಬರ್‌ನಲ್ಲಿ RGA Software Systems Pvt Ltd ಎಂಬ ಮತ್ತೊಂದು ಬೋಗಸ್ ಕಂಪೆನಿಯ ಹೆಸರಿನಲ್ಲಿ ರೆಡ್ಡಿ KIADB ಗೆ ಅರ್ಜಿ ಹಾಕುತ್ತಾನೆ. ನಾಲ್ಕು ಸಾವಿರ ಜನಕ್ಕೆ ಕೆಲಸ ಕೊಡುತ್ತೇನೆ, 48 ಕೋಟಿ ಬಂಡವಾಳ ಹಾಕ್ತೀನಿ ಎನ್ನುತ್ತಾನೆ. ದೇಶ ಪಾಂಡೆಯೇ ನಿಂತು ಈತನಿಗೆ ಎಲೆಕ್ಟ್ರಾನಿಕ್ ಸಿಟಿಯಲ್ಲಿ 18 ಎಕರೆ ಭೂಮಿ ಕೊಡುತ್ತಾರೆ. ಆನಂತರ 2005-06 ರಲ್ಲಿ ಮೈಸೂರಿನ ಹೆಬ್ಬಾಳ, ಹಾನಗಳ್ಳಿ ಮತ್ತು ಪುರಾ ಗ್ರಾಮಗಳ ಒಟ್ಟೂ 60 ಎಕರೆ ಭೂಮಿ ಕೇಳುತ್ತಾನೆ. ಅಲ್ಲಿ 50 ಕೋಟಿ ಬಂಡವಾಳ ಹೂಡುತ್ತೇನೆಂದೂ ಸಾವಿರದಿನ್ನೂರು ಜನಕ್ಕೆ ಕೆಲಸ ಕೊಡುತ್ತೇನೆಂದೂ ಪ್ರಾಜೆಕ್ಟ್ ರಿಪೋರ್ಟ್ ಕೊಟ್ಟಿದ್ದಾನೆ. KIADB ಆತನಿಗೆ ಭೂಮಿ ಕೊಡುವುದರಲ್ಲಿ ತೋರಿಸಿದ ಆಸಕ್ತಿಯನ್ನು ಆತನ ಪ್ರಾಜೆಕ್ಟ್ ರಿಪೋರ್ಟಿನ ಸತ್ಯಾಸತ್ಯತೆಯನ್ನು ಪರಿಶೀಲಿಸುವುದರಲ್ಲಿ ತೋರಿಸಲಿಲ್ಲ.



ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಸೂರ್ಯ ವೇವ್

ಆನಂತರ 408 ಕೋಟಿ ಬಂಡವಾಳ ಹೂಡುತ್ತೇ ನೆಂದು 158 ಜನಕ್ಕೆ ಉದ್ಯೋಗ ಕಲ್ಪಿಸುತ್ತೇನೆಂದೂ ಬೆಂಗಳೂರು ನಗರ ಜಿಲ್ಲೆಯ ಯಮರೆ ಗ್ರಾಮಕ್ಕೆ ವಕ್ಕರಿಸುತ್ತಾನೆ. ಈ ಭೂಕಬಳಿಕೆಗೆ ಆತ Saphire Infrastructure Development Pvt Ltd., ಎಂಬ ಹೆಸರು ಕೊಟ್ಟಿದ್ದಾನೆ. ಇದಕ್ಕೆಂದು KIADB 160 ಎಕರೆಗೆ ನೋಟೀಸ್ ಹೊರಡಿಸುತ್ತದೆ. ಇಂಥ ಬಹುತೇಕ ಭೂಕಬಳಿಕೆಗೆ ರೆಡ್ಡಿಗೆ ಮಾಜಿ IAS ಖದೀಮ ಅಲೆಕ್ಸಾಂಡರ್ ನೆರವಾಗುತ್ತಾನೆ. ಮತ್ತೊ[...] ಐಎಎಸ್ ಕೊಂಗುವಾಡ್ ಪ್ರತಿ ಹಂತದ ಭೂಸ್ವಾಧೀ[...] ವನ್ನೂ ನಿಭಾಯಿಸುತ್ತಾನೆ. ಐಪಿಎಸ್ ಅಧಿಕಾರಿ ಕೆ.[...] ರಾಮಮೂರ್ತಿ ಸಾಹೇಬರು ತಮ್ಮೆಲ್ಲಾ ಪೊಲೀ[...] ಪವರ್ ಅನ್ನು ಧಾರೆಯೆರೆಯುತ್ತಾರೆ. ಮತ್ತೊಬ್ಬ ಐಎ[...] ಉಮಾಕಾಂತ್, KIADBಯ ಭೂಗಳ್ಳ ಸೆಕ್ರೆ[...] ಶ್ರೀಧರ್ ಬಡರೈತರ ಭೂಮಿಯನ್ನು ಕಿತ್ತೂ ಕಿ[...] ಕೊಡುತ್ತಾರೆ. ಕೊನೆಕೊನೆಗೆ ಕುಪೇಂದ್ರ ರೆಡ್ಡಿ ಮ[...] ರೆಡ್ಡಿ ವೀರಣ್ಣ ಒಟ್ಟಾಗಿ ಸರ್ಜಾಪುರದ ಮೂರು ಹ[...] ಗಳನ್ನು ಇಡಿಇಡಿಯಾಗಿ ನುಂಗಿದ್ದಾರೆ. (ಬಾಕ್ಸ್ ನೋಡಿ[...]

ಹೀಗೆ KIADB ಮತ್ತು ದೇಶಪಾಂಡೆಯ[...] ಮುಂದಿಟ್ಟುಕೊಂಡು ಕುಪೇಂದ್ರ ರೆಡ್ಡಿಯೊಬ್ಬನೇ ಒಟ[...] ಎಂಟು ನೂರು ಎಕರೆ ಬಡರೈತರ ಜಮೀ[...] ದೋಚಿದ್ದಾನೆ. ಜೆಡಿಎಸ್ ಅಧಿಕಾರಕ್ಕೆ ಬರುತ್ತಿದ್ದ[...] ದೇವೇಗೌಡರ ಫ್ಯಾಮಿಲಿಗೂ ಕೊಳ್ಳೆಯ ಪಾ[...] ಕೊಡುತ್ತಾನೆ. ಬಹುಶಃ ಕುಪೇಂದ್ರನ ಪಾಪದ ಕೊ[...] ತುಂಬಿರಬೇಕು. ಜೂನ್ 26ರಂದು ಐಟಿ ಅಧಿಕಾ[...] ಗಳು ಆತನ ಎಚ್.ಎಸ್.ಆರ್. ಲೇಔಟಿನ ಬಂಗ[...] ಕೋರಮಂಗಲದ ಅಡ್ಡೆ, ಎಲೆಕ್ಟ್ರಾನಿಕ್ ಸಿಟಿ[...] ಛೇಂಬರ್ ಎಲ್ಲಕ್ಕೂ ರೇಡು ಬದ್ದಿದ್ದಾರೆ. ದೇಶಪಾಂ[...] ಪತ್ನಿಯ ಬೇನಾಮಿ ಆಸ್ತಿ, ಕೆ.ಸಿ. ಕೊಂಡಯ[...] ಪಾಲುದಾರಿಕೆ ಅಗ್ರಿಮೆಂಟ್, ಅರ್ಧ ಡಜ[...] ಐಎಎಸ್ ಅಧಿಕಾರಿಗಳ ಸೊತ್ತಿನ ವಿವರಗಳು ಮ[...] ಬಾಲಕೃಷ್ಣೇಗೌಡನ ಪತ್ನಿ ಕೊಂಡ ಆಸ್ತಿಯ ವಿವರಗಳ[...] ಈಗ ಐಟಿ ಅಧಿಕಾರಿಗಳ ಕೈ ಸೇರಿದೆ.

ಹೀಗೆ ಮೂರು ಸಾವಿರ ಕೋಟಿಯ ಆಸ್ತಿಯ[...] KIADB ಒಂದರ ಮೂಲಕವೇ ಕೊಳ್ಳೆ ಹೊಡ[...] ಕುಪೇಂದ್ರ ರೆಡ್ಡಿಯನ್ನು ದೇಶಪಾಂಡೆಯೇ ನಿಂ[...] ರಕ್ಷಿಸಬಹುದು. ಅದರಿಂದ ದೇವೇಗೌಡರ ಫ್ಯಾಮಿಲಿ[...] ಭೂಕಬಳಿಕೆಯೂ ಮುಚ್ಚಿಹೋಗಬಹುದು. ಆದರೆ ಇ[...] ಹಗಲು ದರೋಡೆಗಾಗಿ ಭೂಮಿ ಕಳಕೊಂಡ ಬೆ[...] ಳೂರು ಸುತ್ತಮುತ್ತಲ ರೈತರು ಇನ್ನೂ ಸುಮ್ಮನಿರಬೇಕೆ[...] KIADB ಯ ಲೂಟಿಗೆ ಕಡಿವಾಣವೇ ಇಲ್ಲ[...] ಭೂಕಬಳಿಕೆಯ ವಿರುದ್ಧ ದಂಡಯಾತ್ರೆ ಕೈಗೊಂಡ ಎ[...] ರಾಮಸ್ವಾಮಿ ಕೈಗಾರಿಕೆಗಳ ಹೆಸರಲ್ಲಿ ನಡೆದ ಕ[...] ಯಿತಿಯ ಬಗ್ಗೆ ಏಕೆ ಬಾಯಿಬಿಡುತ್ತಿಲ್ಲ?

ಕುಂದಾಪುರ: ಕ್ರೈಸ್ತ ಧರ್ಮ ಗುರುಗಳ ಮೇಲೆ ಭಜರಂಗಿಗಳ ಹಲ್ಲೆ

ಉಡುಪಿ ಕುಂದಾಪುರ ಹೆದ್ದಾರಿಯಲ್ಲಿ ಕೋಟೇ
ದ ಸಮೀಪ, ಕಟ್ಕೆರೆ ಎಂಬಲ್ಲಿ ಕ್ಯಾಥೋಲಿಕ್ ಪಂಥದ
ದು ಕಾರ್ಮೆಲೈಟ್ ಚಾಪೆಲ್ (ಪ್ರಾರ್ಥನಾ ಮಂದಿರ)
ದೆ. ಅಲ್ಲಿ ಯುವ ಕ್ರೈಸ್ತ ಧರ್ಮ ಗುರುಗಳಿಗೆ
ರ್ಮಿಕ ಶಿಕ್ಷಣ ನೀಡಲಾಗುತ್ತಿದೆ. ತಾ 25.6.07
ೋಮವಾರ ಬೆಳಿಗ್ಗೆ ಆ ಮಂದಿರದ ಧರ್ಮಗುರು
ೈಸ್ಟರ್ ಪಿರೇರಾ (36) ಮತ್ತು ಅಲ್ಲಿ ಧರ್ಮ ದೀಕ್ಷೆ
ಡೆಯುತ್ತಿರುವ ತರುಣ ಬ್ರದರ್ ಜೊಯ್ಸನ್ ಸಲ್ಡಾನ,
ೋನ್ ಪ್ರದೀಪ್ ಹಾಗೂ ಮಂದಿರದ ಅಡುಗೆಯ
ವಾದ ಮುಕುಂದ ಎಂಬವರ ಮೇಲೆ ಕುಂದಾಪುರದ
ಜರಂಗಿಗಳು ದೈಹಿಕ ಹಲ್ಲೆ ನಡೆಸಿದ್ದು ಅವರೆಲ್ಲರೂ
ಸ್ಪತ್ರೆಗೆ ದಾಖಲಾಗಿದ್ದಾರೆ.

ಮಂದಿರದ ದೀಕ್ಷಾವೃತಿಗಳಾದ ಜೊಯ್ಸನ್ ಮತ್ತು
ೋನ್ ಪ್ರದೀಪ್ ಕೆಲವು ದಿನಗಳಿಂದ ಜ್ವರಪೀಡಿತರಾ
ದ್ದು, ಅವರ ರಕ್ತ ಪರೀಕ್ಷೆಗೆಂದು ಫಾದರ್ ಪಿರೇರಾ,
ವರನ್ನು ಕೋಟೇಶ್ವರದ ಅಂಕದಕಟ್ಟೆಯ ಸರ್ಜನ್ಸ್
ಾಸ್ಪಿಟಲ್‌ಗೆ ವಲೇರಿಯನ್ ಡಿಸಿಲ್ವ ಎಂಬುವರ ಕಾರಿ
ಲ್ಲಿ ಕರೆತಂದಿದ್ದರು. ಡಾಕ್ಟರ್ ಜೊತೆ ಸಮಾಲೋಚಿಸಿ
ಸ್ಪತ್ರೆಯಿಂದ ಅವರು ಹೊರಬರುತ್ತಿದ್ದಾಗ, ಕುಂದಾಪುರದ
ಜರಂಗದಳದ ರಾಮಣ್ಣ ಶೆಟ್ಟಿ ಮತ್ತು ಇತರ ಏಳೆಂಟು
ನ ಅವರನ್ನು ಅಡ್ಡಗಟ್ಟಿ, "ಆಸ್ಪತ್ರೆಗೆ ಬಂದು ಮತಾಂತರ
ಾಡುತ್ತಿದ್ದೀಯಾ?" ಎಂದು
ದರಿಸಿ, ಅವರ ಮೇಲೆ ಕೈ ಮಾಡಿ
ದ್ದಾರೆ.

ಧರ್ಮಗುರುಗಳನ್ನು ಕಾರಿನಲ್ಲಿ
ಡುಕೊಂಡು ಬಂದ ವಲೇರಿ
ಯನ್ ಡಿಸಿಲ್ವ 66 ವರ್ಷ ಪ್ರಾಯದ
ವಾಗಿದ್ದು ಅವರು ಕೋಟೇಶ್ವರ
ಲ್ಲಿಯೇ ಹುಟ್ಟಿ ಬೆಳೆದು ಈಗಲೂ
ಲ್ಲಿಯೇ ನೆಲೆಸಿರುವವರು. ಅವರು
ಿಪರಿಯಾಗಿ "ನಾವು ಯಾರೂ
ತಾಂತರ ಮಾಡುವವರಲ್ಲ; ನಾವು
ದಕ್ಕೆ ಇಲ್ಲಿಗೆ ಬಂದವರೂ ಅಲ್ಲ"
ಂದು ಹೇಳಿದರೂ ಕೇಳದೆ ಭಜ
ಂಗಿಗಳು ಅವರಿಗೂ ಹೊಡೆದಿ
ದ್ದಾರೆ. ಹೊಡೆತಕ್ಕೆ ಅವರ ಎದುರಿನ
ಲ್ಲು ಉದುರಿ ವಿಪರೀತ ರಕ್ತಸ್ರಾವವಾಗಿದೆ. ಫಾದರ್
ಿರೇರಾರನ್ನು ನೆಲಕ್ಕೆ ಕೆಡವಿ ಅವರ ಎದೆಗೆ ತುಳಿಯ
ಾಗಿದೆ. ಜ್ವರದಲ್ಲಿ ನರಳುತ್ತಿದ್ದ ಜೊಯ್ಸನ್, ಜೋನ್
ದೀಪ್ ಮತ್ತು ಮುಕುಂದ ಅವರಿಗೂ ಹೊಡೆತ
ಿದ್ದಿದೆ. ಅವರೆಲ್ಲ ಈಗ ಕುಂದಾಪುರದ ಚಿನ್ಮಯ
ಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಫಾದರ್ ಪಿರೇರಾರನ್ನು
ವ್ರನಿಗಾ ಕೊಠಡಿಯಲ್ಲಿರಿಸಲಾಗಿದೆ.

ಈ ಘಟನೆಯ ಬಗ್ಗೆ ಕುಂದಾಪುರ ಪೊಲೀಸರು
ಡೆದುಕೊಂಡ ರೀತಿ, ಘಟನೆಗಿಂತಲೂ ಹೆಚ್ಚು ಗಾಬರಿ
ುಟ್ಟಿಸುವಂತಿದೆ. ಧರ್ಮಗುರುಗಳ ಮೇಲೆ ಹಲ್ಲೆ
ಡೆಸಿದ ರಾಮಣ್ಣ ಶೆಟ್ಟಿ ತಂಡದವರೇ, ಸ್ಥಳಕ್ಕೆ ಬಂದ
ಪೊಲೀಸರಿಗೆ ಅವರ ವಿರುದ್ಧ ಮತಾಂತರ ಮತ್ತು
ೀಮು, ಪ್ರಚೋದನೆಯ ದೂರು ಕೊಟ್ಟಿದ್ದಾರೆ.
ಪೊಲೀಸರು ಹಲ್ಲೆಗೊಳಗಾದವರನ್ನು ಎರಡು ರಿಕ್ಷಾಗಳಲ್ಲಿ
ುಂದಾಪುರ ಠಾಣೆಗೆ ಕರೆದೊಯ್ದು, ರಿಕ್ಷಾ ಚಾರ್ಜನ್ನು
ವರಿಂದಲೇ ಕೊಡಿಸಿ ಅವರ ವಿರುದ್ಧ ರಾಮಣ್ಣ
ಟ್ಟಿಯ ದೂರನ್ನು ದಾಖಲು ಮಾಡಿಕೊಂಡಿದ್ದಾರೆ;

ಅದೂ ಅಲ್ಲದೇ ಠಾಣೆಯಲ್ಲಿ ಈ "ಆಪಾದಿತ" ಧರ್ಮಗುರು ಮತ್ತು ಇತರರಿಗೆ ಮಾತಾಡಲೂ ಅವಕಾಶ ಕೊಡದೆ, ಚರ್ಚಿನ ಮೇಲಿನ ಧರ್ಮಾಧಿಕಾರಿಗಳಿಗೆ ಸುದ್ದಿ ತಿಳಿಸಲೂ ಬಿಡದೆ, ಅವರನ್ನು ಸಾಮಾನ್ಯ ಕ್ರಿಮಿನಲ್‌ಗಳಂತೆ ಗಂಟೆಗಟ್ಟಲೆ ಕೂಡಿಸಿ ಅವಮಾನಿಸಿದ್ದಾರೆ. ಕುಂದಾಪುರ ಪೊಲೀಸರು ರಾಮಣ್ಣ ಶೆಟ್ಟಿ ಮತ್ತು ಇತರ ನಾಲ್ವರ ಮೇಲೆ ಕಾಟಾಚಾರಕ್ಕೆ ಒಂದು ದೂರು ದಾಖಲಿಸಿಕೊಂಡಿದ್ದು, ರಾಮಣ್ಣ ಶೆಟ್ಟಿಯನ್ನು ಬಂಧಿಸುವ ಶಾಸ್ತ್ರವನ್ನೂ ಮಾಡಿ ಜಾಮೀನಿನ ಮೇಲೆ ಬಿಟ್ಟಿದ್ದಾರೆ. ಫಾದರ್ ಪಿರೇರಾ ಮತ್ತು ಇತರರ ಮೇಲೆ ರಾಮಣ್ಣ ಶೆಟ್ಟಿ ಕೊಟ್ಟಿರುವ ದೂರಿನಲ್ಲಿ "ಆಸ್ಪತ್ರೆಯ ವಿವಿಧ ವಾರ್ಡುಗಳಿಗೆ ತೆರಳಿ ಬೋಧನೆ ನಡೆಸುವ ಮೂಲಕ

ಡಿಸಿಲ್ವ ಬಹಳ ಹಿಂದಿನಿಂದಲೂ ಪರಿಚಯ. ಕಟ್ಕೆರೆ ಚಾಪಲ್‌ನ ಧರ್ಮಗುರುಗಳೂ ಅವರಿಗೆ ಪರಿಚಿತರೇ. "ಅವರೆಲ್ಲ ಚಿಕಿತ್ಸೆಗೆ ನಮ್ಮ ಆಸ್ಪತ್ರೆಗೇ ಬರುವುದು. ಅವರು ಯಾವತ್ತೂ ನಮ್ಮ ಆಸ್ಪತ್ರೆಯಲ್ಲಿ ಮತಾಂತರ ಮಾಡಿದ್ದೂ ಇಲ್ಲ; ವಾರ್ಡುಗಳಿಗೆ ಹೋಗಿ ರೋಗಿಗಳಿಗೆ ಬೋಧನೆ ಮಾಡಿದ್ದೂ ಇಲ್ಲ. ಅನಾರೋಗ್ಯ ಹೊರತುಪಡಿಸಿ ಬೇರೆ ಯಾವ ಕಾರಣಕ್ಕೂ ಅವರು ಯಾರೂ ಇದುವರೆಗೆ ಈ ಆಸ್ಪತ್ರೆಗೆ ಭೇಟಿ ಕೊಟ್ಟಿಲ್ಲ" ಎಂದು ಡಾ. ವಿಶ್ವೇಶ್ವರ್ ಮತ್ತು ಅವರ ಪತ್ನಿ ಹಾಗೂ ಆಸ್ಪತ್ರೆಯ ಅರಿವಳಿಕೆ ತಜ್ಞೆ ಡಾ. ವನಿತಾಲಕ್ಷ್ಮಿ ನಮಗೆ ತಿಳಿಸಿದರು.

ವಿನಾಕಾರಣ ತಮ್ಮ ಧರ್ಮಗುರುಗಳ ಮೇಲೆ ಬಂದಿರುವ ಆಪಾದನೆ ಮತ್ತು ನಡೆದ ಹಲ್ಲೆಯಿಂದ

ಕೊಡಬೇಕಾದವರು ಯಾರು? ವಿಚಾರಣೆ ನಡೆಸಬೇಕಾದವರು ಯಾರು?

ಕಾನೂನಿನ ಈ ಸೂಕ್ಷ್ಮಗಳನ್ನೆಲ್ಲ ಬದಿಗೆ ಸರಿಸಿ ಭಜರಂಗಿಗಳು ಪ್ರಾಟೆಸ್ಟಂಟ್ ಮತ ಪ್ರಚಾರಕರ ಮೇಲೆ ತಾವೇ ಮತಾಂತರದ ಆಪಾದನೆ ಹೊರಿಸಿ, ತಾವೇ ಶಿಕ್ಷೆಯನ್ನೂ ಕೊಡುತ್ತಿದ್ದಾರೆ. ಅವರಿಗೆ ಪ್ರಜೆಗಳ ನಂಬಿಕೆಯ ಸ್ವಾತಂತ್ರ್ಯ ಹಾಗೂ ಪ್ರತಿಪಾದನೆಯ ಸ್ವಾತಂತ್ರ್ಯಗಳ ಬಗ್ಗೆ ಸಹನೆ ಇಲ್ಲ; ಈ ಕಾಲದಲ್ಲಿ ಯಾರನ್ನೇ ಆಗಲಿ ಬಲಾತ್ಕಾರವಾಗಿ ಮತಾಂತರ ಮಾಡಲು ಸಾಧ್ಯವೆ ಎಂದು ಯೋಚಿಸುವಷ್ಟು ಕಾಮನ್‌ಸೆನ್ಸ್ ಕೂಡ ಇಲ್ಲ, ಅದು ಹೇಗೂ ಇರಲಿ, ಮತಾಂತರದ ನೆವದಲ್ಲಿ ಕರಾವಳಿಯಲ್ಲಿ ಭಜರಂಗಿಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಕ್ಯಾಥೊಲಿಕ್ ಕ್ರೈಸ್ತರ ಪಾತ್ರಗಣನೀಯವಾಗಿದ್ದರೂ, ಅವರದ್ದು ಅಲ್ಪಸಂಖ್ಯಾತರಲ್ಲೇ ಅತ್ಯಂತ ಪುಟ್ಟ ಸಮುದಾಯ; ಅವರು ಎಂದೂ ಮತ ಪ್ರಚಾರದ ಉತ್ಸಾಹವನ್ನೂ ತೋರಿದವರಲ್ಲ.



ವಲೇರಿಯನ್ ಡಿಸಿಲ್ವ — ಫಾದರ್ ಪಿರೇರಾ — ಮುಕುಂದ — ಜೊಯ್ಸನ್ ಸಲ್ಡಾನ — ಜೋನ್ ಪ್ರದೀಪ್

ಇದುವರೆಗೆ ಕರಾವಳಿಯ ಕ್ರೈಸ್ತರು ಅದರಲ್ಲೂ ಕ್ಯಾಥೊಲಿಕ್ಕರು, ಯಾರ ತಂಟೆಗೂ ಹೋಗದೆ

ಇವರು ಮತಾಂತರಕ್ಕೆ ಪ್ರಚೋದನೆ ನೀಡುತ್ತಿದ್ದಾರೆ" ಎಂದು ಕಾಣಿಸಲಾಗಿದೆ. ಸದ್ರಿ ರಾಮಣ್ಣ ಶೆಟ್ಟಿ ಒಬ್ಬ ಹಳೆಯ ಅಪರಾಧಿ; ಆತನ ಮೇಲೆ ಹಲವು ಕೇಸುಗಳಿವೆ. 2002ರ ಅಸೋಡು ಗ್ರಾಮದ ಏಡ್ಸ್ ಸೂಜಿ ಪ್ರಕರಣ ಮತ್ತು ಆನಂತರ ಕುಂದಾಪುರದ ಮುಸ್ಲಿಮ್ ಮನೆಗಳ ಮೇಲೆ ನಡೆದ ದಾಳಿಯಲ್ಲೂ ಅವನ ಪಾತ್ರವಿದೆ ಎನ್ನಲಾಗಿದೆ. ಇಂತಹ ಚರಿತ್ರೆವುಳ್ಳ ಆಸಾಮಿಯೊಬ್ಬ ಕೊಟ್ಟ ದೂರನ್ನು ಕುಂದಾಪುರ ಪೊಲೀಸರು ಸಲೀಸಾಗಿ ದಾಖಲು ಮಾಡಿಕೊಳ್ಳುತ್ತಾರೆ! ಆದರೆ ಅದೇ ವೇಳೆಗೆ ಠಾಣೆಗೆ ಕರೆತಂದಿರುವ ಧರ್ಮಗುರುಗಳ ಜೊತೆ ಗೌರವದಿಂದ ನಡೆದುಕೊಳ್ಳುವ ಕನಿಷ್ಠ ಸೌಜನ್ಯವೂ ಅವರಿಗೆ ಇಲ್ಲ! ಅದು ಹಾಗಿರಲಿ, ಆ ದೂರಿನ ಸತ್ಯಾಸತ್ಯತೆ ಬಗ್ಗೆ ಅವರು ಸಂಬಂಧಪಟ್ಟ ಆಸ್ಪತ್ರೆಯವರನ್ನೂ ಒಂದು ಮಾತು ಕೇಳಿಲ್ಲ! ಕುಂದಾಪುರ ಪೊಲೀಸರು ಹೊಟ್ಟೆಗೆ ಏನು ತಿನ್ನುತ್ತಾರೆ?

ಸರ್ಜನ್ಸ್ ಹಾಸ್ಪಿಟಲ್‌ನ ಮುಖ್ಯಸ್ಥ ಡಾ. ವಿಶ್ವೇಶ್ವರ್ ಅವರಿಗೆ ಈ ಘಟನೆಯಲ್ಲಿ ಏಟು ತಿಂದ ವಲೇರಿಯನ್


ಜಿಲ್ಲೆಯ ಕ್ಯಾಥೊಲಿಕ್ ಕ್ರೈಸ್ತ ಸಮುದಾಯ ಆಘಾತಗೊಂಡಿದೆ. ಕರಾವಳಿಯಲ್ಲಿ ಮತಾಂತರದ ಕ್ಯಾತೆ ತೆಗೆದು ಕ್ರೈಸ್ತರ ಮೇಲೆ ಭಜರಂಗಿಗಳು ಹಲ್ಲೆ ನಡೆಸಿರುವುದು ಇದೇನೂ ಮೊದಲ ಸಲ ಅಲ್ಲ. ಆದರೆ ಈವರೆಗೆ ಈ ಬಗೆಯ ಹಲ್ಲೆಗಳು ಪ್ರಾಟೆಸ್ಟಂಟ್ ಕ್ರೈಸ್ತರ ನ್ಯೂಲೈಫ್ ಮುಂತಾದ ಹೊಸ ಪಂಥಗಳ ಮತ ಪ್ರಚಾರಕರ ವಿರುದ್ಧ ಮಾತ್ರ ನಡೆದಿದ್ದವು. ಅವರಾದರೂ, ಪ್ರಾರ್ಥನಾ ಸಭೆಗಳನ್ನು ನಡೆಸುವುದು, ಬೈಬಲ್ ಪುಸ್ತಿಕೆಗಳನ್ನು ಹಂಚುವುದು ಮುಂತಾದ ಮತ ಪ್ರಚಾರದ ಕೆಲಸಗಳನ್ನಷ್ಟೇ ಮಾಡುತ್ತಿದ್ದರು. ಇದೇ ಮತಾಂತರವೊ? ಅಥವಾ ಬೇರೆ ಏನಾದರೂ ಶಾಸ್ತ್ರ ಆಚರಣೆ ಇತ್ಯಾದಿ ಇವೆಯೋ? ಮಾಟ ಮಂತ್ರ ಮುಂತಾದ್ದನ್ನೂ ಅವರು ಮಾಡುತ್ತಾರೋ? ಪ್ರಾಟೆಸ್ಟಂಟ್ ಮತ ಪ್ರಚಾರಕರು ಇಂತಹ ಯಾವ ಚಟುವಟಿಕೆಯನ್ನೂ ನಡೆಸುತ್ತಿರುವ ಉದಾಹರಣೆಗಳಿಲ್ಲ; ಯಾವ ಪೊಲೀಸು ಠಾಣೆಯಲ್ಲೂ ಅವರ ವಿರುದ್ಧ ಒಂದೇ ಒಂದು ದೂರು ದಾಖಲಾಗಿಲ್ಲ. ಮತಾಂತರ ಒಂದು ಅಪರಾಧವೇ ಆಗಿದ್ದರೆ ಈ ಬಗ್ಗೆ ದೂರು

ತಮ್ಮ ಪಾಡಿಗೆ ತಾವಿದ್ದವರು; ಅವರು ರಾಜಕೀಯವನ್ನೂ ವಿಶೇಷವಾಗಿ ಹಚ್ಚಿಕೊಂಡವರಲ್ಲ, ಆದರೆ ಇನ್ನು ಮುಂದೆ ಸಂಘ ಪರಿವಾರದವರು ಅವರನ್ನು ಹಾಗೆ ಇರಗೊಡುವುದಿಲ್ಲ ಎಂಬುದು ಕುಂದಾಪುರದ ಘಟನೆಯಿಂದ ಈಗ ನಿಚ್ಚಳವಾಗಿದೆ. ಯಾವ ಸಿದ್ಧಾಂತ ಗಾಂಧೀಜಿಯವರ ಕೊಲೆ, ಬಾಬರಿ ಮಸೀದಿ ಧ್ವಂಸ ಮತ್ತು ಗುಜರಾತ್ ನರಮೇಧಗಳಿಂದ ಹಿಡಿದು ಕರಾವಳಿಯ ಉದ್ದಕ್ಕೂ ಇತ್ತೀಚಿನ ವರ್ಷಗಳಲ್ಲಿ ಸಂಘ ಪರಿವಾರದವರು ನಡೆಸಿದ ಹಿಂಸಾಕೃತ್ಯಗಳಿಗೆ ಪ್ರೇರಣೆ ನೀಡಿತೋ, ಅದೇ ಸಿದ್ಧಾಂತ ಕುಂದಾಪುರದ ಧರ್ಮಗುರುಗಳ ಮೇಲೆ ನಡೆದ ಹಲ್ಲೆಗೂ ಕಾರಣವಾಗಿದೆ. ಕರಾವಳಿಯ ಕ್ಯಾಥೊಲಿಕ್ಕರಿಗೆ ಈ ಸತ್ಯ ಈಗ ಮನವರಿಕೆಯಾಗಿದೆ ಎನ್ನುವುದು ಜೂನ್ 27ರ ಬುಧವಾರದಂದು ಕುಂದಾಪುರದಲ್ಲಿ ಅವರು ವಿವಿಧ ಸೆಕ್ಯುಲರ್ ರಾಜಕೀಯ ಮುಖಂಡರ ಸಹಭಾಗಿತ್ವದಲ್ಲಿ ನಡೆಸಿದ ಬೃಹತ್ ಪ್ರತಿಭಟನೆಯಲ್ಲಿ ಸ್ಪಷ್ಟವಾಯಿತು.

-ಜಿ. ರಾಜಶೇಖರ್, ಕೆ. ಫಣಿರಾಜ್

ಕೊಳ್ಳೇಗಾಲದ ಕಳ್ಳ ಎ.ಸಿ. ಶಂಕರಪ್ಪ ಸಿಕ್ಕಿಬಿದ್ದ

ಕೊಳ್ಳೇಗಾಲದ ನುಂಗಣ್ಣ ಅಸಿಸ್ಟೆಂಟ್
ಮೀಷನರ್ ಎಸ್. ಶಂಕರಪ್ಪ ಲಂಚದ ಕಡುಬು
ಯಲ್ಲಿದ್ದಾಗಲೇ ಲೋಕಾಯುಕ್ತರಿಗೆ ಸಿಕ್ಕಿಬಿದ್ದಿದ್ದಾನೆ.
ನಿನ ಸಾರ್ವಜನಿಕರು ಹಾಗೂ ಸ್ವತಃ ಇನ್ನಿತರ ಸರ್ಕಾರಿ
ಕರರೇ ಇದನ್ನು ನೋಡಿ ಸಂತೋಷ ಪಟ್ಟರೆಂದರೆ
ಶಂಕರಪ್ಪನ ಲಂಚದ ಹಾವಳಿ ಇನ್ನೆಷ್ಟಿತ್ತೆಂದು
ಹಿಸಿಕೊಳ್ಳಿ.
ಳ್ಳೇಗಾಲಕ್ಕೆ
ುವ
ಡಲು
ವಳಿಯ
ೀಲು
ವಸ್ಥಾನದ
ಳಿತಾಧಿಕಾರಿ
ಗಿ ದೇವರ
ಂಡಿ ಕಾಸನ್ನೂ
ಡೆ



ದ್ದೋಷಪ ತೆಗೆದುಕೊಳ್ಳುತ್ತಿದ್ದ ಈ ಶಂಕರಪ್ಪ, ಇದನ್ನೆಲ್ಲಾ
ೀಡಿ ರೊಚ್ಚಿಗೆದ್ದ ಜನ ಇನ್ನೇನು ಒದೆಯುತ್ತಾರೆಂದು
ದಿದ್ದೇ ತಡ ಶಂಕರಪ್ಪ ನೇರ ಹೋಗಿ ಸ್ವಜಾತಿ
ಹುಣಸೂರಿನ ಹರಿಮುಖ ನಾಗಪ್ಪನವರಿಗೆ ಅಡ್ಡಬಿದ್ದು
ಳ್ಳೇಗಾಲದ ಉಪವಿಭಾಗಾಧಿಕಾರಿಯಾಗಿ 2005
ಕಾಲಿಟ್ಟಿದ್ದ. ಹಾಗೆ ಬಂದವನೇ ತನ್ನ ಕಚೇರಿ

ಟೇಬಲನ್ನೇ ಡೈನಿಂಗ್ ಟೇಬಲ್ ಮಾಡಿಕೊಂಡು ಮೂರು ಹೊತ್ತು ಅಚ್ಚುಕಟ್ಟಾಗಿ ಲಂಚ ಭೋಜನ ಉಣ್ಣತೊಡಗಿದ್ದ. ಕೊನೆಗೆ ಅದೇ ಈಗ ಅವನ ಪಾಲಿನ ವಿಷವಾಗಿದೆ.

ಕೊಳ್ಳೇಗಾಲ ತಾಲ್ಲೂಕಿನ ಅರೇಪಾಳ್ಯದ ಸರ್ವೆ ನಂಬರ್ 69 ಬಯಲ್ಲಿ ಗಿರಿಸಿದ್ದ ಶೆಟ್ಟಿ ಎಂಬುವನಿಗೆ ಸರ್ಕಾರ 1999 ರಲ್ಲಿ ಅಕ್ರಮ ಸಕ್ರಮ ಯೋಜನೆಯಡಿ 2.12 ಎಕರೆ ಭೂಮಿ ಮಂಜೂರು ಮಾಡಿತ್ತು. ಇಂಥ ಜಮೀನನ್ನು 15 ವರ್ಷ ಕಾಲ ಪರಭಾರೆ ಮಾಡುವಂತಿಲ್ಲವಾದರೂ ಗಿರಿಸಿದ್ದ ಅದನ್ನು ಆಂಧ್ರದ ಧರೇಶ್ ಬಾಬುಗೆ ಮಾರಿಕೊಂಡಿದ್ದ. ಕಂದಾಯ ಇಲಾಖೆಯ ಸಿಬ್ಬಂದಿ ಈ ಮಾರಾಟ ಅಸಿಂಧು ಎಂದು ಖಾತೆ ಮಾಡಿಕೊಡಲು ನಿರಾಕರಿಸಿದಾಗ ಇದೇ ಶಂಕರಪ್ಪ ಲಂಚ ಕಿತ್ತುಕೊಂಡು ಧರೇಶನಿಗೆ ಅಕ್ರಮ ಖಾತೆ ಮಾಡಿಕೊಟ್ಟಿದ್ದ. ಕೊಳ್ಳೇಗಾಲ ಸುತ್ತಮುತ್ತ ಈಗ ಆಂಧ್ರದ ಸಾಹುಕಾರರು ದೊಡ್ಡ ಪ್ರಮಾಣದಲ್ಲಿ ಜಮೀನು ಖರೀದಿಸುತ್ತಿದ್ದಾರೆ. ಬಹುತೇಕ ಅಕ್ರಮ ಖರೀದಿಗಳಾಗಿದ್ದು ಶಂಕರಪ್ಪನೇ ಖುದ್ದು ನಿಂತು ಅಂತವರಿಗೆಲ್ಲಾ ದಾಖಲೆ ಮಾಡಿಸಿಕೊಡುತ್ತಿದ್ದ. ಕುಂತೂರಿನ ಪ್ರಭುಲಿಂಗೇಶ್ವರ ಬೆಟ್ಟದ ತಪ್ಪಲಿನಲ್ಲಿರುವ ಸರ್ವೆ ನಂಬರ್ 154 ರಲ್ಲಿ ಸರ್ಕಾರಿ ಗೋಮಾಳದ 250 ಎಕರೆ ಜಮೀನನ್ನು ನಾಗಾರ್ಜುನ ಸಕ್ಕರೆ ಕಾರ್ಖಾನೆ ಮಾಲೀಕರಿಗೆ ವರ್ಗಾಯಿಸಿ ಲಕ್ಷಾಂತರ ರೂಪಾಯಿ ಲಂಚ ತಿಂದಿದ್ದಾನೆ. ಈ ವಿಚಾರವಾಗಿ ರೈತ ಮುಖಂಡ ಪುಟ್ಟರಾಜೇ ಅರಸ್ ಒಂದು ಹೋರಾಟವನ್ನೇ ನಡೆಸುತ್ತಿದ್ದಾರೆ.

ಇತ್ತೀಚೆಗೆ ನಿಸಾರ್ ಖಾನ್ ಎಂಬುವರು ಕಣ್ಣೂರಿನಲ್ಲಿ 4 ಎಕರೆ ಜಮೀನು ಖರೀದಿಸಿ ಖಾತೆಗಾಗಿ ಶಂಕರಪ್ಪನ ಹತ್ತಿರ ಹೋದಾಗ ಬರೋಬ್ಬರಿ 1 ಲಕ್ಷ ಲಂಚ ಕೇಳಿ ಕೊನೆಗೆ 10 ಸಾವಿರಕ್ಕೆ ವ್ಯವಹಾರ ಕುದುರಿಸಿ ಹಣ ತೆಗೆದುಕೊಳ್ಳುತ್ತಿದ್ದಾಗ ಮೈಸೂರಿನ ಲೋಕಾಯುಕ್ತ ಈಶ್ವರ ಚಂದ್ರ ವಿದ್ಯಾಸಾಗರ್‌ಗೆ ಸಿಕ್ಕಿಬಿದ್ದಿದ್ದಾನೆ.

ಈ ಘಡವ ಇನ್ನೇನು ಪ್ರಮೋಷನ್ ಪಡೆದು ಸ್ಪೆಷಲ್ ಡಿಸಿಯಾಗಿ ಹೋಗಲು ರೆಡಿಯಾಗಿದ್ದ.

ಮಾತೆತ್ತಿದರೆ ಬಸವಣ್ಣನ ವಚನ ಹೇಳುತ್ತಿದ್ದನಾದರೂ ಇವನ ಲಂಚ ದಾಸೋಹ ಜಬರ್‌ದಸ್ತಾಗೆ ನಡೆಯುತ್ತಿತ್ತು. ಇವನೆಂಥ ಕಿಲಾಡಿಯೆಂದರೆ ಇತ್ತೀಚೆಗೆ ಮುಖ್ಯಮಂತ್ರಿ ಕುಮಾರಸ್ವಾಮಿ ಚಾಮರಾಜನಗರಕ್ಕೆ ಭೇಟಿ ಕೊಟ್ಟು ಬಂದರಲ್ಲ, ಆವಾಗಲೂ ತನ್ನ ಕೈಕೆಳಗಿನ ತಹಶೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು, ವಿಲೇಜ್ ಅಕೌಂಟೆಂಟ್‌ಗಳಿಂದೆಲ್ಲಾ "ಸಿಎಂ ಪ್ರೋಗ್ರಾಮಿದೆ, ಖರ್ಚಿಗೆ ಹಣ ಕೊಡಿ" ಎಂದು ಮೂರು ಲಕ್ಷದವರೆಗೂ ಹಣ ಎತ್ತಿ ಜೇಬಿಗೆ ಬಿಟ್ಟುಕೊಂಡಿದ್ದ.

ಲೋಕಾಯುಕ್ತರು ಕೇವಲ ಲಂಚ ಪ್ರಕರಣವನ್ನಷ್ಟೇ ಅಲ್ಲದೆ ಶಂಕರಪ್ಪನ ಆಸ್ತಿ-ಪಾಸ್ತಿಗಳ ಬಗ್ಗೆಯೂ ಕೂಲಂಕುಷ ತನಿಖೆ ಮಾಡಲಿ. ಶಂಕರಪ್ಪನಿಗೆ ಬೆಂಗಳೂರಿನ [illegible] ಆಸೆ. ಹಿಂಭಾಗದಲ್ಲಿ ಒಂದು ಕೋಟಿ ಬೆಲೆಬಾಳುವ ಬಂಗಲೆ ಇದೆ

ಈ ಚಿರತೆಗಳನ್ನು ಅವುಗಳ ಸ್ವಾಭಾವಿಕ ನೆಲೆಗಳಲ್ಲಿ ಸಹಜ ಪರಿಸ್ಥಿತಿಯಲ್ಲಿ ಕಂಡಿಲ್ಲದ ಹೊರತು ಅವುಗಳ ಧೀಮಂತಿಕೆಯಾಗಲಿ, ಶರೀರ, ವರ್ಣ ವಿನ್ಯಾಸದ ಅನನ್ಯತೆಗಳನ್ನಾಗಲಿ ಊಹಿಸುವುದು ಸಾಧ್ಯವಿಲ್ಲ. ಇವು ಸ್ನಾಯು ಸಾಮರ್ಥ್ಯಗಳಲ್ಲಾಗಲಿ, ಧೈರ್ಯ ಸಾಹಸಗಳಲ್ಲಾಗಲಿ 'ಯಾವುದಕ್ಕೂ ಎರಡನೆಯವಲ್ಲ. ಆದರೂ ಈ ದೇಶದ ಅನೇಕ ಕಡೆ ಇವಕ್ಕೆ ಉಪದ್ರವಕಾರಿಗಳು ಎಂಬ ಕೆಟ್ಟ ಹೆಸರಿದೆ. ನನ್ನ ಮುಂದಿದ್ದ ಚಿರತೆಯಂತೂ ಈ ಎಲ್ಲಾ ಅಪಾದನೆಗಳನ್ನು ಧಿಕ್ಕರಿಸಿ ನಿಂತ ಮಾದರಿಯಂತೆ ಕಾಣುತ್ತಿತ್ತು. ದುರದೃಷ್ಟವಶಾತ್ ಇದರ ಜೀವ ಈಗಾಗಲೇ ಮುಟ್ಟುಗೋಲಿಗೊಳಗಾಗಿತ್ತು. ದನಗಳನ್ನು ಹಿಡಿದು ತಿಂದ ತಪ್ಪಿಗೆ ಅದು ತಲೆದಂಡ ತೆರಲೇಬೇಕಾಗಿತ್ತು.



ದಂಡ ತೆತ್ತ ಚಿರತೆ

ನಾನು ನಡೆದಿದ್ದ ಕಣಿವೆಯ ಭಾಗ ರಾಸ್ಬೆರಿ ಪೊದೆಗಳಿಂದ ದಟ್ಟೈಸಿದ್ದು ನಡುನಡುವೆ ಬೃಹದಾಕಾರದ ಬಂಡೆಗುಂಡುಗಳೂ ಸೇರಿ ಅಮಾನುಷವಾಗಿ ಗಿಡಿದುಕೊಂಡಿತ್ತು. ಗಾಳಿ ಬೇರೆ ಕಣಿವೆಯ ದಿಕ್ಕಿನ ಕಡೆಗೇ ಬೀಸುತ್ತಿತ್ತು. ನಾನು ಮರದ ದಿಕ್ಕಿಗೆ ಇಳಿದು ನೋಡಿದಾಗ ಬಯಲು ನಾನು ಅಂದುಕೊಂಡಿದ್ದಕ್ಕಿಂತ ವಿಶಾಲವಾಗಿತ್ತು. ಹಸು ಮರದಿಂದ ನನ್ನ ಅಂದಾಜಿಗಿಂತ ಹೆಚ್ಚು ದೂರದಲ್ಲಿದ್ದುದು ತಿಳಿಯಿತು. ಅಲ್ಲಿನ ಒಟ್ಟೂ ಪರಿಸ್ಥಿತಿಯಲ್ಲಿ ನನಗೆ ಹಸುವಿನ ಕಾಲುಭಾಗ ಮಾತ್ರ ಕಾಣುತ್ತಿತ್ತು. ಇಲ್ಲಿ ನನ್ನ ಮುಂದಿದ್ದ ಸಾಧ್ಯತೆಗಳು ಎರಡೇ: ನಾನು ಹಸುವಿನ ಪಕ್ಕದಲ್ಲಿದ್ದ ಪೊದೆಗಳ ನಡುವೆ ತೂರಿ ಮುಂದೆ ಹೋಗಿ ಬಯಲಿಗೆ ಅಡ್ಡಡ್ಡವಾಗಿ ಬೆಳೆದಿದ್ದ ಇನ್ನೊಂದು ಕೋನದಲ್ಲಿದ್ದ ಪೊದೆಗಳ ನಡುವೆ ಅಡಗಿ ಕೂರುವುದು. ಇಲ್ಲವೇ, ಈ ರಣಹದ್ದುಗಳೊಂದಿಗೆ ಮರವನ್ನು ಹಂಚಿಕೊಳ್ಳುವುದು. ಪೊದೆಗಳ ನಡುವೆ ತೂರಿ ಹೋಗುವ ದುಸ್ಸಾಹಸಕ್ಕಿಂತ ನನಗೆ ಮರ ಏರುವುದೇ ಹೆಚ್ಚು ಜೀವ ರಕ್ಷಕವಾಗಿ ಕಂಡಿತು.

ಮರದ ಮೇಲಕ್ಕೆ ಹತ್ತುವುದಾದರೆ ಹಸುವಿನಿಂದ ನನಗಿದ್ದ ದೂರ ನನ್ನ ಬಂದೂಕದಿಂದ ನಿಭಾಯಿಸುವಷ್ಟಿತ್ತು. ಮರ ಹತ್ತಲು ಮುಂದಾದೆ, ತಕ್ಷಣ ಹೊಳೆಯಿತು: ಆಕಸ್ಮಿಕ ಅವೇನಾದರೂ ನನ್ನ ಇರುವನ್ನು ಕಂಡರೆ ಹಾರಿ ಹೋಗುತ್ತವೆ. ಅವು ಹಾರಿದ ವೈಖರಿಯಲ್ಲೇ ಅವು ಏನನ್ನು ಕಂಡು ಹಾರಿಹೋಗಿವೆ ಎಂದು ಊಹಿಸುವುದು ಮಾಂಸಾಹಾರಿ ಪ್ರಾಣಿಗಳಿಗೆ ರಕ್ತಗತವಾದ ವಿದ್ಯೆ. ಈ ಹದ್ದಿನ ಕಣ್ಣು ತಪ್ಪಿಸಿ ಹತ್ತುವುದು ಅಸಾಧ್ಯವಾದದ್ದು ಎನಿಸಿತು. ಅಷ್ಟರಲ್ಲಿ ಒಂದು ಸಂಗತಿ ನನ್ನ ಗಮನಕ್ಕೆ ಬಂತು. ಮರದ ಮೇಲೆ ಈಗಾಗಲೇ ಸುಮಾರು ಇಪ್ಪತ್ತು ಹದ್ದುಗಳು ಸರತಿಸಾಲಿನಲ್ಲಿ ಕುಳಿತಿದ್ದವು. ಇವುಗಳ ಜೊತೆಗೆ ಹೊಸ ಹೊಸ ಹದ್ದುಗಳ ಆಗಮನ-ಸೇರ್ಪಡೆ-ನಿರ್ಗಮನಗಳೂ ನಡೆಯುತ್ತಿದ್ದವು. ನಿರ್ಗಮಿಸಿದ ಹದ್ದುಗಳು ಆಕಾಶದಲ್ಲಿ ಗಸ್ತು ಆರಂಭಿಸಿದರೆ, ಆಗಮಿಸಿದ ಹದ್ದುಗಳು ಕುಳಿತಿದ್ದ ಹದ್ದುಗಳೊಂದಿಗೆ ಕೂರುವ ಜಾಗಕ್ಕಾಗಿ ಕಿತ್ತಾಡುತ್ತಿದ್ದವು. ಅಲ್ಲಿದ್ದ ಸ್ಥಳ ಹೆಚ್ಚು ಹದ್ದುಗಳು ಕೂರಲು ಪ್ರಶಸ್ತವಾಗಿರಲಿಲ್ಲ. ಈಗಾಗಲೇ ಅಲ್ಲಿ ಇಪ್ಪತ್ತಕ್ಕೂ ಹೆಚ್ಚು ಹದ್ದುಗಳು ತುಂಬಿಕೊಂಡಿದ್ದವು. ಹಾಗಾಗಿ ಅವುಗಳ ನಡುವೆ ಜಾಗಕ್ಕಾಗಿ ಕಿತ್ತಾಟ ನಡೆಯುತ್ತಿತ್ತು. ಆಗ ಹೆಚ್ಚು ಕಡಿಮೆ ನಾಯಿಗಳಂತೆಯೇ ಕಿತ್ತಾಡುವಾಗ ವಿಪರೀತ ಗದ್ದಲವೇಳುತ್ತಿತ್ತು. ನಾನು ಈ ಸಮಯವನ್ನು ಆರಿಸಿಕೊಂಡು ಅವು ಕಿತ್ತಾಟದಲ್ಲಿ ತಲ್ಲೀನವಾಗಿದ್ದಾಗ, ನಿಶ್ಶಬ್ದವಾಗಿ ಕಳೇಬರ ಸ್ಪಷ್ಟವಾಗಿ ಕಾಣುವಷ್ಟು ಎತ್ತರಕ್ಕೇರಿ ಒಂದು ಕೊಂಬೆಯ ಮೇಲೆ ಆಶ್ರಯ ಪಡೆದೆ. ಇದೊಂದು ಅತಂತ್ರವಾದ ಜಾಗವಾಗಿತ್ತು. ಆಕಸ್ಮಿಕ ಕಾಲುಜಾರಿದರೆ ಇಲ್ಲಿಂದ ನೂರಾರು ಅಡಿ ಆಳದ ಕಮರಿಯ ತಳದಲ್ಲಿದ್ದ ಚೂಪುಕಲ್ಲುಗಳ ಮೇಲೆ ಬಿದ್ದು ರಣಹದ್ದುಗಳಿಗೆ ಪುಷ್ಕಳ ಭೋಜನವಾಗುತ್ತಿದ್ದೆ.


ಈಗ ನಾನು ನಿಂತ ಜಾಗದಿಂದ ಕಳೇಬರ ಸಂಪೂರ್ಣವಾಗಿ ಕಾಣುತ್ತಿತ್ತು. ಕೆಲವು ಕೇಜಿಗಳಷ್ಟು ಮಾಂಸವನ್ನು ಮಾತ್ರ ಕಿತ್ತು ತಿನ್ನಲಾಗಿತ್ತು. ನಾನು ಸ್ವಲ್ಪ ಹೊತ್ತು ಹೊಂದಿಕೊಳ್ಳಲು ಪರದಾಡಿದೆ. ನನ್ನಂತೆ ರಣಹದ್ದುಗಳು ವಿಚಿತ್ರ ಸಂದಿಗ್ದದಲ್ಲಿ ಕುಳಿತಿದ್ದವು. ಆಕಾಶದಲ್ಲಿ ಗಸ್ತು ಹೊಡೆಯುತ್ತಿದ್ದ ಎರಡು ರಣಹದ್ದುಗಳಿಂದ ಅವುಗಳಿಗೆ ಸ್ಪಷ್ಟವಾದ ಮಾಹಿತಿ ಸಿಗುತ್ತಿಲ್ಲ. ಅಲ್ಲಿಂದ ಸೂಚನೆ ಬರುವವರೆಗೂ ಇವುಗಳು ಕಳೇಬರದತ್ತ ಹೋಗುವುದಿಲ್ಲ. ಹೀಗೆ ನಿಮಿಷಗಳು ನಿಧಾನವಾಗಿ ಕಳೆಯುತ್ತಿದ್ದವು. ಸ್ವಲ್ಪ ಹೊತ್ತಿನ ನಂತರ ಮೇಲೆ ಹಾರುತ್ತಿದ್ದ ರಣಹದ್ದುಗಳು ಗಾಬರಿಯಿಂದೆಂಬಂತೆ ದೂರಕ್ಕೆ ಹಾರಿದವು. ತಕ್ಷಣ ನಾನು ಕೆಳಕ್ಕೆ ನೋಡಿದೆ. ಅದೇ ಹೊತ್ತಿಗೆ ಕಳೇಬರದ ಪಕ್ಕದ ಪೊದೆಯಿಂದ ಬಲಿಷ್ಠವಾದ ಗಂಡು ಚಿರತೆಯೊಂದು ಸ್ವಲ್ಪ ಹಿಂಜರಿಯುತ್ತ ಹೊರಬಂತು.

ಈ ಚಿರತೆಗಳನ್ನು ಅವುಗಳ ಸ್ವಾಭಾವಿಕ ನೆಲೆಗಳಲ್ಲಿ ಸಹಜ ಪರಿಸ್ಥಿತಿಯಲ್ಲಿ ಕಂಡಿಲ್ಲದ ಹೊರತು ಅವುಗಳ ಧೀಮಂತಿಕೆಯಾಗಲಿ, ಶರೀರ, ವರ್ಣ ವಿನ್ಯಾಸದ ಅನನ್ಯತೆಗಳನ್ನಾಗಲಿ ಊಹಿಸುವುದು ಸಾಧ್ಯವಿಲ್ಲ. ಭಾರತದ ಕಾಡುಗಳ ಜೀವ ಸಂಕುಲದಲ್ಲೇ ಆಭರಣಗಳಂತೆ ಹೊಳೆಯುವ ಇವುಗಳ ಸೌಂದರ್ಯಕ್ಕೆ ಇವುಗಳು ಮಾಂಸವನ್ನು ಕಿತ್ತು ತಿನ್ನುವ ಆತುರತೆಯ ಕಾರಣದಿಂದ ಕುಂದೇನು ಬರುವುದಿಲ್ಲ. ಇವು ಸ್ನಾಯು ಸಾಮರ್ಥ್ಯಗಳಲ್ಲಾಗಲಿ, ಧೈರ್ಯ ಸಾಹಸಗಳಲ್ಲಾಗಲಿ ಯಾವುದಕ್ಕೂ ಎರಡನೆಯವಲ್ಲ. ಆದರೂ ಈ ದೇಶದ ಅನೇಕ ಕಡೆ ಇವಕ್ಕೆ ಉಪದ್ರವಕಾರಿಗಳು ಎಂಬ ಕೆಟ್ಟ ಹೆಸರಿದೆ. ಇವುಗಳ ಅನನ್ಯತೆಯ ಬಗ್ಗೆ ತಿಳಿವಳಿಕೆಯಿಲ್ಲದವರಿಗೆ ಚಿರತೆಗಳು ಅರೆಹೊಟ್ಟೆ ತಿಂದ ಬಡಕಲುಗಳಾಗಿಯೂ, ಚರ್ಮರೋಗ ತಗುಲಿದ, ಕೊಳಕಾದ ಶಾಶ್ವತ ಹಿಂಸಾವಾದಿಗಳಂತೆ ಕಾಣುತ್ತವೆ. ಮುಖ್ಯವಾಗಿ ತಮ್ಮ ಶಿಕಾರಿಯನ್ನು ತಿನ್ನುವ ಹೊತ್ತಿನಲ್ಲಿ.

ನನ್ನ ಮುಂದಿದ್ದ ಚಿರತೆಯಂತೂ ಈ ಎಲ್ಲಾ ಅಪಾದನೆಗಳನ್ನು ಧಿಕ್ಕರಿಸಿ ನಿಂತ ಮಾದರಿಯಂತೆ ಕಾಣುತ್ತಿತ್ತು. ದುರದೃಷ್ಟವಶಾತ್ ಇದರ ಜೀವ ಈಗಾಗಲೆ ಮುಟ್ಟುಗೋಲಿಗೊಳಗಾಗಿತ್ತು. ದನಗಳನ್ನು ಹಿಡಿದು ತಿಂದ ತಪ್ಪಿಗೆ ಅದು ತಲೆದಂಡ ತೆರಲೇಬೇಕಾಗಿತ್ತು. ಸುತ್ತಮುತ್ತಲ ಹಳ್ಳಿಯ ಜನರ ಒತ್ತಡಕ್ಕೆ ನಾನು ಬದ್ಧನಾಗಿಬಿಟ್ಟಿದ್ದೆ. ಕಳೆದಬಾರಿಯೇ ಇದನ್ನು ಕೊನೆಗಾಣಿಸಬೇಕಿತ್ತು ಆದರೆ ನರಭಕ್ಷಕಿ ಒಬ್ಬ ಹರೆಯದ ತಾಯಿಯನ್ನು ಹಿಡಿದು ಇದನ್ನು ಉಳಿಸಿತ್ತು. ಅಲ್ಲಿಂದ ಬಚಾವಾದ ಈ ಚಿರತೆಯು ಜನರನ್ನು ಸದರ ಮಾಡಿಕೊಂಡು ಹೆಚ್ಚು ಅವಾಂತರಕಾರಿಯಾಗಿಬಿಟ್ಟಿತ್ತು. ಈಗ ನಾನು ಇದನ್ನು ಕೊಲ್ಲದೆ ಹೋದರೆ ಹಳ್ಳಿಗರಿಗೆ ನಾನು ಚಿರತೆಗಿಂತ ದೊಡ್ಡ ಶತ್ರುವಾಗಿಬಿಡುತ್ತಿದ್ದೆ. ಕುದುರೆ ಎಳೆದೆ. ಬಹುಶಃ ತನ್ನನ್ನು ಪರಂಧಾಮಕ್ಕಟ್ಟಿದ ಗುಂಡಿನ ಸದ್ದು ಅದಕ್ಕೆ ಕೇಳಿಸಿತೋ ಇಲ್ಲವೋ ಅಷ್ಟರಲ್ಲಿ ಅದು ದಿವಂಗತವಾಗಿತ್ತು.

ಅನೇಕ ದುರಂತಗಳು ಏಕತ್ರವಾಗಿ ಒಂದೇ ಜೀವಿಯನ್ನು ಬೆನ್ನತ್ತಿದಾಗ ಅದಕ್ಕೆ ಮಾನವರ ಮಿತಿಯಲ್ಲಿ ಕಾರಣಗಳನ್ನು ಹುಡುಕುವುದು ಕಷ್ಟ. ಈ ಏಕತ್ರ ದಾಳಿಗೆ ಯಾರು ಬೇಕಾದರೂ ಬಲಿಯಾಗಬಹುದು ಒಂದು ನಾಯಿ, ಒಬ್ಬ ಮನುಷ್ಯ ಅಥವಾ ಒಂದು ಕುಟುಂಬವೇ ಈಡಾಗಬಹುದು. ಉದಾಹರಣೆಗೆ ಈ ಚಿರತೆಯ ಮುಂದೆ ಸತ್ತು ಬಿದ್ದಿದೆಯಲ್ಲ ಆ ಹಸುವಿನ ಮಾಲೀಕನನ್ನೇ ತೆಗೆದುಕೊಳ್ಳಿ. ಇವನೊಬ್ಬ ಎಂಟು ವರ್ಷದ ಹುಡುಗ ಹಾಗೂ ತನ್ನ ಕುಟುಂಬದಲ್ಲಿ ಉಳಿದುಕೊಂಡಿರುವ ಏಕೈಕ ಸದಸ್ಯ. ಇಲ್ಲಿಗೆ ಎರಡು ವರ್ಷಗಳ ಹಿಂದೆ ಇವನ ತಾಯಿ ಹುಲ್ಲು ತರಲು ಹೋಗಿದ್ದಾಗ ಇದೇ ನರಭಕ್ಷಕಿ ಅವಳನ್ನು ಕೊಂದು ತಿಂದಿತ್ತು. ಮತಿಭ್ರಾಂತನಾದ ಈಕೆಯ ಗಂಡ ವರ್ಷ ತುಂಬುವುದರೊಳಗೆ ಸ್ವರ್ಗಸ್ಥನಾದ. ಮನೆಯಲ್ಲಿದ್ದ ನಾಲ್ಕು ಕುಡಿಕೆ ಮಡಿಕೆಗಳು ಇವನ ಸಾಲಕ್ಕೆ ಮುಟ್ಟುಗೋಲಾಗಿ ಮನೆ ದಿವಾಳಿ ಎದ್ದಿತು. ಉಳಿದದ್ದು ಈ ಹುಡುಗ ಹಾಗೂ ಈ ಬಿಳಿ ಹಸು. ಇದನ್ನು ಆಧರಿಸಿ ಹುಡುಗ ಕಾಲಾಯಾಪನೆ ಮಾಡುತ್ತಿದ್ದ. ಈಗ ಚಿರತೆ ಇವನ ಹಸುವನ್ನೇ ಹಿಡಿದಿದೆ! ಮುನ್ನೂರು ನಾನೂರು ದನಗಳಿದ್ದ ಮಂದೆಯಲ್ಲಿ ಚಿರತೆ ಇವನ ಬಿಳಿ ಹಸುವನ್ನೇ ಆರಿಸಿಕೊಂಡಿದ್ದೇಕೆ? (ಕಾಲದ ಈ ಅಮಾನುಷ ಅಟ್ಟಹಾಸವನ್ನು ರಿಪೇರಿ ಮಾಡಲು ಪ್ರಯತ್ನಿಸಿದ ನಾನು ನಿಜಕ್ಕೂ ಚಕಿತನಾದೆ. ಅವನ ಬಿಳಿ ಹಸುವಿನ ಬದಲಿಗೆ ಕೆಂದ ಹಸುವನ್ನು ಕೊಡಿಸಿದೆ. ಆದರೆ ಆ ಹುಡುಗ ಅದನ್ನು ಬಿಳಿ ಹಸುವಿನಂತೆ ತನ್ನ ಬದುಕಿನ ಭಾಗವೆಂದು ಸ್ವೀಕರಿಸಲೇ ಇಲ್ಲ.)

ನಾನು ದಲ್ಲಾನಿಯ ಬಿಡುವಾಗ ಒಬ್ಬರ ಸುಪರ್ದಿಗೆ ಒಪ್ಪಿಸಿ ಹೋಗಿದ್ದ ನಮ್ಮ ಎಳೆಯ ಕೋಣಗಳು ಸುಸ್ಥಿತಿಯಲ್ಲಿದ್ದವು. ನಾನು ಮರು ದಿನವೇ ಇವನ್ನು ಕಟ್ಟಿ ಹುಲಿಯನ್ನು ಆಕರ್ಷಿಸುವ ಪ್ರಯತ್ನವನ್ನು ಆರಂಭಿಸಿದೆ. ಈ ಬಾರಿ ನನ್ನ ಕೋಣಗಳು ಆ ಮಹಾತಾಯಿಗೆ ಇಷ್ಟವಾಗುತ್ತದೆ, ಅದು ಇವನ್ನು ಕೊಲ್ಲುತ್ತದೆ ಎಂದು ಆಶಿಸಿದ್ದೆ.



ಜಿಮ್ ಕಾರ್ಬೆಟ್‌ನ ಚಾವಟ್ ನ ನರಭಕ್ಷಕಗಳು 8

■ಕನ್ನಡ ರೂಪಾಂತರ: ಡಾ. ಟಿ.ಎಸ್.ವಿವೇಕಾನಂದ

ಇಲ್ಲಿಂದ ಐದು ಮೈಲಿಗಳ ದೂರದ ನಾಂದೋ
ಕಣಿವೆಯ ಇಳಿಜಾರಿನಲ್ಲಿ ಸಾವಿರಾರು ಅಡಿ ಎತ್ತರ
ಚಿಮ್ಮಿನಿಂತ ಕೋಡುಗಲ್ಲೊಂದು ತಾನೇ ಒಂದು ಪ
ತವೇನೋ ಎಂಬಂತೆ ಹಾಸಿ ಬಿದ್ದಿತ್ತು. ಸುತ್ತಲೂ ದಟ್ಟವಾ
ಕಾಡು ಗಿಡಿದುಕೊಂಡಿದ್ದ ಈ ಬಂಡೆಯ ಬುಡದ
ಒಂದು ಹಳ್ಳಿಯಿತ್ತು. ಕಳೆದ ಕೆಲವು ತಿಂಗಳುಗಳಲ್ಲಿ ನರಭ
ಈ ಹಳ್ಳಿಗಳ ಸುತ್ತಮುತ್ತಲೇ ರಿಕಾಣಿ ಹೂಡಿ ನಾ
ಜನರನ್ನು ತಿಂದು ತೇಗಿತ್ತು. ನಾನು ಚಿರತೆಯನ್ನು ಕೊಂ
ಹಿಂತಿರುಗುವ ಹೊತ್ತಿಗೆ ಈ ಹಳ್ಳಿಯ ಜನರಿಂದ ನ
ವರ್ಗಾವಣೆಯ ಆದೇಶ ಬಂದಿತ್ತು. ಈ ಹಳ್ಳಿಯ ಜ
'ಸದ್ಯಕ್ಕೆ ಹುಲಿ ನಮ್ಮ ಹಳ್ಳಿಯ ಸರಹದ್ದಿನಲ್ಲಿರುವುದರಿಂ
ನೀವು ಈ ದಲ್ಲಾನಿಯಾದ ಬದಲು ನಮ್ಮ ಹಳ್ಳಿ
ಬಂದು ಬಿಡಾರ ಹೂಡಬೇಕು, ಅದಕ್ಕೆ ಅಗತ್ಯವಾ
ಜಾಗವನ್ನು ಈಗಾಗಲೇ ನಾವು ಹುಡುಕಿಟ್ಟಿದ್ದೇವೆ' ಎಂದ
ಹೇಳಿದರು. ಹಾಗೇ ಹುಲಿ ಕೋಡುಗಲ್ಲಿನ ಮೇ
ಆಗಾಗ್ಗೆ ಕಾಣಿಸಿಕೊಳ್ಳುತ್ತಿದೆ ಎಂದೂ, ಅದನ್ನು ತಾವೆಲ್ಲರ
ನೋಡಿದ್ದೇವೆಂದೂ, ಆ ಕೋಡುಗಲ್ಲಿನ ಪಕ್ಕದ ಕಮರಿಯ
ಅನೇಕ ಗುಹೆಗಳಿವೆಯೆಂದೂ ಇಂತಹ ಯಾವುದೋ
ಒಂದು ಗುಹೆಯಲ್ಲಿ ಅದು ವಾಸಮಾಡುತ್ತಿರಬೇಕೆಂದ
ಹೇಳಿದರು. ಅಂದು ಬೆಳಿಗ್ಗೆ ಕೆಲವು ಹೆಂಗಸರು ಹು
ಕೊಯ್ಯುತ್ತಿದ್ದಾಗ ಹುಲಿಯನ್ನು ನೋಡಿದ್ದರಂತೆ, ಹೀಗಾ
ಅದು ಮತ್ತೆ ನರಬಲಿಗೆ ಹೊಂಚು ಹಾಕುತ್ತಿದೆ ಎಂದ
ಖಾತರಿಯಾಗಿ ಇಡೀ ಹಳ್ಳಿ ಭಯಗ್ರಸ್ತವಾಗಿ ಕುಳಿತಿ
ಯಾರೂ ಮನೆಯಿಂದ ಹೊರಬರುವ ಸಾಹ
ಮಾಡುತ್ತಿರಲಿಲ್ಲ. ಇದರಿಂದಾಗಿ ಇಡೀ ಹಳ್ಳಿಯ ಬದು
ಹೇಗೆ ಸ್ತಬ್ಧವಾಗಿದೆ ಎಂದು ವಿವರಿಸಿದರು.

ನಾನು ಅವರ ಮನವಿಯನ್ನು ಒಪ್ಪಿಕೊಂಡೆ. ನಾ
ಅಲ್ಲಿಗೆ ಬಂದು ನನ್ನ ಕೈಲಾದ ಸಹಾಯ ಮಾಡುತ್ತೇನೆಂದ
ಮಾತುಕೊಟ್ಟೆ. ಕೊಟ್ಟ ಮಾತಿನಂತೆ ಮರುದಿ
ಮುಂಜಾನೆಯೇ ಎದ್ದು ಆ ಹಳ್ಳಿಯತ್ತ ಹೊರಟ
ಕೋಡುಗಲ್ಲಿನ ಪೂರ್ಣ ದೃಶ್ಯ ಸಿಗುವ ಆಯಕಟ್ಟ
ಜಾಗದಲ್ಲಿ ನಿಂತು ಬೈನಾಕ್ಯುಲರ್‌ನಿಂದ ಗಂಟೆಗಟ್ಟ
ವೀಕ್ಷಿಸಿದೆ. ಆ ಬಂಡೆ ಮತ್ತು ಸುತ್ತಮುತ್ತಲ ಪರಿಸ
ನನ್ನಲ್ಲಿ ಭಯ ಹುಟ್ಟಿಸಿತೇ ವಿನಃ ಹುಲಿ ಕಾಣಲಿ
ಎಚ್ಚರಿಕೆಯಿಂದ ಕಣಿವೆ ಇಳಿದು ಅಡ್ಡಬಂದ ಕೊರಕಲ
ಗಳನ್ನು ದಾಟಿ ಮತ್ತೆ ಕಣಿವೆಯನ್ನು ಹತ್ತಿ ಹಳ್ಳಿಯ
ಹೊರಟೆ. ಇದು ನಾನು ಓಡಾಡಿದ್ದ ದಾರಿಗಳಲ್ಲೇ ಹೆ
ಹಿಂಸಾಜನಕವಾದದ್ದು ಎಂದು ಮಾತ್ರ ಹೇಳಬ
ಚತುಷ್ಪಾದಿಯಾಗಿ ಸಾಗುವುದಲ್ಲದೆ ಬೇರೊಂದು ರೀ
ಸಾಧ್ಯವಿಲ್ಲದ, ಒಂದು ಕ್ಷಣ ಎಡವಟ್ಟಾದರು ಬಿದ್ದ ರಭಸ
ಕುತ್ತಿಗೆಯೇ ಮೊದಲಾಗಿ ದೇಹದ ಅಂಗಾಂಗಗಳೆ
ನುಚ್ಚುನೂರಾಗಿ ದಾರುಣ ಸಾವನ್ನು ಆಹ್ವಾನಿಸುವಂತ
ದಾರಿಯಲ್ಲಿ ನನ್ನನ್ನು ನಾನು ರಕ್ಷಿಸಿಕೊಳ್ಳುವುದೇ ಯ
ಸಾಹಸವಾಗಿತ್ತು. ಹೀಗೆನ್ನುವುದಕ್ಕಿಂತ ಬದುಕಿ ಹಿಂತಿರುಗ
ವುದು ಅಗೋಚರ ಶಕ್ತಿಯ ಕೃಪೆಯಾಗಿತ್ತು.

ನಡುದಿನದ ಎರಡು ಗಂಟೆಯ ಹೊತ್ತಿಗೆ
ಭಾಗವನ್ನು ಸಂಪೂರ್ಣವಾಗಿ ಸರ್ವೇ ಮಾಡಿದೆ. ಅಲ್ಲಿ
ಒಂದೊಂದು ಕೋಡುಗಲ್ಲು, ಕಣಿವೆ, ಕಂದರ ಪೊದೆಗಳ
ತಡಕಾಡಿದೆ. ನಾನು ಮತ್ತೆ ಇದನ್ನು ನೋಡುವುದು ಅಗತ್ಯವಿ
ಎಂದನಿಸುವವರೆಗೂ ಇಂಚಿಂಚಾಗಿ ಹುಡುಕಾಡಿದೆ. ನನ
ಏನೊಂದೂ ಕಾಣಲಿಲ್ಲ. ಹೊಟ್ಟೆ ಬೇರೆ ಹಸಿಯುತ್ತಿತ
ತಿಂಡಿ ತಿಂದು ಹಿಂತಿರುಗುವ ಆಶಯದೊಂದಿಗೆ ದಲ್ಲಾ
ಯಾದ ಕ್ಯಾಂಪಿನತ್ತ ಹೊರಟೆ. ಕೊರಕಲನ್ನು ಏರು
ಮುನ್ನ ಕೊನೆಯ ಬಾರಿ ಹಿಂತಿರುಗಿ ನೋಡಿದಾಗ ನಾ
ಈವರೆಗೂ ನಡೆದುಬಂದಿರುವ ದಾರಿಯಲ್ಲಿ ಹಳ್ಳಿಯ
ಕಡೆಯಿಂದ ಇಬ್ಬರು ಬಿದ್ದೇಹೋಗುವಂತೆ ಓಡೋ
ಬರುತ್ತಿರುವುದು ಕಾಣಿಸಿತು. ನಾನು ಅವರಿಗೆ ಎದುರಾ
ಓಡಿದೆ. ಅದ್ದ ಸಿಕ್ಕ ಅವರು 'ಇದೀಗ ತಾನೆ ಕೋಡುಗಲ್ಲಿ

ಹಳ್ಳಿಯ ಕಡೆಯ ಕಮರಿಯಲ್ಲಿ ಹುಲಿ ಒಂದು ಎತ್ತನ್ನು ಹಿಡಿದು ಕೊಂದಿದೆ' ಎಂದು ಹೇಳಿದರು. ನಾನು ಬಂದಿದ್ದ ಆಳ್ಳರಲ್ಲಿ ಒಬ್ಬನನ್ನು 'ಕ್ಯಾಂಪಿಗೆ ಹೋಗಿ ತಿನ್ನಲಿಕ್ಕೆ ಒಂದಿಷ್ಟು ಊಟವನ್ನು ಜೊತೆಗೆ ಒಂದಿಷ್ಟು ಟೀಯನ್ನು ತರುವಂತೆ ಹೇಳಬೇಕೆಂದು' ಸೂಚಿಸಿ ಇನ್ನೊಬ್ಬನನ್ನು ಕರೆದುಕೊಂಡು ಎತ್ತು ಬಿದ್ದಿದ್ದ ಜಾಗದತ್ತ ಓಡಿದೆ.

ಹುಲಿ ಎತ್ತನ್ನು ಕೊಂದಿದ್ದ ಕಣಿವೆ ಸುಮಾರು ಇನ್ನೂರು ಅಡಿ ಆಳವಾಗಿದ್ದು ನಾನೂರು ಅಡಿ ಅಗಲವಾಗಿತ್ತು. ನಾವು ಅಲ್ಲಿಗೆ ತಲುಪಿದಾಗ ಅಲ್ಲಿ ರಣಹದ್ದುಗಳ ಜಾತ್ರೆಯೇ ನೆರೆದಿತ್ತು. ನೂರಾರು ಹದ್ದುಗಳು ಆ ಎತ್ತನ್ನು ಸಂಪೂರ್ಣ ಸ್ವಾಹಮಾಡಿಬಿಟ್ಟಿದ್ದವು. ಕೆಲವು ತುಣುಕು ಮೂಳೆ ಮತ್ತು ಚರ್ಮದ ಹೊರತು ಅಲ್ಲಿ ಮತ್ತೇನೂ ಇರಲಿಲ್ಲ. ಇದು ಬಿದ್ದಿದ್ದ ಜಾಗಕ್ಕೆ ಹಳ್ಳಿಯಿಂದ ನೇರವಾಗಿ ಹಗ್ಗ ಎಳೆದಿದ್ದರೆ ನೂರು ಗಜವಾಗುತ್ತಿತ್ತು. ಆದರೆ ಈಗ ನಾವು ನಿಂತ ಜಾಗದಿಂದ ಕೆಳಕ್ಕಿಳಿಯುವುದು ಅಸಾಧ್ಯವಾಗಿತ್ತು. ನನ್ನ ಜೊತೆಯಲ್ಲಿದ್ದವನು ಹೇಳದೆ ಕೇಳದೆ ಮುಂದಕ್ಕೆ ಓಡಿದ..... ನಾನು ಅವನನ್ನು ಹಿಂಬಾಲಿಸಿದೆ. ಅವನು ಆ ಕಣಿವೆಯ ದಂಡೆಯಲ್ಲೇ ಕಾಲು ಮೈಲಿಯಷ್ಟು ಸಾಗಿ ಬಲಕ್ಕೆ ತಿರುಗಿ ಕಣಿವೆಯೊಳಕ್ಕೆ ದನಗಳು ಇಳಿದಿದ್ದ ಜಾಡಿನಲ್ಲಿ ಒಳಕ್ಕಿಳಿದ. ಅದೊಂದು ವಿಕಾರವಾದ ಕಮರಿ. ಆದರ ಒಳಹೊರ ಮೈಯಲ್ಲೆಲ್ಲಾ ದಟ್ಟವಾದ ಕುರುಚಲು ಹಾಗೂ ಹುಲ್ಲಿನ ಪೊದೆಗಳು ಬಿಡಿದುಕೊಂಡು ಭಯಾನಕವಾಗಿತ್ತು. ಪೂರ್ವಾಪರಗಳ ಅರಿವಿಲ್ಲದೆ ಒಳಹೊಕ್ಕರೆ ಸಾವಿನ ಮನೆಯನ್ನು ಹೊಕ್ಕಂತಾಗುತ್ತಿತ್ತು. ನಾನು ಅಷ್ಟೊಂದು ಹತಾಶನಾಗಿರಲಿಲ್ಲ. ಹಿಂತಿರುಗಿ ಹಳ್ಳಿಗೆ ಬಂದೆವು. ನಾನು ಹಳ್ಳಿಯ ಮುಖ್ಯಸ್ಥನನ್ನು ಕುರಿತು 'ನೋಡಿ ಹದ್ದುಗಳು ಇಡೀ ಎತ್ತನ್ನು ಖಾಲಿಮಾಡಿಬಿಟ್ಟಿದೆ. ರಾತ್ರಿ ಅದರ ಮೇಲೆ ಹೊತ್ತುಕೂರುವುದು ಉಪಯೋಗವಿಲ್ಲ. ತಿನ್ನಲು ಏನೂ ಇರದಿದ್ದಾಗ ಹುಲಿಯನ್ನು ನಿರೀಕ್ಷಿಸುವುದು ಮೂರ್ಖತನ. ಆದ್ದರಿಂದ ನನಗೊಂದು ಎಳೆಯ ಕೋಣ ಹಾಗೂ ಒಂದು ನೂರಿನಷ್ಟು ಗಟ್ಟಿಯಾದ ಹಗ್ಗವನ್ನು ಕೊಡಿ' ಎಂದು ಹೇಳಿದೆ. ಮುಖ್ಯಸ್ಥ ವ್ಯವಸ್ಥೆ ಮಾಡಲು ಒಪ್ಪಿದ. ಇವೆಲ್ಲ ವ್ಯವಸ್ಥೆಯಾಗುವ ಹೊತ್ತಿಗೆ ದಲ್ಯಾನಿಯಾದ ಕ್ಯಾಂಪಿನಿಂದ ನಮ್ಮ ಕಡೆಯ ಇಬ್ಬರು ಟೀ ಹಾಗೂ ಊಟದ ರಾಶಿಯನ್ನೇ ಹೊತ್ತು ತಂದರು.

ನಾನು ಮತ್ತೆ ಕಣಿವೆಯೊಳಕ್ಕಿಳಿದಾಗ ಸೂರ್ಯ ಸಾವಿಗೆ ಹತ್ತಿರವಾಗುತ್ತಿದ್ದ. ಇಂಥ ಹೊತ್ತಿನಲ್ಲಿ ಒಂದು ಯಮಗಾತ್ರದ ಕೋಣವನ್ನು ಮುಂದೆ ಬಿಟ್ಟುಕೊಂಡು ಅನೇಕ ಹಳ್ಳಿಗರು ಹೊರಟಿದ್ದರು. ಆ ಕೋಣವನ್ನು ಹಳ್ಳಿಯ ಮುಖ್ಯಸ್ಥ ಪಕ್ಕದ ಹಳ್ಳಿಯಿಂದ ನನಗಾಗಿ ಖರೀದಿಸಿ ತಂದಿದ್ದ. ಹುಲಿ ಎತ್ತನ್ನು ಕೊಂದ ಜಾಗದಿಂದ ಐವತ್ತು ಗಜಗಳ ದೂರದಲ್ಲಿ ಕಮರಿಯ ಗೋಡೆಯಿಂದ ಅನೇಕ ಪೈನ್ ಮರಗಳು ಸಿಲೊಡೆದು ಕಣಿವೆಯೊಳಕ್ಕೆ ಚಾಚಿಕೊಂಡಿದ್ದವು. ನಾನು ಅಂಥ ಒಂದು ಪೈನ್ ಮರದ ಕೊಂಬೆಗೆ ಕೋಣವನ್ನು ಕಟ್ಟಿಸಿದೆ. ಇದಾದನಂತರ ಹಳ್ಳಿಗರು ಹಿಂತಿರುಗಿದರು. ಆ ಸುತ್ತಮುತ್ತ ನಾನು ಹತ್ತಿ ಕೂರಬಹುದಾದ ಒಂದು ಮರವೂ ಇರಲಿಲ್ಲ. ಈ ಕಮರಿಯ ಹಳ್ಳಿಯ ಕಡೆಗಿದ್ದ ಭಾಗದಲ್ಲಿ ಒಂದು ಕಡಿದಾದ ಕಂಬದ ಮಾದರಿಯ ಬಣುಗಲ್ಲಿತ್ತು. ನೆತ್ತಿಯಲ್ಲಿ ಎರಡು ಅಡಿ ಅಗಲ ಐದು ಅಡಿ ಉದ್ದವಾಗಿದ್ದ ಈ ಬಣುಗಲ್ಲು ಸಮತಟ್ಟಾಗಿತ್ತು. ಬಹಳ ವಿಚಿತ್ರವಾದ ಮೇಲ್ಮೈಯನ್ನು ಹೊಂದಿದ್ದ ಅದನ್ನು ಹೇಗಾದರು ಮಾಡಿ ಒಮ್ಮೆ ಹತ್ತಿ ಕುಳಿತರೆ ಹೆಚ್ಚೇನು ಭಯವಿರಲಿಲ್ಲ. ಆದರ ನೆತ್ತಿ ಹಳ್ಳಿಯ ಕಡೆಗೆ ಇಳಿಜಾರಾಗಿ ದ್ದರಿಂದ ನಾನು ನಿರೀಕ್ಷಿಸಿದ ದಿಕ್ಕಿನಿಂದ ಹುಲಿ ಬಂದರೆ ಅದಕ್ಕೆ ನಾನು ಕಾಣುವ ಸಾಧ್ಯತೆಯಿರಲಿಲ್ಲ. ತೀವ್ರ ಸರದಾಟದ ನಂತರ ನಾನು ಅದನ್ನು ಹತ್ತಿ ಇಳಿಜಾರಿನ ಕಡೆಗೆ ಕಾಲುಚಾಚಿ ಕೋಣವನ್ನು ಎಡಕ್ಕೆ ಬಿಟ್ಟುಕೊಂಡು ಬಂದೂಕದೊಂದಿಗೆ ಸ್ಥಿರಿಯಾದೆ. ಈಗ ನನ್ನ ಮತ್ತು ಕೋಣದ ನಡುವೆ ಅಂದಾಜು ಮೂವತ್ತು ಗಜ ಅಂತರವಿತ್ತು. ಕೋಣ ನಿಂತಲ್ಲಿಂದ ಆರಂಭವಾಗುವ ಇಳಿಜಾರು ನನ್ನತ್ತ ಸಾಗಿ ನಾನು ಕುಳಿತಿದ್ದ ಬಂಡೆಯ ಕೆಳದವರೆಗೂ ಹರಿದಿತ್ತು.

ಸೂರ್ಯ ಅವಸರದಲ್ಲಿದ್ದಂತೆ ಅಸ್ತಂಗತನಾಗುತ್ತಿದ್ದ. ನನ್ನ ನಿರೀಕ್ಷೆ ಮೀರಿ ಹೊತ್ತು ಹೋಗುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿ ಎಲ್ಲೋ ಕಲ್ಲೊಂದು ಉರುಳಿಹೋದ ಸದ್ದಾಯಿತು. ನಾನು ಹುಲಿಯನ್ನು ನಿರೀಕ್ಷಿಸಿದ ದಿಕ್ಕು ನೋಡಿದೆ. ಏನೂ ಕಾಣಲಿಲ್ಲ. ಕೋಣದತ್ತ ನೋಡಿದೆ. ಇದುವರೆಗೂ ಎತ್ತತ್ತಲೋ ನೋಡುತ್ತಿದ್ದ ಕೋಣ ಈಗ ನನ್ನ ಕೆಳಗಿನ ತಗ್ಗಿನತ್ತ ನೋಡುತ್ತಿತ್ತು. ನಿಜವಾಗಿಯೂ ಬೆಚ್ಚಿ ಬಿದ್ದು ನೋಡುತ್ತಿತ್ತು. ನಾನು ಅದು ನೋಡುತ್ತಿದ್ದ ಜಾಗವನ್ನು ನಿಧಾನವಾಗಿ ತಡಕುತ್ತ ಹಿಂದೆ ಸರಿದೆ. ಮೊದಲು ಏನೂ ಕಾಣಲಿಲ್ಲ. ಮತ್ತೆ ಮುಂದೆ ನೋಡುತ್ತಿದ್ದಾಗ ನನ್ನ ಕೆಳಗಿದ್ದ ಕಮರಿಯ ತಗ್ಗಿನಲ್ಲಿ ಏನೋ ಚಲನೆ ಕಂಡಿತು.....?! ಅದು!...... ಅದು ಹುಲಿಯ ತಲೆ.......!!

(ಮುಂದುವರೆಯುತ್ತದೆ)

ರಾಷ್ಟ್ರೀಯ ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳ ಆಯೋಗವು ಮುಸ್ಲಿಂ ಬಾಲಕಿಯರಿಗೆ ಹನ್ನೆರಡನೇ ತರಗತಿಯವರೆಗೆ ಸಹ ಶಿಕ್ಷಣವನ್ನು ನಿಷೇಧಿಸುವಂತೆ ಶಿಫಾರಸ್ಸು ಮಾಡುವ ಸಾಧ್ಯತೆಗಳಿವೆ ಹಾಗೂ ಮುಸ್ಲಿಂ ಬಾಲಕಿಯರಿಗೆ ಎಂಟನೇ ತರಗತಿಯ ಬಳಿಕ ವಿಜ್ಞಾನ ಮತ್ತು ಗಣಿತವನ್ನು ಐಚ್ಛಿಕ ವಿಷಯವನ್ನಾಗಿ ಮಾಡುವಂತೆ ಸಲಹೆ ನೀಡುವ ಸಂಭವವೂ ಇದೆ ಎಂದು ಪತ್ರಿಕೆಯೊಂದರಲ್ಲಿ ವರದಿಯಾಗಿದೆ. ಶಾಲಾ ಬಾಲಕಿಯರು ಬದುಕಿನ ಸಂಗಾತಿಗಳ ಆಯ್ಕೆಯಂತಹ ಮಹತ್ವದ ನಿರ್ಣಯಗಳನ್ನು ಕೈಗೊಳ್ಳುವಷ್ಟು ಪ್ರಬುದ್ಧರಾಗಿರುವುದಿಲ್ಲ ಎಂಬುದು ಈ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಎಂ.ಎಸ್.ಎ. ಸಿದ್ದಿಕಿ ಅವರ ಅಭಿಪ್ರಾಯ. ಗಣಿತ ಮತ್ತು ವಿಜ್ಞಾನದ ವಿಷಯಗಳಲ್ಲಿ ಬಾಲಕಿಯರ ಸಾಧನೆ ಕಮ್ಮಿಯಾದುದರಿಂದ ಏಳು ಅಥವಾ ಎಂಟನೇ ತರಗತಿಯಿಂದ ಇಂತಹ ವಿಷಯಗಳನ್ನು ಬಾಲಕಿಯರಿಗೆ ಐಚ್ಛಿಕವನ್ನಾಗಿ ಮಾಡಿ ಫ್ಯಾಷನ್ ವಿನ್ಯಾಸ, ಅಡುಗೆಯಂತಹ ವಿಷಯಗಳನ್ನು ಕಲಿಸಬೇಕೆಂದೂ ಇವರು ಸಲಹೆ ನೀಡಿದ್ದಾರೆ. ಹೆಣ್ಣುಮಕ್ಕಳೂ ಕೂಡಾ ಗಂಡುಮಕ್ಕಳಂತೆ ಅರೇಬಿಯಾದಿಂದ ಚೀನಾ ದೇಶದವರೆಗೆ ಪ್ರಯಾಣ ಮಾಡಿ ಶಿಕ್ಷಣ ಪಡೆಯಬೇಕೆಂಬ ಖುರಾನ್ ಬೋಧನೆಯನ್ನು ಇವರು ಮರೆತೇ ಬಿಟ್ಟಿದ್ದಾರೆ!



ಮುಸ್ಲಿಂ ಹೆಣ್ಣುಮಕ್ಕಳು ಹೆಚ್ಚಿನ ವಿದ್ಯಾಭ್ಯಾಸ ಪಡೆಯದಂತೆ ಅವರನ್ನು ಮನೆಯ ನಾಲ್ಕು ಗೋಡೆಗಳೊಳಗೆ ಬಂಧಿಸಿಡಲು ಹೆತ್ತವರನ್ನು ಪ್ರೇರೇಪಿಸುವ ಒಂದು ಸಲಹೆ ಇದಾಗಿದೆ. ಈಗಾಗಲೇ 'ತಬ್ಲಿಗ್' ಎಂಬ ಒಂದು ಗುಂಪು ಹೆಣ್ಣುಮಕ್ಕಳ ಶಿಕ್ಷಣವನ್ನು ಐದನೇ ತರಗತಿಗೆ ಕೊನೆಗೊಳಿಸಿ ಅವರಿಗೆ ಪ್ರೌಢಶಿಕ್ಷಣ ದೊರೆಯದಂತೆ ಮಾಡಲಾಗುತ್ತಿದೆ. ಐದನೇ ತರಗತಿ ಶಿಕ್ಷಣಕ್ಕಿಂತ ಹೆಚ್ಚಿನ ಜ್ಞಾನ ಹೆಣ್ಣುಮಕ್ಕಳಿಗೆ ಅಗತ್ಯವಿಲ್ಲ ಎಂಬುದು ಈ ಗುಂಪಿನ ಗಂಡಸರು ತೀರ್ಮಾನಿಸಿದ್ದಾರೆ. ಎಲ್ಲ ರೀತಿಯ ನಿರ್ಬಂಧಗಳನ್ನೂ ಹೆಣ್ಣುಮಕ್ಕಳು ಮತ್ತು ಮಹಿಳೆಯರ ಮೇಲೆ ಹೇರಿ ಅವರು ಹೊರಪ್ರಪಂಚದ ಸಂಪರ್ಕ ಪಡೆಯದಂತೆ ಎಚ್ಚರ ವಹಿಸುವುದೇ ಸಹ ಶಿಕ್ಷಣ ಹಾಗೂ ವಿಜ್ಞಾನದ ಶಿಕ್ಷಣವನ್ನು ನಿಷೇಧಿಸುವುದರ ಹಿಂದಿರುವ ಹುನ್ನಾರವಾಗಿದೆ.

ಹೆಣ್ಣುಮಕ್ಕಳು ಗಣಿತ ಮತ್ತು ವಿಜ್ಞಾನದಲ್ಲಿ ಹಿಂದುಳಿದಿದ್ದಾರೆ ಎಂದು ಸಿದ್ದಿಕಿಯವರು ಯಾವ ಆಧಾರದ ಮೇಲೆ ಹೇಳುತ್ತಿದ್ದಾರೆ? ಮುಸ್ಲಿಂ ಮಹಿಳೆಯರಿಗೆ ದೇವರು ಬೇರೆಯೇ ಮೆದುಳು ನಿರ್ಮಿಸಿ ಪಕ್ಷಪಾತ ಮಾಡಿದ್ದಾನೆಯೇ? 'ನಾನು ಗಂಡಿನಿಂದ ಹೆಣ್ಣನ್ನೂ ಹೆಣ್ಣಿನಿಂದ ಗಂಡನ್ನೂ ಸೃಷ್ಟಿಸಿದೆ' ಎಂಬುದು ಖುರಾನ್ ವಾಕ್ಯ. ಇಂದು ವಿಜ್ಞಾನ ಲೋಕದಲ್ಲಿ ಮಹಿಳೆಯರು ಪುರುಷರಿಗೆ ಸರಿಸಮನಾಗಿ ಹೆಜ್ಜೆ ಇಡುತ್ತಿದ್ದಾರೆ. ಕೇರಳದಾದ್ಯಂತ ಅಸಂಖ್ಯ ಮುಸ್ಲಿಂ ಬಾಲಕಿಯರು ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಪದವಿ ಪಡೆದು ವೃತ್ತಿ ನಿರತರಾಗಿದ್ದಾರೆ. ಮಹಿಳೆಯರ ಈ ಆರ್ಥಿಕ ಸ್ವಾವಲಂಬನೆ ಪುರುಷರ ಕಣ್ಣು ಕುಕ್ಕುತ್ತಿರಬಹುದು. ಅವರ ಈ ಆರ್ಥಿಕ ಸ್ವಾವಲಂಬನೆಯನ್ನು ತಡೆಯಲು ಇಂತಹ ಒಂದು ಹೊಸ ಸಂಶೋಧನೆಯನ್ನು ಈ ನ್ಯಾಯಮೂರ್ತಿಗಳು ಕೈಗೊಂಡಿದ್ದಾರೆಯೇ? ಮುಸ್ಲಿಂ ಮಹಿಳೆಯರ ಹೆರಿಗೆಗಾಗಿ ಮಹಿಳಾ ವೈದ್ಯೆಯರನ್ನೇ ಹುಡುಕಿಕೊಂಡು ಹೋಗುವ ಪುರುಷರು ತಮ್ಮ ಹೆಣ್ಣುಮಕ್ಕಳು ವಿಜ್ಞಾನ ಕಲಿತು ವೈದ್ಯೆಯಾಗದಂತೆ ತಡೆಯುವುದರ ಹಿಂದಿರುವ ಉದ್ದೇಶವೇನು?

ರಾಜೇಂದ್ರ ಸಾಚಾರ್ ಎಂಬವರು, 'ಮುಸ್ಲಿಮರು ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ದಲಿತರಿಗಿಂತಲೂ ಹಿಂದುಳಿದಿದ್ದಾರೆ' ಎಂದು ವರದಿ ನೀಡಿದ್ದಾರೆ. ಒಂದೆಡೆ ಮುಸ್ಲಿಮರು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ ಎಂಬ ವರದಿ ಪ್ರಕಟವಾಗುತ್ತಿದ್ದಂತೆ ಇನ್ನೊಂದೆಡೆಯಲ್ಲಿ ಮುಸ್ಲಿಂ ಬಾಲಕಿಯರು ಶೈಕ್ಷಣಿಕವಾಗಿ ಮುಂದುವರಿಯದಂತೆ ಹಲವು ವಿಧದ ತಂತ್ರಗಳನ್ನು ಪುರುಷ ಪ್ರಧಾನ ಸಮಾಜ ರೂಪಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ಮುಸ್ಲಿಮರು ಶೈಕ್ಷಣಿಕವಾಗಿ ಹಿಂದುಳಿಯಲು ಈ ಸಮಾಜದಲ್ಲಿ ಹರಡಿರುವ ಮೂಢನಂಬಿಕೆ ಹಾಗೂ ಮತಾಂಧತೆ ಮುಖ್ಯ ಕಾರಣವಾಗಿದೆ. ಹೆಣ್ಣು ಮಕ್ಕಳು ಹುಟ್ಟಿದಂದಿನಿಂದ, 'ಆಕೆ ಇರುವುದೇ ಮದುವೆಗಾಗಿ' ಎಂಬ ಭಾವನೆಯನ್ನು ಆಕೆಯಲ್ಲಿ ಬೇರೂರಿಸಲಾಗುತ್ತದೆ. ಬದುಕಿನ ಯಾವುದೇ ಕಾಲಘಟ್ಟದಲ್ಲೂ ಆಕೆ ಧ್ವನಿ ಎತ್ತದಂತೆ, ನಿಯಮಗಳನ್ನು ಪ್ರಶ್ನಿಸದಂತೆ ಆಕೆಯನ್ನು ಕಾವಲು ಕಾಯಲಾಗುತ್ತದೆ. ನಿಯಮಗಳ ಬಲೆಯಲ್ಲಿ ಸಿಲುಕಿಕೊಂಡ ಆಕೆಗೆ ಹೊರಪ್ರಪಂಚದ ಜ್ಞಾನವೇ ಇಲ್ಲ. ತನ್ನ ಗಂಡುಮಕ್ಕಳನ್ನು ಸಮನಾದ ಹಾದಿಯಲ್ಲಿ ಮುನ್ನಡೆಸಲಾಗದೆ ಈ ಮಕ್ಕಳು ಶಿಕ್ಷಣದಿಂದಲೂ, ಉದ್ಯೋಗದಿಂದಲೂ ವಂಚಿತರಾಗಿ ಸಮಾಜ ಕಂಟಕರಾಗಿ ಬಾಳುವುದನ್ನು ನಾವು ಕಾಣುತ್ತಿದ್ದೇವೆ.

ಸಾಚಾರ್ ವರದಿ ನೈಜವಾಗಿಯೇ ಇರಬಹುದು. ಆದರೆ ಅದಕ್ಕೆ ಕಾರಣರಾರು? ನಮ್ಮ ದೇಶದ ಸಂವಿಧಾನ ಖಂಡಿತವಾಗಿಯೂ ಕಾರಣವಲ್ಲ. ಬ್ರಿಟಿಷರು ಈ ದೇಶಕ್ಕೆ ಕಾಲಿಟ್ಟ ಬಳಿಕ ಕ್ರೈಸ್ತ ಮಿಷನರಿಗಳು ದೇಶಾದ್ಯಂತ ಶಿಕ್ಷಣ ಸಂಸ್ಥೆಗಳನ್ನಾರಂಭಿಸಿದರು. ಈ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯಲು ಎಂದಿನಂತೆಯೇ ಬ್ರಾಹ್ಮಣರು ಮುಂಚೂಣಿಯಲ್ಲಿದ್ದರು. ಆದರೆ ಮುಸ್ಲಿಂ ಧರ್ಮ ಗುರುಗಳು ಹೇಳಿದ್ದೇನು? "ಅದು ಸೈತಾನನ ಕಲಿಕೆ. ಅವರು ಮುಸ್ಲಿಮರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಬಹುದು. ಧಾರ್ಮಿಕ ಶಿಕ್ಷಣದಿಂದ ಹೊರತಾದ ಈ ಶಿಕ್ಷಣವನ್ನು ಮುಸ್ಲಿಮರು ಕಲಿಯಬಾರದು!" ಎಂದು ಮುಸ್ಲಿಮರನ್ನು ಆಧುನಿಕ ಶಿಕ್ಷಣದಿಂದ ತಡೆದರು. ದೆಹಲಿಯ ಸರ್ ಸಯ್ಯದ್ ಸಹೋದರರು ಈ ಬೋಧನೆಯ ಅಪಾಯವನ್ನು ಮನಗಂಡು, ಮದರಸಾ ಶಿಕ್ಷಣದೊಡನೆ ಆಧುನಿಕ ಶಿಕ್ಷಣವನ್ನೂ ಪಡೆಯಲು ಪ್ರೋತ್ಸಾಹಿಸಿದರು. ಕ್ರಮೇಣ ಬಹಳ ನಿಧಾನವಾಗಿ ಮುಸ್ಲಿಮರು ಆಧುನಿಕ ಶಿಕ್ಷಣಕ್ಕೆ ತೆರೆದುಕೊಳ್ಳಲಾರಂಭಿಸಿದರು. ಮುಸ್ಲಿಮರಲ್ಲಿ ಜಾಗೃತಿ ಮೂಡುತ್ತಿದ್ದಂತೆ ಮುಸ್ಲಿಮರ ಹಲವು ಧಾರ್ಮಿಕ ಗುಂಪುಗಳೂ ತಮ್ಮ ಬೋಧನೆಯನ್ನು ಪ್ರಾರಂಭಿಸಿದವು. ಹೀಗಾಗಿ ಸಂವಿಧಾನ ಮುಸ್ಲಿಮರಿಗೆ ಎಲ್ಲ ವಿಧದ ಸಾಂವಿಧಾನಿಕ ಹಕ್ಕುಗಳನ್ನು ನೀಡಿದ್ದರೂ ಅದರ ಸಮನಾದ ಫಲ ದೊರಕಿಸಿಕೊಳ್ಳುವಲ್ಲಿ ಇವರಲ್ಲಿ ಹರಡಲಾರಂಭಿಸಿದ ಮತಾಂಧತೆಯೇ ತಡೆಗೋಡೆಯಾಯಿತು. ಇದಕ್ಕೆ ಒಂದು ಉದಾಹರಣೆಯೆಂದರೆ ಅನಕ್ಷರಸ್ಥ ಮುಸ್ಲಿಮರು ಕುಟುಂಬ ಯೋಜನೆಯನ್ನು ನಿರ್ಲಕ್ಷಿಸಿದ್ದು ದೊಡ್ಡ ಕುಟುಂಬದ ಹೊರೆಯಿಂದಾಗಿ

ಮುಸ್ಲಿಮರ ಹಿಂದುಳಿಯುವಿಕೆಗೆ ಮುಸ್ಲಿಮರೇ ಕಾರಣ

ಇವರು ಆರ್ಥಿಕವಾಗಿ ಹಿಂದುಳಿಯುವಂತಾಯಿತು. ಜಮಾತೆ ಇಸ್ಲಾಮಿಯ ಮುಖವಾಣಿಯಾದ ಪತ್ರಿಕೆ 'ಸನ್ಮಾರ್ಗ' ಮುಸ್ಲಿಮರು ಕುಟುಂಬ ಯೋಜನೆ ಕೈಗೊಳ್ಳಬಾರದೆಂದು ಮೂವತ್ತೈದು ವಾರಗಳ ಕಾಲ ಲೇಖನವನ್ನು ಎಂಭತ್ತರ ದಶಕದಲ್ಲಿ ಧಾರಾವಾಹಿಯಾಗಿ ಪ್ರಕಟಿಸಿತು!

ಮುಸ್ಲಿಮರು ಶೈಕ್ಷಣಿಕವಾಗಿ ದಲಿತರಿಗಿಂತ ಹಿಂದುಳಿದಿದ್ದರೆ ಅದಕ್ಕೆ ಕಾರಣ ಮುಸ್ಲಿಮರೇ ಹೊರತು ಈ ದೇಶದ ಸಂವಿಧಾನವಲ್ಲ. 'ನೀವು ಇಹಲೋಕದಲ್ಲಿ ಯಾವುದಕ್ಕೂ ಆಸೆ ಪಡಬೇಡಿ. ನಿಮಗೆ ಸ್ವರ್ಗದಲ್ಲಿ ಎಲ್ಲವೂ ದೊರೆಯುತ್ತವೆ' ಎಂದು ಬೋಧಿಸುವ ಗುಂಪುಗಳು ಇಂದಿಗೂ ನಮ್ಮ ನಡುವೆ ಇದೆ. ಐವತ್ತರ ದಶಕದಲ್ಲಿ ನನ್ನ ಅಣ್ಣತಮ್ಮಂದಿರು ಪದವೀಧರರಾಗಿ ಉತ್ತಮ ಉದ್ಯೋಗದಲ್ಲಿದ್ದರು. ನಾನು ಹೆಣ್ಣಾದ ಕಾರಣ ನನಗೆ ಶಿಕ್ಷಣ ಮುಂದುವರಿಸಲು ಅವಕಾಶ ದೊರೆಯಲಿಲ್ಲ. ನನ್ನ ಅಣ್ಣನ ಮಗಳು ಎಫ್ಎಸ್ ತೇರ್ಗಡೆಯಾಗಿ ವಿದೇಶದಲ್ಲಿ ನಮ್ಮ ದೂತವಾಸದಲ್ಲಿ ಉನ್ನತ ಹುದ್ದೆಯಲ್ಲಿದ್ದಾಳೆ. ಆಕೆ ಮುಸ್ಲಿಂ ಹೆಣ್ಣುಮಗಳಾದ ಕಾರಣಕ್ಕಾಗಿ ಶಿಕ್ಷಣದಲ್ಲಾಗಲಿ, ಉದ್ಯೋಗದಲ್ಲಾಗಲಿ ಆಕೆಗೆ ಯಾವುದೇ ಹಿನ್ನಡೆಯೂ ಉಂಟಾಗಲಿಲ್ಲ.

ಇಂದು ಮುಸ್ಲಿಮರದೇ ಆದ ವಿದ್ಯಾಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ವಿದ್ಯಾಲಯಗಳು ದೇಶಾದ್ಯಂತ ಇವೆ. ಮುಸ್ಲಿಮರಲ್ಲಿ ಆಗರ್ಭ ಶ್ರೀಮಂತರೂ ಇದ್ದಾರೆ. ನಮಗೆ ಕೊರತೆ ಇರುವುದು ಯಾವುದಕ್ಕೆಂದರೆ ಸಮಾಜವನ್ನು ಸಮನಾದ ಹಾದಿಯಲ್ಲಿ ಮುನ್ನಡೆಸುವಂತಹ ರಾಜಕೀಯ ಮುಖಂಡರ ಕೊರತೆ. ರಾಜಕೀಯ ಪಕ್ಷಗಳು ನಮ್ಮ ಮೇಲೆ ಯಾರನ್ನೋ ಹೇರಿ, ಅಂದರೆ ಮುಸ್ಲಿಂ ಬಾಹುಳ್ಯವಿರುವಲ್ಲಿ ಓರ್ವ ಮುಸ್ಲಿಮನನ್ನೇ ಚುನಾವಣೆಗೆ ನಿಲ್ಲಿಸಿ ಮುಸ್ಲಿಮರು ಆತನಿಗೆ ಮತ ನೀಡುವಂತೆ ನೋಡಿಕೊಳ್ಳುತ್ತಿವೆ. ಇವರು ಒಮ್ಮೆ ಕುರ್ಚಿ ಹತ್ತಿದರೆಂದರೆ ಇವರಿಗೆ ಕುರ್ಚಿಯ ಕುರಿತು ಕಾಳಜಿ ಇರುತ್ತದೆಯೇ ಹೊರತು ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದವರ ಕುರಿತಾಗಲಿ, ಅಥವಾ ಸುಲಭದ ವಿವಾಹ ವಿಚ್ಛೇದನ, ಬಹುಪತ್ನಿತ್ವ ಮುಂತಾದ ಪಿಡುಗುಗಳಿಂದ ನರಳುತ್ತಿರುವ ಮುಸ್ಲಿಂ ಮಹಿಳೆಯರ ಕುರಿತಾಗಲಿ ಒಟ್ಟಾರೆ ಸಮಾಜದ ಕುರಿತಾಗಲಿ, ಯಾವುದೇ ಕಾಳಜಿಯೂ ಇರುವುದಿಲ್ಲ.

ಪ್ರಾರಂಭದಿಂದಲೂ ಸರ್ಕಾರದಲ್ಲಿ ಮುಸ್ಲಿಂ ಪ್ರಾತಿನಿಧ್ಯ ಇದ್ದೇ ಇತ್ತು. ಸ್ವತಂತ್ರ ಭಾರತದ ಮೊತ್ತ ಮೊದಲ ಸರ್ಕಾರದಲ್ಲಿ ಶಿಕ್ಷಣ ಸಚಿವರಾಗಿದ್ದವರು ಅಬ್ದುಲ್ ಕಲಾಂ ಆಜಾದ್. ನನ್ನ ನೆನಪು. ಡಾ. ಜಾಕೀರ್ ಹುಸೈನ್, ಫಕ್ರುದ್ದೀನ್ ಅಲಿ ಅಹಮದ್ ರಾಷ್ಟ್ರಪತಿಗಳಾಗಿದ್ದರೆ ಪ್ರೊ. ಹುಮಾಯೂನ್ ಕಬೀರ್, ರಫಿ ಅಹ್ಮದ್ ಕಿದ್ವೈ, ಖುರ್ಷಿದ್ ಆಲಂ ಖಾನ್, ನಜ್ಮಾ ಹೆಪ್ತುಲ್ಲಾ ಮುಂತಾದವರು ರಾಜಕಾರಣಿಗಳಾಗಿ ಅಥವಾ ಅವರ ರಕ್ತಸಂಬಂಧಿಗಳಾಗಿ ಅಧಿಕಾರ ಪಡೆದವರಾಗಿದ್ದರು. ಆದರೆ ಇವರು ಈ ಸಮಾಜದ ಉದ್ಧಾರಕ್ಕಾಗಿ, ಮಹಿಳೆಯರ ಮೇಲೆಸಗುವ ಶೋಷಣೆ ಹಾಗೂ ದೌರ್ಜನ್ಯವನ್ನು ಕೊನೆಗಾಣಿಸಲು ಯಾವ ಪ್ರಯತ್ನ ಮಾಡಿದ್ದಾರೆ? ವಿಚ್ಛೇದಿತ ಮಹಿಳೆಗೆ ಜೀವನಾಂಶ ಕೊಡಬೇಕೆಂಬ ಶ್ರೇಷ್ಠ ನ್ಯಾಯಾಲಯದ ತೀರ್ಪನ್ನು ಇವರೆಲ್ಲರೂ ಒಕ್ಕೊರಲಿನಿಂದ ವಿರೋಧಿಸಿದವರೇ ಆಗಿದ್ದಾರೆ. ಈ ತೀರ್ಪನ್ನು ಸಮರ್ಥಿಸಿದ ಆರಿಫ್ ಮಹಮ್ಮದ್ ಖಾನ್ ತನ್ನ ಹುದ್ದೆಯನ್ನು ಕಳೆದುಕೊಳ್ಳಬೇಕಾಯಿತು. ಮುಸ್ಲಿಂ ಮಹಿಳೆಯರ ಸುಲಭದ ತಲಾಖ್ ಪದ್ಧತಿ ಹಾಗೂ ಬಹುಪತ್ನಿತ್ವದ ವಿರುದ್ಧ ಎಐಎಡಿಎಂಕೆಯ ರಾಜ್ಯಸಭಾ ಸದಸ್ಯೆ ಚೆನ್ನೈನ ನೂರ್‌ಜಹಾನ್ ರಜಾಕ್ ಎಂಬ ನ್ಯಾಯವಾದಿ ರಾಜ್ಯಸಭೆಯಲ್ಲಿ ಭಾಷಣ ಮಾಡಿದರು. (80 ರ ದಶಕ). ಆದರೆ ಆ ಬಳಿಕ ಆ ಮಹಿಳೆಯ ಹೆಸರು ಎಲ್ಲಿಯೂ ಕೇಳಿಬರಲಿಲ್ಲ. ಮುಸ್ಲಿಂ ಮಹಿಳೆಯರು ಈ ಶೋಷಣೆಗಳ ವಿರುದ್ಧ ಧ್ವನಿ ಎತ್ತತೊಡಗಿದರೆ ಅವರನ್ನು ಟೀಕಿಸಿ, ಅಪಹಾಸ್ಯ ಮಾಡಿ, ಅವರು ಮುಸ್ಲಿಮರೇ ಅಲ್ಲವೆನ್ನಲು ತಮ್ಮ ಪತ್ರಿಕೆಗಳಲ್ಲಿ ಒಂದು ಅಂಕಣವನ್ನೇ ಪ್ರಾರಂಭಿಸುತ್ತಾರೆ.

ಈ ದೇಶದ ಜನಸಂಖ್ಯೆಯಲ್ಲಿ ಶೇ. 13 ಮುಸ್ಲಿಮರಿದ್ದಾರೆ. ಇಂದು ಮುಸ್ಲಿಂ ವ್ಯಕ್ತಿ ನಿಯಮ ಮಂಡಳಿಯಲ್ಲಿರುವವರು ಈ ಎಲ್ಲ ಜನರನ್ನು ಪ್ರತಿನಿಧಿಸುವವರಲ್ಲ; ಎಲ್ಲೋ ಕೆಲವರು ಸೇರಿಕೊಂಡು ಇಂತಹ ಮಂಡಳಿಯೊಂದನ್ನು ರಚಿಸಿಕೊಂಡಿದ್ದಾರೆ. ಮತ್ತು ಸಮಾಜದ ಆಗುಹೋಗುಗಳಲ್ಲಿ ಹಸ್ತಕ್ಷೇಪ ನಡೆಸುತ್ತಾರೆ. ಈಗ ರಾಷ್ಟ್ರೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಆಯೋಗವೆಂಬ ಇಂತಹ ಖಾಸಗಿ ಆಯೋಗ ಕೂಡಾ ಈ ದೇಶದ ಎಲ್ಲ ಮುಸ್ಲಿಮರ ಪ್ರಾತಿನಿಧ್ಯದಿಂದ ರೂಪುಗೊಂಡ ಆಯೋಗವಲ್ಲ. ಯಾರೋ ಕೆಲವರು ಸೇರಿಕೊಂಡು ಆಯೋಗ ಎಂಬ ಹೆಸರಿನಲ್ಲಿ ಮುಸ್ಲಿಂ ಹೆಣ್ಣುಮಕ್ಕಳ ಮೇಲೆ ಇಂತಹ ನಿರ್ಬಂಧವನ್ನು ಹೇರತೊಡಗಿದ್ದಾರೆ. ಸಮಾಜ ಹಾಗೂ ಸರ್ಕಾರ ಇಂತಹ ಆಯೋಗಗಳ ವರದಿಗಳನ್ನು ಕಡೆಗಣಿಸಬೇಕು.

ಸರ್ಕಾರ ಯಾವುದೇ ತಾರತಮ್ಯವಿಲ್ಲದೆ ಎಲ್ಲ ಸಮುದಾಯಗಳೂ ಸುಶಿಕ್ಷಿತರಾಗುವಂತಹ ಹಾಗೂ ಆ ಮೂಲಕ ಉದ್ಯೋಗ ಹಾಗೂ ಆರ್ಥಿಕ ಸ್ವಾವಲಂಬನೆ ಪಡೆಯುವಂತಹ ನಾಗರಿಕ ಕಾನೂನುಗಳನ್ನು ರೂಪಿಸಬೇಕು. ಯಾವುದೇ ತಾರತಮ್ಯಕ್ಕೆಡೆಯಾಗದಂತೆ ದೇಶಾದ್ಯಂತ ಎಲ್ಲ ಶಾಲೆಗಳಲ್ಲೂ ಏಕರೂಪ ಪಠ್ಯಕ್ರಮ ಹಾಗೂ ಏಕರೂಪದ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಯಾವುದೇ ಒಂದು ಸಮುದಾಯದ ಮತಗಳಿಕೆಗಾಗಿ ಆ ಸಮಾಜದ ಮಹಿಳೆಯರ ಶೋಷಣೆಗೆ ಹಾದಿಯಾಗುವಂತಹ ನಿಯಮಗಳನ್ನು ಜಾರಿಗೆ ತರಬಾರದು. ಕೆಲವೊಮ್ಮೆ ಆಳುವ ಪಕ್ಷ ಕೆಲವು ಕಠಿಣ ನಿರ್ಧಾರಗಳನ್ನು ಕೈಗೊಳ್ಳಬೇಕು. ಜನರು ನಿಧಾನವಾಗಿಯಾದರೂ ಇಂತಹ ನಿರ್ಧಾರಗಳನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಆಡಳಿತ ನಡೆಸುವವರು ಕುರ್ಚಿಯ ಆಸೆಯನ್ನು ಕೈಬಿಡಬೇಕು ಆಗ ನಿಧಾನವಾಗಿಯಾದರೂ ಒಂದು ಉತ್ತಮ ವ್ಯವಸ್ಥೆ ರೂಪಿಸಲ್ಪಡಬಹುದು.

–ಸಾರಾ ಅಬೂಬಕ್ಕರ್

ಮುಖ್ಯಮಂತ್ರಿ ಮಾತ ನಿಜ ಅನ್ನಕಂಡ್ರೆ ಹಿಂಗೆ ಆಗದು!

ತೋಳ್ ನಡುಗಿಸುವ ಚಳಿಗಾಳಿ. ಭಾರಿ ಮಳೆ ಹೊಡೆಯು ಮೋಡವಿದ್ದರೂ, ಮುಗಿಲಿನಿಂದ ಮುಖಕ್ಕೆ ಉಗುಳಿಕೊಂಡಂತಹ ಸೋನೆ ಬಿಟ್ಟರೆ ಒಂದು ಹದ ಮಳೆಯೂ ಹೊಡೆದಿರಲಿಲ್ಲ. ಎಷ್ಟು ಬೀಡಿ ಊದಿದರೂ ಬಗಡು ಬರದೆ ಶೀರನಿಗೆ ಬೇಸರವಾಗಿ,

"ಥೂ ಇರ್ದಾಮ್ಮನ್ ಬೀಡಿಸ್ನಾಡ" ಎಂದು ಎಸೆದ.

"ಸೇದದ್ಯಾಕೆ ಬೈಯ್ಯದ್ಯಾಕೆ, ಅಂಗೆ ಇರಕ್ಯಾಗದಿಲವೆ?" ಎಂದಳು ಜುಮ್ಮಿ.

"ಕಲ್ತುದ್ದ ಬುಡಕ್ಯಾದತೆ. ಯಂತವುನೊ ಸೇದ್ದೆ ಬೇಕಾಯ್ತವವ್ವ."

"ಈಗಿನ ಬೀಡಿ ವಾಸನೆ ನೋಡಿದ್ರೆ ಬುಡದೆ ವಳದು ಕಣೊ ಶೀರಮಾವ. ಮದ್ಲಿನ ಬೀಡಿ ಗಮನ ಈಗಿಲ್ಲ" ಎಂದ ಉಗ್ರಿ.

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಆಗ ಒಂದು ಗಣೇಶ್ ಬೀಡಿ ಸೇದಿದ್ರೆ ಒಂದು ಸಿಗರೇಟ್ ಸೇದ್ದಂಗಾಗದು ಕಂಡ್ಯ."

"ಆ ಬೀಡಿ ಬುಡು ಅದರ ಗಮ್ಮತ್ತೆ ಬ್ಯಾರೆ. ನಮ್ಮಪ್ಪ ವಲೆಲಿ ಬೀಡಿ ಹಚಗಂಡು ಬಾರ್ಲ ಅನ್ನೊನು. ನಾನು ಒಂದಂ ಯಳಕಂಡೆ ಬತ್ತಿದ್ದೆ. ಅಂಥಾ ಸೊಪ್ಪನೆ ಹಾಕೊರಾಗ" ಎಂದ ಉಗ್ರಿ.

"ಅವತ್ತಿನ ದಿನದಲ್ಲಿ ಮಗ್ಗಲಿದ್ದೋರು ಬೀಡಿ ಸೇದಿದ್ರೆ ಆ ವಗೆ ಕುಡಿಯಕ್ಕೆ ಒಂದಿದಾಗದು ಕಂಡ್ಯ. ಇವತ್ತಿನ ಬೀಡಿ ವಾಸನೆ ಯಂಗದೆ ಅಂದ್ರೆ ಹಚಗಂಡೇಟಗೆ ಸುತ್ತಮುತ್ತಲೋರು ಹಾರಸಯ್ಯ ಅತ್ಲಾಗೆ ಅಂತರೆ."

"ಮದ್ಲಿಗೆ ಬಸ್ಸಲೋಯ್ತಿದ್ರೆ ಇಡೀ ಬಸ್ಸೆ ಹತ್ತಿಗತ್ತೇನೋ ಅನ್ನಂಗೆ ಯಲ್ಲಾ ಬೀಡಿ ಸೇದೋರು. ಈಗ ಅಂಗೆ ಸೇದಿದ್ರೆ ಬುಟ್ಟರೆ, ಬಸ್ಸಿಂದ ಇಳಿ ಅಂತರೆ" ಎಂದಳು ಜುಮ್ಮಿ.

"ಚಲುವರಾಯಸ್ವಾಮಿ ಅದೊಂದಿದ ಚನಾಗಿ ಮಾಡಿದ" ಎಂದ ಶೀರ.

"ಯಾವುದು ಮಾಡಿದ?"

"ಅದೆ ಬಸ್ನಲ್ಲಿ ಬೀಡಿ ಸಿಗರೇಟು ಸೇದಂಗಿಲ್ಲವಲ್ಲ ಅದ."

"ನೀನ್ಯಾವ ಸೀಮ್ಯೊನೊ? ಅದು ಚಲುವರಾಯ ಮಾಡಿದ್ದಲ್ಲ ಜನಗಳೇ ಜೋರು ಮಾಡಿ ಜಾರಿಯಾಗಿರೊ ಕಾನೂನು."

"ಚಲುವರಾಯಸ್ವಾಮಿ ಮಕದಲ್ಲಿ ಮದ್ಲಿನ ಕಳೆ ಇಲ್ಲ ಆಲವೆ?"

"ಕಳೆಯಂಗೆ ಬಂತತೂ? ಶನಿಮಾತ್ಮನ ಕಣ್ಣು ಚಲುವರಾಯಸ್ವಾಮಿ ಮ್ಯಾಲೆ ಬಿದ್ದದೆ. ಅದ್ಕೆ ಮಂಕಾಗ್ಯವುನೆ."

"ಅದ್ಯಾಕವುನ ಮ್ಯಾಲೆ ಕಣ್ಣು ಬಿದ್ದದ್ದಾ?" ಎಂದ ಕಾಳಮಾವ.

"ಅವುನು ದ್ಯಾವೇಗೌಡನ ಮಕ್ಕಳ ಹಿಂದಕಾಕಂಗೆ ಕಂಡನಂತೆ ಕಣಮಾವ, ಅದೂ ಅಲ್ದೆ ದ್ಯಾವೇಗೌಡನ ಮಕ್ಕಳಗಿಂತ ವಳ್ಳೆ ಲೀಡರಂಗೆ ಕಾಣ್ತನೆ, ಬ್ಯಾರೆ ಪಾರ್ಟಿ ಮಿನಿಷ್ಟರ್ಯಲ್ಲ ಅವುನ್ನೆ ಹೊಗಳತರಂತೆ. ಅದ್ಕೆ ದ್ಯಾವೇಗೌಡ ಒಂದಲ್ಲಾ ಒಂದಿನ ಇವುನು ನನ್ನ ಮಕ್ಕಳ ದಾರಿಗೆ ಮುಳ್ಳಾಯ್ತನೆ ಅಂತ ಮಸ್ತನಂತೆ."

"ಇದೇನಿಂಗಾಗಿಬುಟ್ನಲ್ಲ ದ್ಯಾವೇಗೌಡ?" ಎಂದು ಶೀರ ಒಳಗಣ್ಣಾದ.

"ಮನೆವಳಿಕೂ ಯಾರ್ನು ಸೇರಸದಿಲವಂತೆ ಕಣೊ" ಎಂದಳು ಜುಮ್ಮಿ.


"ಅದ್ಯಾಕೆ ಗೊತ್ತೇನೆ? ಹಿರಿಸಾಯದ ಸೋಮಶೇಕ್ರ ದ್ಯಾವೇಗೌಡನ ಮನಿಗೋಗಿ ಮೈಟಾಸಿಡ್ ತಗಂಡು ಸಾಯಕ್ಕೋಗಿದ್ನಂತೆ. ಆಗ್ಲಿಂದ ಯಾರುನೂ ಮನೆವಳಿಕೆ ಕೂಡಬ್ಯಾಡ ಅಂತ ಹೇಳಿದ್ದನಂತೆ" ಎಂದ ಉಗ್ರಿ.

"ಅವುನ್ಯಾಕ್ಲ ಅಲ್ಲಿಗೋಗಿ ಇಸ ಕುಡಿಬೇಕು" ಎಂದ ಕಾಳಮಾವ.

"ಐ ಬ್ಯಾಂಕಲ್ಲಿ ಸಾಲ ಮಾಡಿ ಟ್ಯಾಗುಟ್ರ ತಗಂದಿದ್ದ ಆ ಊರಲ್ಲೇನು ಮಸಿ ಟ್ಯಾಗುಟ್ರ ಇದ್ದವೆ. ಅದ್ಕೆ ಟ್ಯಾಗುಟ್ರ ಓಡಲಿಲ್ಲ ಲಾಸಾಯ್ತು, ಸಾಲೇರಿಕತ್ತು, ಬ್ಯಾಂಕಿನೋರು ಬಂದು ಹೆದ್ರಿಸಿದ್ರು...."

"ಅವುರ ಕ್ಯಲಸ ಅವುರು ಮಾಡ್ತರೆ. ಅದ್ಕೆ ಹೆದರಬಾರ್ದು ಕಂಡ್ಯ" ಎಂದ ಶೀರ.

"ಸಾಲ ಮಾಡಿರೊ ರೈತ ಹೆದರೇ ಹೆದರತನೆ ಕಣೊ.



ಪಾಪ ಆ ಸೋಮಶೇಕ್ರನಿಗೆ ಆ ಟೇಮಲ್ಲಿ ಕುಮಾರಸ್ವಾಮಿ ಗೆಪ್ತಿಗೆ ಬಂದ."

"ಅವುನೇನು ಕರದಿದ್ನೆ?"

"ಊ, ವಳನರಸೀಪುರಕೆ ಬಂದಾಗ ತೊಂದ್ರೆಲಿರೋ ರೈತರು ನನ್ನತ್ರಕೆ ಬನ್ನಿ ನಿಮ್ಮ ಸಮಸ್ಸೆ ಏನಿದ್ರು ಪರಿಯಾರ ಮಾಡ್ತಿನಿ ಅಂದಿದ್ನಂತೆ. ಅದ್ನೆ ನಿಜ ಅನ್ಕಂಡು ಹೋಗ್ಯವುನಿವುನು."

"ಅಂಗರೆ ಕುಮಾರಸ್ವಾಮಿ ಮಾತು ನಿಜಲವೇನ್ಲ?" ಎಂದಳು ಜುಮ್ಮಿ.

"ಅಲ್ಲಾ ಕಣೆ, ಆ ಕುಮಾರಸ್ವಾಮಿ ಇಲ್ಲಿಗಂಟ ನಿಜ ಹೇಳಿದ್ದನೇನೆ? ಪಾಪ ಸಭೆಲಿ ಏನೊ ಬಾಯಿಗೆ ಬಂದಿದ ಹೇಳ್ತನೆ. ಈ ಬಡ್ಡೆತ್ತವು ಅದ್ನೆ ನಿಜ ಅನ್ಕಂಡು ಸಾಲ ಸೂಲ ಮಾಡಿಕಂಡು ಓಡೋಯ್ತವೆ. ಅಲ್ಲಿ ಇಂಥೋರನ ವಳಿಕೆ ಬುಟ್ಟರೆ?"

"ಬುಡದಿಲ್ಲ ಬುಡು. ನಾನೆ ಒಂದು ಸತಿಯ ಹಿರಿಸಾಯದ ಸ್ರೀಕಂಠಯ್ಯನ್ನ ಮಾತಾಡಸಕ್ಕೋಗಿ ಅವುನು ಬರೋಗಂಟ ಬಾಗಲಲ್ಲೇ ನಿಂತಿದ್ದೆ ಅವುನ ಬಂದಮ್ಯಾಲೆ ಕೈಮುಗದೆ. ಏನು ಸೀರೆಗೌಡ್ರೆ ಚನಾಗಿದ್ದೀರಾ ಅಂದ..." ಎಂದ ಸೀರ ಗೊರಗರಿಯುವ ನಗು ತಂದುಕೊಂಡು ಕೆಮ್ಮುತ್ತ ಅದರಲ್ಲೇ ತತ್ತರಿಸಿಹೋದ. ಮುಂದೆ ಹೇಳಲು ಹೊರಟಂಗೂ ಕೆಮ್ಮತೊಡಗಿದ್ದರಿಂದ, ವಾಟಿಸ್ಸೆ,

"ನಾನು ಕಂಟಿನ್ಯೂ ಮಾಡ್ತಿನಿ ಚಿಗಪ್ಪ ನೀನು ಕೆಮ್ಮುತ್ತಾಯಿರು" ಎಂದ.

"ನೀನು ಇದ್ದೇನ್ಲ ಆಗ?"

"ಇರಲಿಲ್ಲ ಕಣಕ್ಕ. ನಮ್ಮ ಚಿಗಪ್ಪನೇ ಹೇಳಿದ್ದ. ಆಮ್ಯಾಲೇನಾಯ್ತವ್ವಾ ಅಂದ್ರೆ ಶ್ರೀಕಂಠಯ್ಯ ಸೀರ ಚಿಗಪ್ಪನ್ನ ಕಳಿಸಿಕೊಡು ಅಂದ. ಆಗ ಅಲ್ಲೇ ನಿಂತಿದ್ದ ಯಾವುದೊ ಕಾಂಗ್ರೆಸ್ಸಿನ ಕಖವ ಚಪ್ಪಾಳೆ ವಡದು ಆಟೊ ಕರುದು ಕುಂಡ್ರಿಸಿ ಕಳಿಸ್ತ. ಆ ಆಟೋದವನು ನಮ್ಮ ಚಿಗಪ್ಪನ್ನ ಬಸ್ಟಾಂಡಿಗೆ ಬುಟ್ಟು ಕಾಸು ಕೇಳಿದ. ಈ ನಮ್ಮ ಚಿಗಪ್ಪ 'ಕಾಸ್ಯಾಕಪ್ಪ ಕೊಡ್ಲಿ? ನಾನೇನು ನಿನ್ನ ಕರಿದಿದ್ನೆ, ಹೋಗಿ ಶ್ರೀಕಂಠಯ್ಯನ ಕೇಳು' ಅಂದ. ಅಂಗೆ ನಮ್ಮ ಚಿಗಪ್ಪ ಬೆಂಗಳೂರ ಆಟೋದವುನಿಗೇ ನಾಮ ಹಚ್ಚಿದ" ಎಂದು ವಾಟಿಸ್ಸೆ ನಗುವಾಗ ಸಿಟ್ಟಾದ ಉಗ್ರಿ,

"ಅಲ್ರೊ, ನಾನು ಆ ಸೋಮಶೇಖರನ ಸುದ್ದಿ ಹೇಳ್ತಯಿದ್ರೆ ನಿಮ್ದೆ ನಿಮಗಾಯ್ತಲ್ರೊ?" ಎಂದ.

"ಆಯ್ತು ಕಂಟನ್ಯು ಮಾಡೊ ಉಗ್ರಿ."

"ಇವುನು ಬಾಯಿಬುಟ್ರೆ ಮಣ್ಣಿನ ಮಗ ಅಂತನೆ,

ತೊಟ್ಟಿಲಿನಲ್ಲಿಯೇ ನಕ್ಸಲೀಯ ದೀಕ್ಷೆ ನೀಡಿದ!

ಇದು ಪ್ರಜಾಪ್ರಭುತ್ವವೆ?

ಈ ಅನುಮಾನ ಬರಲು ಕಾರಣ ಇದೆ.

ಪ್ರಜಾಪ್ರಭುತ್ವ ಎಂದರೆ ಸರ್ಕಾರದ ವ್ಯವಸ್ಥೆ ಅಲ್ಲ, ಜನರು ಬದುಕುವ ರೀತಿ ಎಂದು ಹೇಳಲಾಗುತ್ತದೆ. ಜನರು ಬದುಕುತ್ತಿರುವ ರೀತಿ ಹೇಗಿದೆ?

ಪ್ರಖ್ಯಾತ ಚಲನಚಿತ್ರ ನಿರ್ದೇಶಕ ಎಂ.ಎಸ್. ಸತ್ಯು ಮೈಸೂರಿಗೆ ಬಂದಿದ್ದರು. ರಂಗಾಯಣದಲ್ಲಿ ಅವರ ಭಾಷಣ. ಪ್ರಾಸ್ತಾವಿಕವಾಗಿ ಕರ್ನಾಟಕ ರಕ್ಷಣಾ ವೇದಿಕೆ ವಿಷಯ ಬಂತು. ಅವರು ಅದೊಂದು 'ಸ್ವಾರ್ಥಿ'ಗಳ ಕೂಟ ಎಂದು ಜರೆದರು. ಇಂತಹವರಿಂದ ಕನ್ನಡ, ಕರ್ನಾಟಕ ಉಳಿಯುವ ಅವಶ್ಯಕತೆ ಇಲ್ಲ ಎಂಬಂತ ಮಾತುಗಳನ್ನು ಆಡಿದರು. ಅವರು ನೋಡಿದ ಘಟನೆಗಳು, ಆಗಿರಬಹುದಾದ ಅನುಭವಗಳು ಇಂತಹ ಮಾತುಗಳನ್ನು ಆಡಿಸಿರಬಹುದು.


ಇದಕ್ಕೆ ಪ್ರತಿಕ್ರಿಯೆ ಹೇಗಿರಬೇಕಿತ್ತು? ತಮ್ಮ ಕಾರ್ಯ ವೈಖರಿಯ ವಿಮರ್ಶೆ ನಡೆಯಬೇಕಾಗಿತ್ತು. ಎಲ್ಲಾದರೂ ಅಪಚಾರ ಆಗಿದ್ದರೆ ಅದನ್ನು ತಿದ್ದುಕೊಳ್ಳುವ ಮನಸ್ಸು ಮಾಡಬೇಕಿತ್ತು. ಯಾವುದೇ ತಪ್ಪು ಮಾಡದೆ ಸತ್ಯು ಈ ರೀತಿ ಹೇಳಿದ್ದರೆ ಅವರನ್ನು ಪ್ರಶ್ನಿಸುವ ನೈತಿಕ ಹಕ್ಕು ಅವರದಾಗುತ್ತಿತ್ತು.

ಆದರೆ ನಡೆದದ್ದೇನು? ಚರ್ಚೆ ಅಲ್ಲ ಬದಲಾಗಿ ರಸ್ತೆ ತಡೆ, ಪ್ರತಿಕೃತಿ ದಹನ, ಎಂ.ಎಸ್. ಸತ್ಯು ಸಭೆಗಳಿಗೆ ಬಹಿಷ್ಕಾರ. ಇದು ಯಾವ ಪ್ರಕೋಪಕ್ಕೆ ಹೋಯಿತು ಎಂದರೆ ಸತ್ಯು ಕರ್ನಾಟಕ ರಕ್ಷಣಾ ವೇದಿಕೆಯ ಕ್ಷಮೆಯನ್ನು ಬಹಿರಂಗವಾಗಿ ಕೇಳಬೇಕಾಯಿತು!

ಸತ್ಯು ಅಪದ್ಧ ನುಡಿದಿದ್ದಾರೆ ಎಂದೇ ಪರಿಭಾವಿಸೋಣ. ಅದಾದ ಕೆಲವೇ ದಿವಸಗಳಲ್ಲಿ ಮತ್ತೊಂದು ಘಟನೆ ನಡೆಯಿತು.

'ಶಿವಾಜಿ' ತಮಿಳು ಸಿನಿಮಾದ ಬಿಡುಗಡೆ. ಬಿಡುಗಡೆಗೆ ಇಷ್ಟವೇ ತಮಿಳು ಸಿನಿಮಾ ಬಿಡುಗಡೆ ಮಾಡಲು ಅವಕಾಶ ಇಲ್ಲ ಎಂದು ಕರ್ನಾಟಕ ರಕ್ಷಣಾ ವೇದಿಕೆ ಬಹಿರಂಗಪಡಿಸಿತ್ತು, ಬಿಡುಗಡೆಯ ಹಿಂದಿನ ದಿವಸ ಆ ಚಿತ್ರ ಪ್ರದರ್ಶನಗೊಳ್ಳುವ ಚಿತ್ರಮಂದಿರದ ಎದುರು ಪ್ರತಿಭಟನೆ ನಡೆಸಿದರು. ಚಿತ್ರ ಬಿಡುಗಡೆ ಆಯಿತು. ಅದೂ ಬೆಂಗಳೂರಿನ ಎಂಟು ಚಿತ್ರಮಂದಿರಗಳಲ್ಲಿ! ರಕ್ಷಣಾ ವೇದಿಕೆಯ ಮುಖಂಡರು ಸಾರಿದರು– 'ಇನ್ನು 48 ಗಂಟೆಗಳ ಅವಕಾಶ ನೀಡುತ್ತೇವೆ. ಅಷ್ಟರಲ್ಲಿ ಚಿತ್ರವನ್ನು ತೆಗೆಯದಿದ್ದರೆ ತೀವ್ರವಾದ ಪ್ರತಿಭಟನೆ ಮಾಡುತ್ತೇವೆ.' ಚಲನಚಿತ್ರ ವಾಣಿಜ್ಯ ಮಂಡಳಿ ತಾನೇ ರೂಪಿಸಿರುವ ನಿಯಮಗಳನ್ನು ಮೀರಿ ನಡೆದಿರುವುದಕ್ಕೆ ಈ ಪ್ರತಿಭಟನೆ ಎಂದು ಕರವೇ ಸಾರಿತು!

ನಲವತ್ತೆಂಟು ಗಂಟೆಗಳ ಗಡಿ ಮೀರಿತು. ಶಿವಾಜಿ ತಮಿಳು ಚಿತ್ರದ ಪ್ರದರ್ಶನ ಯಾವುದೇ ಅಡೆತಡೆಗಳಿಲ್ಲದೆ ತುಂಬಿದ ಚಿತ್ರಮಂದಿರಗಳಲ್ಲಿ ಪ್ರದರ್ಶನಗೊಳ್ಳುತ್ತಲೇ ಇತ್ತು! ಕರವೇ ನೀಡಿದ ಎಚ್ಚರಿಕೆ 'ವಸೂಲಿ ಎಚ್ಚರಿಕೆ' ಎಂದು ಯಾರಿಗಾದರೂ ಅನುಮಾನ ಬರುವುದು ಸಹಜವಾಗಿತ್ತು.



ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಹಾಗೂ ಶಿವಾಜಿ ಚಲನಚಿತ್ರ ವಿತರಕ ಗಂಗರಾಜ್ ಮತ್ತು ಕರವೇ ನಡುವೆ ಲಕ್ಷಾಂತರ ರೂಪಾಯಿಯ ವ್ಯವಹಾರ ಕುದುರಿರುತ್ತೆ ಎಂಬ ಗುಮಾನಿ ಬಲವಾಯಿತು. ಈ ಊಹೆ ತಪ್ಪಾಗಿ ಕರವೇ ತಾನು ಏಕೆ ಪ್ರತಿಭಟನೆಯಿಂದ ಹಿಂದಕ್ಕೆ ಸರಿಯಿತು ಎಂಬುದಕ್ಕೆ ಸ್ಪಷ್ಟನೆ ನೀಡಬೇಕು. ಕನ್ನಡ ಚಲನಚಿತ್ರದ ದಿಗ್ಗಜಗಳ 'ಕನ್ನಡ' ಅಭಿಮಾನ, ಕಳಕಳಿ ಎಷ್ಟು ಎಂಬುದು ನಮಗೆ ತಿಳಿದಿದೆ! ಅವರಿಂದ ಕನ್ನಡದ ಉದ್ಧಾರ ಆಗುತ್ತದೆ ಎಂದು ನಾವೇನೂ ನಂಬಿಲ್ಲ, ತಮಿಳು ಸಿನಿಮಾದ ಬಗ್ಗೆ ವಿಶೇಷ ಒಲವೂ ಇಲ್ಲ, ಆದರೂ ಪಾರದರ್ಶಕತೆಯ ದೃಷ್ಟಿಯಿಂದ ಸ್ಪಷ್ಟನೆ ನೀಡುವುದು ಕರವೇಯ ನೈತಿಕ ಜವಾಬ್ದಾರಿ ಆಗಿದೆ. ಈ ದಾರಿ ಬಿಟ್ಟು ಜನಬಲ, ಬಾಹು ಬಲಗಳ ಪ್ರದರ್ಶನಕ್ಕಿಳಿದರೆ ಎಂ.ಎಸ್. ಸತ್ಯು ಮಾತಿಗೆ ಪುಷ್ಟಿ ದೊರಕಿದಂತಾಗುತ್ತದೆ. ಇದು ಆಗದೆ ಇದ್ದರೆ... ಪ್ರಜಾಪ್ರಭುತ್ವ... ವಾಕ್ ಸ್ವಾತಂತ್ರ್ಯ ಇವುಗಳೆಲ್ಲ ಬಾಹುಬಲದ ಮುಂದೆ.....!

* * * * * *

ದೇವರುಗಳು ಮನುಷ್ಯರ ರೂಪ ತಾಳುತ್ತಿದ್ದರು. ಅದು ಆ ಕಾಲ.

ಮನುಷ್ಯರೇ ದೇವರ ಅವತಾರ ತಾಳುತ್ತಿದ್ದಾರೆ. ಇದು ಈ ಕಾಲ.

ವಿಜಯರಾಜೆ ಸಿಂಧ್ಯ ಯಾರೀಕೆ? ರಾಜಸ್ಥಾನದ ಮುಖ್ಯಮಂತ್ರಿ. ಅಷ್ಟು ಮಾತ್ರ ಅಲ್ಲ, ಆಕೆ ಅನ್ನಪೂರ್ಣೆ!

ಈಕೆಯೇ ಅನ್ನಪೂರ್ಣೆ ದೇವತೆ ಆದಮೇಲೆ ಇವರ ಮೇಲಿನ ಅಧಿಕಾರದಲ್ಲಿರುವ ವಾಜಪೇಯಿ, ಅಡ್ವಾಣಿ, ರಾಜನಾಥಸಿಂಗ್ ಹುಲುಮಾನವರಾಗಿರಲು ಸಾಧ್ಯವೆ? ಅವರು ಅವತರಿಸಿದರು ಬ್ರಹ್ಮ, ವಿಷ್ಣು ಮಹೇಶ್ವರ ರೂಪದಲ್ಲಿ!

ಭಾಜಪದವರು ಈ ಪಟ್ಟ ಕಸಿದರೆ ಕಾಂಗ್ರೆಸ್ಸಿನವರಿಗೆ ಬಾರದೆ ಛಲ? ಸೋನಿಯಾಗಾಂಧಿ ಪ್ರತ್ಯಕ್ಷರಾದರು ದುರ್ಗೆ, ಝಾನ್ಸಿ ರಾಣಿ ಲಕ್ಷ್ಮಿಬಾಯಿ ವೇಷದಲ್ಲಿ!

ಮೂರ್ಖತನದ ಪರಮಾವಧಿ. ಇದು ನಮ್ಮ ಪ್ರಜಾಪ್ರಭುತ್ವದ ಕೊಡುಗೆ!

ಇಲ್ಲಿಗೆ ಒಂದು ಒಬ್ಬೆ ಮುಗಿಯಿತು. ಮುಂದೆ ಬಂದಿತು ರಾಷ್ಟ್ರಾಧ್ಯಕ್ಷರ ಚುನಾವಣೆ. ಭಾಜಪಕ್ಕೆ ಶೆಖಾವತ್ ಬೇಕು. ಕಾಂಗ್ರೆಸ್‌ಗೆ ಪ್ರತಿಭಾ ಪಾಟೀಲ್ ಬೇಕು.

ಏನು ಮಾಡಬೇಕು ಭಾಜಪ ನಿಷ್ಠರು?

ಸೋನಿಯಾ ಅವಹೇಳನಕ್ಕೆ ಮುಂದಾದರು!

ವಿದೇಶಿ ಸೋನಿಯಾಳನ್ನು ಹಿಂದೂ ದೇವತೆಯಾಗಿ ಚಿತ್ರಿಸಿರುವುದು ಹಿಂದೂ ಧರ್ಮಕ್ಕೆ ಆದ ಅಪಮಾನ ಅಂತ ಸಾರಿದರು! ಹುಸಿ ಜಾತ್ಯತೀತವಾದಿಗಳಿಗೆ ಇದು ಆಪ್ಯಾಯಮಾನವಾಗಿದೆ ಎಂದು ಚೇಡಿಸಿದರು!

ಆದರೆ... ವಿಜಯರಾಜೇ, ವಾಜಪೇಯಿ, ಅಡ್ವಾಣಿ, ರಾಜನಾಥಸಿಂಗ್ ಅವರನ್ನೆಲ್ಲ ದೇವಾನುದೇವತೆಗಳಾಗಿ ಚಿತ್ರಿಸಿದ್ದು ಅವರಿಗೆ ಜ್ಞಾಪಕಕ್ಕೇ ಬರಲಿಲ್ಲ! ಅವರೆಲ್ಲ ಹಿಂದೂ ಧರ್ಮೀಯರು ಎಂದಿರಬೇಕು!

ಕೆಲಸವಿಲ್ಲದ ಕುಂಬಾರ ಮಗುವಿನ ತಿಗ ತಟ್ಟಿದ ಅನ್ನುವ ಹಾಗೆ, ಅಕ್ಷರ ಕಲಿತ ಹಿಂದೂತ್ವದ ಮನಸ್ಸಿನವರಿಂದ ಪತ್ರಿಕೆಗಳ ಮುಖಾಂತರ ನಮಗೆ ಬೋಧನೆ! ಹೀಗಿದೆ ಪ್ರಜಾಪ್ರಭುತ್ವದಲ್ಲಿ ಅರ್ಧ ಸತ್ಯವನ್ನೇ ಪೂರ್ಣ ಸತ್ಯಗೊಳಿಸುವ ಅಕ್ಷರ ವ್ಯಭಿಚಾರ!

* * * * * *

ಅಣಕ

ಎಚ್.ಎಲ್. ಕೇಶವಮೂರ್ತಿ

ನಮ್ಮ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಶಂಕರ ಬಿದರಿ ಅವರು ಯಾರು ನಕ್ಸಲೀಯರು, ಯಾರು ನಕ್ಸಲರ ಬೆಂಬಲಿಗರು ಎಂದು ಬಹಳ 'ವರಿ' ಮಾಡಿಕೊಂಡು ಒಂದು ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ. ಹೀಗೆ ಗುರುತಿಸಲು ಅವರು ಯಾವ ಮಾನದಂಡ ಉಪಯೋಗಿಸಿದರು ಎಂಬುದು ನಿಗೂಢವಾಗಿದೆ. ಆದರೂ ಹೆಚ್ಚುವರಿಯವರು ಬಿಡುಗಡೆ ಮಾಡಿರುವುದರಿಂದ ಇದರಲ್ಲಿ ಇಂಚಿನಾದರೂ ಸತ್ಯ ಇರಲೇಬೇಕು ಅಂತ ತನಿಖೆಗೆ ಇಳಿದಾಗ ತಿಳಿದುಬಂದದ್ದು ಏನು ಅಂದರೆ....

ನಮ್ಮ ಧೀರ ಪೊಲೀಸ್ ಪಡೆ ನಕ್ಸಲೀಯರನ್ನು ತಡಕಲು ಹೊರಟಿತಂತೆ. ಒಂದೊಂದು ಕಡೆಯೂ ಒಂದೊಂದು ರೀತಿಯಲ್ಲಿ ವಿಶಿಷ್ಟ ಮಾಹಿತಿಗಳನ್ನು ಸಂಗ್ರಹಿಸಿತಂತೆ. ಅವರು ಸಂಗ್ರಹಿಸಿದ ಒಂದು ಮಾಹಿತಿಯ ರೀತಿ ಇಲ್ಲಿದೆ.

'ಎಲ್ಲೇ ನಿನ್ ಮಗ?'

'ಮಗಿಲ್ಲ ಕಣಪ್ಪ'

'ಎಲ್ಲೋಗವ್ನೆ?'

'ಮಗನೇ ಇಲ್ಲ ಕಣಪ್ಪ'

'ಮಗಳೆಲ್ಲಿಗೋದ್ಲು?'

'ಆರು ತಿಂಗಳಾಯ್ತು ಅದೆಲ್ಲೋಯ್ತೋ ಗೊತ್ತಿಲ್ಲ'

ವನು ಬಾಯಿ ಬುಟ್ರೆ ಅದ್ಯಾತರದೊ ಮಗ ಅಂತನೆ. ಇಂಘೋರ ಮಾತ ನಚ್ಗಂದು ಸೋಮಶೇಕ್ರ ಸಾಲ ತೀರಸಕ್ಕಾಗದೆ ಕುಮಾರಸ್ವಾಮಿ ಮನೆತಕ್ಕೋದ್ರೆ, ಅಲ್ಯಾರೂ ವಳಿಕೆ ಬುದ್ದಿಲ್ಲ. ಕಡಿಗೆ ದ್ಯಾವೇಗೌಡನ ಮನೆತಕ್ಕೋದ, ಅವುರೂ ವಳಿಕೆ ಬುದ್ದಿಲ್ಲ, ಇನ್ನು ಈ ಧರೆಮ್ಯಾಲಿರದು ಬ್ಯಾಡ ಅಂತ ಮೆಟಾಸಿಡ್ ತಗಂಡ."

"ಅಂಗರೆ ಸತ್ತೋದನೇನ್ನ?"

"ಇಲ್ಲ ಕಣೆ ಬದುಕ್ಯವುನೆ, ಪಾಪ ಗಟ್ಟಿ ಜೀವ ಸಾಲ ತೀರಸದು ಬ್ಯಾಡವೆ? ಅದ್ಕೆ ಉಳಕಂಡವುನೆ. ಆದ್ರೆ ಈ ದ್ಯಾವೇಗೌಡ ಚನ್ನಮ್ಮನಿಗೆ ಇನ್ನ್ಯಾರು ಬಂದ್ರೂ ಮನಿಗೆ ಸೇರಸಬ್ಯಾಡ, ಬಾಗಲನೆ ತಗಿಬ್ಯಾಡ ಅಂದವುನೆ."

"ಅಂಗಂದ್ರೆ ಅದೇನೊ ಅವರ ಸೇಪ್ಟಿ ಅವುರು ಮಾಡಿಕಳ್ಳಿ. ಆದ್ರೆ 'ರೈತರ ಸತ್ರೆ ಸಾಯ್ತರೆ. ನಾವೇನು ಮಾಡನ' ಅಂದವುನಲ್ಲ ಇದಕೇನೇಳ್ತಿಯಾ ಉಗ್ರೀ?" ಎಂದ ವಾಟಿಸ್ಸೆ.

"ಅದ್ಯಾಕಂಗಂದವುನೆ ಗೊತ್ತೇನೊ? ನನ್ನ ಮಗ ಯಾರಾರ ರೈತರು ಸತ್ರೆ ರಾಜೀನಾಮೆ ಕೊಡ್ತಿನಿ ಅಂದಿದ್ದ. ಅಂಗಂದ್ರೂ ಸಾಯ್ತ ನನ್ನ ಮಗನ್ನ ಪರೀಕ್ಷೆ ಮಾಡ್ತರಲ್ಲ ಈ ರೈತರು ಅಂತ ಸಿಟ್ಟು ಬಂದದೆ. ಅದ್ಕೆ ರೈತರು ಸತ್ರೆ ಸಾಯಲಿ ಅಂತ ಹೇಳ್ಯವುನೆ" ಎಂದ ಉಗ್ರಿ. ಆಗ ಕಾಳಮಾವ,

"ನೋಡಿರ್ಲಾ, ಯಾವನೇ ಮನ್ಸ ಸಾಲ ಮಾಡಬೇಕಾದ್ರೆ ತೀರಸೊ ಯೋಚನೆಯ ಮದ್ಲೆ ಮಾಡಿಕಬೇಕು. ಯಾವನು ಸಾಲ ತೀರಸೊ ಯೋಚನೆ ಮದ್ಲೆ ಮಾಡಿರ ಇಲವ್ರೊ ಅವುರ ಹಣೆ ಬರ್‍ಯಲ್ಲ ಹಿಂಗೆಯ" ಎಂದ.

"ನೋಡಪ್ಪ ಉಗ್ರಿ, ಮಾನ್ಯ ದೇವೇಗೌಡರ ಪರ ವಕಾಲತ್ತು ಯಂಗೆ ಬತ್ತಾ ಆದೆ" ಎಂದು ವಾಟಿಸ್ಸೆ ನಕ್ಕ.

"ವಕಾಲತ್ತಲ್ಲ ಕಂಡ್ರ, ನಮ್ಮೂರಿಗೆ ಯರಡು ಟ್ಯಾಗುಟ್ರ ಪಾಕು, ನಾಕ ತಂದು ನಿಲ್ಲಿಸಿಗಂಡವುರೆ. ಇಬ್ಬರಂತೂ ವಾಸು ಮಾಡಿಕತ್ತರೆ. ನವುಲಾಡ್ತದೆ ಅಂತ ಕ್ಯಂಬೂತ ಪುಕ್ಕತರಕಂಡಾಗ ಏನಾಯ್ತದೇ?"

"ಕ್ಯಂಬೂತನಿಗೆ ಸುಗರಿದ್ರೆ ಪುಕ್ಕ ತರಕಂಡ ಜಾಗ ಸೆಪ್ಟಿಕ್ಕಾಗಿ ಪಕ್ಸಿ ಸಾಯ್ತದೆ. ಆದ್ರೆ ದ್ವಡಪ್ಪ, ಬರವಸೆ ಇಟಗಂಡು ಬ್ಯಳದ ಬ್ಯಳೆ ವಣಿಗೋದಾಗ, ರೇಟು ಬಿದ್ದಾಗ, ಅತಿವೃಷ್ಟಿಯಿಂದ ಹಾಳಾದಾಗ, ರೈತ ಸಾಲಕ್ಕೆ ಸಿಗಾಯ್ಕತ್ತನೆ. ಇದ ನೀನು ಅನುಭವಿಸಿ ದೇವೇಗೌಡನಂಗೆ ಮಾತಾಡದು ಅನ್ನ್ಯಾಯ."

" !?" ■

'ಯಾರು ಯಾರು ಬತ್ತಾರೆ ನಿನ್ ಮನ್ಗೆ?'

'ಎಲ್ಲಾ ಜನಾನೂ ಬತ್ತಾರೆ ಕಣದೇವ್ರು'

'ಯಾರಾದ್ರೂ ಗಡ್ಡದೋರು ಬಂದಿದ್ರಾ?'

'ಹೂಂ, ಬಂದಿದ್ರು'

'ಯಾವಾಗ?'


'ಮಗ ಹುಟ್ಟದಾಗ, ನೋಡೋಕೆ ಅಂತ ಬಂದಿದ್ರು'

ಅಂದರೆ, ಮಗು ಹುಟ್ಟುವಾಗಲೇ ಅದಕ್ಕೆ ನಕ್ಸಲೀಯ ದೀಕ್ಷೆ ನೀಡಿದ್ದಾರೆ ಎಂದಾಯಿತು! ಹೀಗೆ ದೀಕ್ಷೆ ನೀಡಿದವ ನಕ್ಸಲೀಯರ ಬೆಂಬಲಿಗನಿರಲೇಬೇಕು! ಅವನ ಹೆಸರು ಪಟ್ಟಿಯಲ್ಲಿ ಸೇರಿತು!

ಹೀಗೆ ಹಲವು ಹೆಸರುಗಳು ಪಟ್ಟಿಯಲ್ಲಿ ಸೇರಿದ್ದು ದರ ಬಿಡುಗಡೆ ಮಾಡಿದ್ದು ಗೃಹ ಮಂತ್ರಿ ಎಂ.ಪಿ. ಪ್ರಕಾಶ್ ಅವರಿಗೆ ತಿಳಿದೇ ಇರಲಿಲ್ಲವಂತೆ! ಇಂತಹ ಪ್ರಮುಖ ಸೂಕ್ಷ್ಮ ವಿಷಯಗಳನ್ನು ಸಂಬಂಧಿಸಿದ ಮಂತ್ರಿಗೆ ತಿಳಿಸದೇ ಪ್ರಕಟಿಸಿದ್ದಾರೆ ಎಂದರೆ ಉದ್ಧಟತನದ ಪರಮಾವಧಿ ದ ಹಾಗೆ ಆಯಿತು. ಇಂತಹವರಿಗೆ ಶಿಕ್ಷೆ ನೀಡಬಾರದೆ ಎಂದು ಕೆಲವರು ಕೇಳುತ್ತಿದ್ದರೆ, ಪಾಪ ನಂ ಪ್ರಕಾಶು ದೆಲ್ಲವನ್ನು ಮರೆತು ಈ ಪಟ್ಟಿಯಲ್ಲಿ ಇರುವ ಎಲ್ಲರನ್ನು ನಕ್ಸಲೀಯರ ಬೆಂಬಲಿಗರು ಎಂದು ಹೇಳುವುದು ತಪ್ಪು; ವರನ್ನು ನಕ್ಸಲೀಯರ ಕುರಿತು ಅನುಕಂಪ ಉಳ್ಳವರು ಎಂದು ಬೇಕಾದರೆ ಕರೆಯಬಹುದು ಎಂದು ಭಾಷಾ ಳಿಕೆ ಕುರಿತು ವ್ಯಾಖ್ಯಾನ ನೀಡಿದ್ದಾರೆ! ಅಂದಮೇಲೆ ನಾಯಿತು ಇನ್ನು ಮುಂದೆ ಸರ್ಕಾರದ ಜನವಿರೋಧಿ ನೀತಿಗಳನ್ನು, ಕೋಮುವಾದಿಗಳ ಕೃತ್ಯಗಳನ್ನು ಪ್ರತಿಭಟಿಸಿದ ರನ್ನು ನಕ್ಸಲೀಯ ಅನುಕಂಪೆಯವರು ಅಂತ ಬಾಯಿ ಟ್ಟಿ ಹಾಕಬಹುದು! ಅಲ್ಲಿ ಈಗಲೇ ನಮ್ಮ ಎಂ.ಪಿ. ಕಾಶ್ ಅವರು ಬಾಯಿಬಿಡಲು ಇಷ್ಟೊಂದು ಕಷ್ಟ ಡುತ್ತಿದ್ದಾರಲ್ಲ, ಒಂದು ವೇಳೆ ಭಾಜಪ ಮುಖ್ಯಮಂತ್ರೀನೆ ರಾಜ್ಯದ ಮೇಲೆ ಅದುಕಿಕೊಂಡರೆ ಬಾಯೀಬಿಡುವು ಲ್ಲವಾ ಅಂತ...

ಜನರ ಬಾಳನ್ನು ಹಸನುಗೊಳಿಸಬೇಕು ಅಂತ ಹೋರಾಟ ಮಾಡುತ್ತಿರುವವರನ್ನೆಲ್ಲ ನಕ್ಸಲೀಯರು ಅಂತ ಪಟ್ಟಿ ಹಚ್ಚುತ್ತಿದ್ದಾರಲ್ಲ... ಅಂದಮೇಲೆ ನಕ್ಸಲೀಯರೆಲ್ಲ ನರ ನೆಮ್ಮದಿಗಾಗಿ ಹೋರಾಡುತ್ತಿರುವವರು ಎಂದು ರ್ಕಾರವೇ ಮನ್ನಣೆ ನೀಡಿದ ಹಾಗಾಯಿತಲ್ಲ... ಒಂದು ಳೆ ಅಂತಹವರೆಲ್ಲ ಸೆರೆಮನೆ ಒಳಗೆ ಇರಬೇಕಾದವರು ದರೆ ಆಚೆ ಇರುವವರು ಯಾರು..... ಜನ ವಿರೋಧಿಗಳಾ.... ■


ಮರೆಯುವ ಮುನ್ನ



ಪಿ. ಲಂಕೇಶ್ ಜನವರಿ 22, 1989

ಶ್ರೀಮಂತಿಕೆ, ಬಡತನ

ಈತ ನಜೀರ್‌ಸಾಬ್ ಜೊತೆಗೇ ಬೆಳೆದವನು. ಸಂಗೀತಗಾರ. ಸಂಗೀತದ ಶಿಕ್ಷಣವನ್ನು ಪೂರ್ಣಗೊಳಿಸಿಕೊಳ್ಳಲಾಗದೆ, ಬದುಕಲು ಸಾಕಷ್ಟು ಗಳಿಸಲಾಗದೆ, ಗೆಳೆಯ ನಜೀರ್ ಮಂತ್ರಿಯಾದಾಗ ಹೆಮ್ಮೆಪಟ್ಟುಕೊಂಡು, ಅಧಿಕಾರಕ್ಕೆ ಬಂದೊಡನೆ ನಜೀರ್ ಅವರಲ್ಲಿ




ಆದ ಬದಲಾವಣೆಗಳನ್ನು ಗಮನಿಸುತ್ತ ವಿಷಾದದ ನಿಟ್ಟುಸಿರುಬಿಟ್ಟ ಮನುಷ್ಯ. ಮೊನ್ನೆ ನಾನು ಯಾವುದನ್ನೂ ಬಚ್ಚಿಟ್ಟುಕೊಳ್ಳುವ ಅವಶ್ಯಕತೆ ಇಲ್ಲವೆಂದು ನಜೀರ್ ಗುಪ್ತವಾಗಿ ಕೊಳೆತು ಹೋದದ್ದರ ಬಗ್ಗೆ ಬರೆದೆ. ಇದಕ್ಕೆ ಕಾರಣ ಕೂಡ ಇತ್ತು. ನಜೀರರ ಮಗ ಅಪ್ಪನ ಹೆಸರಿನಲ್ಲಿ ರಾಜಕೀಯದಲ್ಲಿ ಮೆರೆಯಲು ಹವಣಿಸತೊಡಗಿದ್ದ; ನಜೀರ್ ಪತ್ನಿಯಲ್ಲಿ ಹೊಸ ಹೊಸ ಆಶೆಗಳನ್ನು ಕೆಲವರು ಚಿಗುರಿಸತೊಡಗಿರುವುದು ಗೊತ್ತಾಗಿತ್ತು.

ಈ ಸಂಗೀತಗಾರನಾದ ನಜೀರ್ ಮಿತ್ರ ಮೊನ್ನೆ ಹೇಳಿದ: "ನನ್ನ ಬಾಲ್ಯಮಿತ್ರನಾಗಿದ್ದ ನಜೀರ್ ಅಧಿಕಾರ ಪಡೆವ ಮುನ್ನ ನಮ್ಮೆಲ್ಲರೊಂದಿಗೆ ಸರಳವಾಗಿದ್ದ, ಶ್ರೀಮಂತನಾಗಿದ್ದ. ಅವನಲ್ಲಿದ್ದುದು ಹಣವಲ್ಲ, ಆಸ್ತಿಯಲ್ಲ, ಹೃದಯಶ್ರೀಮಂತಿಕೆ. ನಕ್ಕುನಲಿಯಬಲ್ಲ, ಸಮಾಜದ ಅನ್ಯಾಯಗಳ ವಿರುದ್ಧ ಸಿಡಿದೇಳಬಲ್ಲ ನಜೀರ್‌ನ ಹೃದಯ್ಯ ಶ್ರೀಮಂತಿಕೆ ನಮ್ಮೆಲ್ಲರನ್ನು ಮಂತ್ರಮುಗ್ಧರನ್ನಾಗಿಸಿತ್ತು. ಆದರೆ ಅಧಿಕಾರಕ್ಕೆ ಬಂದ ನಜೀರ್ ನಮ್ಮೊಂದಿಗೆ ಮಾತಾಡುವಾಗಲೆಲ್ಲ ಅಳುಕು ಅನುಭವಿಸುತ್ತಿದ್ದ, ಮೋಸ ಮಾಡುವವನಂತಿದ್ದ. ಹಣ ಬಂತು, ದೊಡ್ಡ ದೊಡ್ಡ ಗೆಳೆಯರು ದೊರೆತರು. ಆತ ಸಾಯುವಷ್ಟರಲ್ಲಿ ನಿಜಕ್ಕೂ ದಾರಿದ್ರ್ಯದಲ್ಲಿ ಸತ್ತ. ನಾನು ಹೇಳುತ್ತಿರುವುದು ಹೃದಯದ ಬಡತನದ ಬಗ್ಗೆ."

ಇಡೀ ಮಾತು ದೀರ್ಘ ನಿಟ್ಟುಸಿರಿನಂತಿತ್ತು.

ಸಂಗೀತಗಾರ



'ಗಾಂಧಿ' ಚಿತ್ರದಲ್ಲಿ ಗಾಂಧೀಜಿಯ ಪಾತ್ರ ಮಾಡಿದ ಬೆನ್ ಕಿಂಗ್‌ಸ್ಲೆ ಈಚೆಗೆ ಸಂಗೀತಗಾರನೊಬ್ಬನ ಪಾತ್ರ ಮಾಡಿದ್ದಾನೆ. ಸಂಗೀತಗಾರನ ಹೆಸರು ಶೋಸ್ಟ ಕೋವ್‌ಸ್ಕಿ. ರಷ್ಯನ್ ಸಂಗೀತಗಾರ; ಸ್ಟಾಲಿನ್‌ನ ಸರ್ವಾಧಿಕಾರ ಕಾಲದಲ್ಲಿ ಜೀವಿಸಿದ್ದ ಆಸ್ಥಾನದ ಸಂಗೀತಗಾರ, ಕಮ್ಯುನಿಸ್ಟ್ ಕಂಪೋಸರ್ ಅನ್ನಿಸಿಕೊಂಡವನು. ಈತ ಆಳದಲ್ಲಿ ದೊಡ್ಡ ಸಂಗೀತಗಾರ, ಆದರೆ ಸರ್ವಾಧಿಕಾರಿ ಸ್ಟಾಲಿನ್‌ಗೆ ಹೆದರಿಕೊಂಡು ದೇಶ ಪ್ರೇಮದ ಗೀತೆಗಳನ್ನು, ಸೈನ್ಯದ ಹಾಡುಗಳನ್ನು ಬರೆದವನು. ಹಾಗೆಯೇ ಕಳ್ಳತನದಲ್ಲಿ ತನಗೆ ಪ್ರಿಯವಾದ, ತನ್ನ ಪ್ರತಿಭೆಗೆ ತಕ್ಕುದಾದ ಸಂಗೀತ ರಚಿಸಿದ ಈತ. ಈತನ ಅತ್ಯುತ್ತಮ ಸಂಗೀತ ಎಲ್ಲ ದಬ್ಬಾಳಿಕೆಯ ದಡ್ಡ ಕಣ್ಣುಗಳಿಗೆ ಬೀರದಷ್ಟು ಸೂಕ್ಷ್ಮವಾಗಿತ್ತು, ಸಂಕೀರ್ಣವಾಗಿತ್ತು.

ಈ ಶೋಸ್ಟಕೋವ್‌ಸ್ಕಿ ಮತ್ತು ಸ್ಟಾಲಿನ್ ನಡುವಿನ ಘರ್ಷಣೆ ವಿಚಿತ್ರ; ಸಿನಿಮಾದಲ್ಲಿ ಸ್ಟಾಲಿನ್ ಈತನಿಗೆ ಹೇಳುತ್ತಾನೆ: ನಾನು ರೂಪಿಸಿದ ಸಂಗೀತಗಾರ ನೀನು; ನನ್ನ ಭಯ ಇಲ್ಲದಿದ್ದರೆ ನೀನು ನಿನ್ನ ಸಂಗೀತವನ್ನೇ ರಚಿಸುತ್ತಿರಲಿಲ್ಲ, ನಾನಿಲ್ಲದಿದ್ದರೆ ನಿನ್ನ ಸಂಗೀತ ಅದರ ಸಂಕೀರ್ಣತೆ ಮತ್ತು ಅರ್ಥವನ್ನು ಪಡೆಯುತ್ತಿರಲಿಲ್ಲ.

ಚಿತ್ರಕಾರರು, ಸಂಗೀತಗಾರರು ಸುಲಭವಾಗಿ ತಪ್ಪಿಸಿಕೊಳ್ಳಬಲ್ಲರು. ಆದರೆ ಸಾಹಿತಿಗಳು? ಇವರಿಗೆ ಸ್ವಾತಂತ್ರ್ಯ ಅಥವಾ ಬಂಧನ ಹೇಗಿರುತ್ತದೆ? ಇಲ್ಲಿ ಕೂಡ ಮಿತಿ ಇಲ್ಲದ ಸ್ವಾತಂತ್ರ್ಯ ಸಾಹಿತಿಯನ್ನು ಜಡವಾಗಿಸಬಲ್ಲದು; ಮಿತಿ ಇಲ್ಲದ ದಬ್ಬಾಳಿಕೆ ನಾಶಮಾಡಬಲ್ಲದು. ಎಲ್ಲ ಸ್ವಾತಂತ್ರ್ಯದ ನಡುವೆ ಸಾಹಿತಿ ಬಂಧಗಳನ್ನ, ಕಟ್ಟುಪಾಡುಗಳನ್ನ, ಅಂತರ್ಯದ ಶಿಸ್ತನ್ನ ಬೆಳೆಸಿಕೊಳ್ಳಬೇಕಾಗುತ್ತದೆ. ಹಾಗೆಯೇ ದಬ್ಬಾಳಿಕೆಯ ಕಣ್ಣುತಪ್ಪಿಸಿ ಸೂಕ್ಷ್ಮವಾಗಬೇಕಾಗುತ್ತದೆ.

ಸುಮಾರು ಹತ್ತುಸಾವಿರ ಜನ ಸೂಕ್ಷ್ಮಜ್ಞರು ಇಂಡೋನೇಶಿಯಾದಲ್ಲಿ ಕಳೆದ ಹನ್ನೆರಡು ವರ್ಷದಿಂದ ಜೈಲಿನಲ್ಲಿದ್ದಾರೆ.

ದಿಗ್ಭ್ರಮೆಗೊಂಡ ಹಿಂದುಳಿದವರು



ಮಡಿವಾಳ ಸಂಘದ ತರುಣರು ನನ್ನನ್ನು ನೋಡಲು ಬಂದಿದ್ದರು. ಅಗಸರು, ಡೋಬಿಗಳು ಎಂದೂ ಕರೆಯಲ್ಪಡುವ ಮಡಿವಾಳರು ತುಂಬ ಹಿಂದುಳಿದ ಜನ. ಇವರನ್ನು ಸಂಘಟಿಸುವುದೂ ಕಷ್ಟ. ಉದಾಹರಣೆಗೆ ನಮ್ಮೂರಲ್ಲಿ ಇದ್ದ ಅಗಸರ ಕುಟುಂಬಗಳು ಮೂರು. ಕರ್ನಾಟಕದ 27,000 ಹಳ್ಳಿಗಳಲ್ಲಿ ಹಂಚಿಹೋಗಿರುವ ಜನ ಇವರು. ಇವರ ಬೇಡಿಕೆಗಳು ಎರಡು, "ಮಡಿವಾಳರ ಉದ್ಯೋಗಕ್ಕೆ ಪ್ರೋತ್ಸಾಹ ನೀಡಿ, ನಮ್ಮನ್ನು ಪರಿಶಿಷ್ಟ ಗುಂಪಿಗೆ ಸೇರಿಸಿ."

ಆದರೆ ಇವರಲ್ಲೊಬ್ಬರು ಹೇಳಿದರು, "ಸರ್, ಇದೆಂಥ ಕ್ಲಿಷ್ಟ ಸಮಾಜ! ನನ್ನ ತಂದೆ ನಮ್ಮ ಜಾತಿಯ ಚರಿತ್ರೆ, ಪುರಾಣವನ್ನೆಲ್ಲ ಹೇಳಿ 'ನಾವು ಹರಿಜನರ ಜೊತೆ ಸೇರೋದು ಬೇಡ' ಎಂದು ಪ್ರತಿಭಟಿಸ್ತಾನೆ. ಎಷ್ಟು ಹೇಳಿದರೂ ಅರ್ಥವಾಗೋಲ್ಲ."


"ಅದು ಸರಿ, ಅಗಸರ ಉದ್ಯೋಗ ಈಗ ನಿಜಕ್ಕೂ ಲಾಭದಾಯಕವಾಗಿದೆಯೆ?" ಅಂದೆ.

"ಇಲ್ಲ, ಆದರೆ ಅನೇಕರು ಅದನ್ನೇ ಅವಲಂಬಿಸಿದ್ದಾರೆ. ಹಳೆಯ ತಲೆಮಾರಿನವರು ಈ ಬಟ್ಟೆ ಒಗೆಯುವ ಕೆಲಸ ನೆಮ್ಮದಿಯಿಂದ ಮಾಡುವಂತೆ ಆಗಬೇಕು."

ನಾನು ನಕ್ಕು, "ಒಳ್ಳೆ ತಮಾಷೆ ಕಂಡ್ರಿ! ಎಷ್ಟೋ ವರ್ಷದಿಂದ ನಾನು ಬಟ್ಟೆಯ ಮೂಟೆ ಹೊತ್ತ ಕತ್ತೆಗಳನ್ನೇ ನೋಡಿರಲಿಲ್ಲ. ಮೊನ್ನೆ ಮೈಸೂರಲ್ಲಿ ನೋಡಿ ನಗುತ್ತ ನಿಂತೆ. ಎಷ್ಟು ವಸ್ತುನಿಷ್ಠವಾಗಿ, ತಣ್ಣಗೆ, ಒಂದೇ ವೇಗದಲ್ಲಿ, ಯಾವ ತಕರಾರೂ ಇಲ್ಲದೆ ಗುಂಪಾಗಿ ಹೋಗ್ತಿದ್ದವು! ಈ ಕತ್ತೆಗಳನ್ನು ಬೈಗುಳಕ್ಕೆ ಮಾತ್ರ ಬಳಸುವ ಜನ ನಿಜವಾದ ಕತ್ತೆಗಳನ್ನು ಗಮನಿಸಿಯೇ ಇರೋಲ್ಲ..." ಅಂದೆ.

ಮಡಿವಾಳರ ಹುಡುಗರು ನಕ್ಕು ಬೇರೆ ಬೇರೆ ವಿಷಯ ಮಾತಾಡಿದರು. ಪುಢಾರಿಗಳ ಸಂಗವಿಲ್ಲದ, ಪರಂಪರಾಗತ ಸುಲಿವ ರಾಜಕಾರಣಿಗಳ ಸಹವಾಸ ಬಯಸದ ಇವರು "ನಾವು ಕೇವಲ ಮಡಿವಾಳರಲ್ಲ, ಹಿಂದುಳಿದವರ ಸಂಕೇತಗಳು. ನಾವು ಸದ್ಯದಲ್ಲೇ ಒಂದು ಹಿಂದುಳಿದವರ ಸಮ್ಮೇಳನ ಮಾಡ್ತಿದ್ದೇವೆ. ಅಲ್ಲಿ ನಮ್ಮ ಮುಂದಾಳುಗಳ ಮೂಲಕ ಹಿಂದುಳಿದವರನ್ನು ದಿಕ್ಕು ತಪ್ಪಿಸುವ ರಾಜಕಾರಣಿಗಳ ಬಗ್ಗೆ ಮಾತಾಡ್ತೇವೆ. ನೀವು ಬೆಂಬಲ ಕೊಡಬೇಕು" ಅಂದರು.

ಅಸಿಮೊವ್



ಬಹಳ ದಿನದಿಂದ ಬರೆಯಬೇಕೆಂದು ಇಟ್ಟುಕೊಂಡಿದ್ದ ಇನ್ನೊಂದು ವಿಷಯವನ್ನು ಈಗಲೇ ಬರೆದುಬಿಡುತ್ತೇನೆ. ಇದು ಒಬ್ಬ ವಿಚಿತ್ರ ಸಾಹಿತಿಯ ಬಗ್ಗೆ. ಈತ ವಿಜ್ಞಾನ, ಕಲೆ, ಮನಶ್ಶಾಸ್ತ್ರ, ಪತ್ತೆದಾರಿ, ಮಾರ್ಗದರ್ಶನದ ಪುಸ್ತಕಗಳನ್ನೆಲ್ಲ ಬರೆದಿದ್ದಾನೆ. ಈಗ ಐನೂರನೇ ಪುಸ್ತಕ ಬರೆಯುತ್ತಿರುವ ಈ ಅಮೆರಿಕನ್ ಜನಪ್ರಿಯ ಲೇಖಕನ ಹೆಸರು ಐಸಾಕ್ ಅಸಿಮೊವ್. ಎಪ್ಪತ್ತು ವರ್ಷ ಮುಟ್ಟುತ್ತಿರುವ ಅಸಿಮೊವ್ ಈಗ ಐನೂರು ಪುಸ್ತಕಗಳ ಕರ್ತೃ. ವಿಮಾನಗಳು ಹಾರುವ ತಂತ್ರದ ಬಗ್ಗೆ ಸರಳವಾಗಿ ಬರೆದಿರುವ ಈತ ವಿಮಾನ ಹತ್ತಿರುವುದು ಒಂದೇ ಸಲ. ಜಗತ್ತಿನ ಎಲ್ಲಾ ಮುಖಗಳನ್ನು ಕುರಿತು ಬರೆದಿರುವ ಈತ ತನ್ನ ನ್ಯೂಯಾರ್ಕ್ ನಗರದಿಂದ ಇನ್ನೂರು ಮೈಲಿಯಾಚೆ ಹೋಗಿಲ್ಲ.

ಈತ ಹೇಳಿದ್ದು: "ಒಂದಾನೊಂದು ಕಾಲಕ್ಕೆ ಮನುಷ್ಯ ದೆವ್ವ, ಭೂತ, ಪಿಶಾಚಿಗಳಲ್ಲಿ ನಂಬಿಕೆ ಇಟ್ಟು ಭಯಗೊಳ್ಳುತ್ತಿದ್ದ. ಈಗ ಅವೆಲ್ಲ ಇಲ್ಲವೆಂದು ವಿಜ್ಞಾನ ಸಾಕ್ಷ್ಯಾಧಾರ ಸಮೇತ ತಿಳಿಸಿದೆ. ಮನುಷ್ಯ ಈಗ ನಿಜವಾದ ಕೇಡು ಮತ್ತು ಕೇಡಿಗಳ ವಿರುದ್ಧ ಹೋರಾಡಬೇಕಾಗಿದೆ."

"ಭೂಮಿ ಮಲಿನಗೊಳ್ಳುತ್ತಿದೆ. ಆಧುನಿಕ ಯಂತ್ರಗಳ ಹೊಗೆ, ಧೂಳು, ಕಸ ಎಲ್ಲೆಲ್ಲೂ ತುಂಬುತ್ತಿದೆ. ಮರಗಳನ್ನು ಬೆಳೆಯೋಣ. ಸುತ್ತುವರಿಯುತ್ತಿರುವ ವಿಷದ ಬಗ್ಗೆ ಎಚ್ಚರ ವಹಿಸೋಣ."

"ಜನಸಂಖ್ಯೆ ಹೆಚ್ಚುತ್ತಿದೆ. ಈ ಬಗ್ಗೆ ಎಚ್ಚರ ವಹಿಸಬೇಕು. ಆದರೆ ಮನುಷ್ಯ ಚಂದ್ರಲೋಕವನ್ನು ಆಕ್ರಮಿಸಬಲ್ಲ..."

"ಒಂದಾನೊಂದು ಕಾಲಕ್ಕೆ ಶೇ.95 ಭಾಗ ಜನ ಆಹಾರದ ಉತ್ಪಾದನೆಯಲ್ಲಿ, ಕೃಷಿಯಲ್ಲಿ, ಅದಕ್ಕೆ ಸಂಬಂಧಿಸಿದ ಉದ್ಯೋಗದಲ್ಲಿ ಇದ್ದರು. ಆಗ ಭವಿಷ್ಯದಲ್ಲಿ ಜನ ಗಗನಸಖಿಯರು, ಲೆಕ್ಕಿಗರು, ಕಂಪ್ಯೂಟರ್‌ನವರು, ದೂರದರ್ಶನದ ಛಾಯಾಗ್ರಾಹಕರು, ನಟಿಯರು ಮುಂತಾದವರು ಹುಟ್ಟಿಕೊಳ್ಳಬಹುದೆಂದು ಹೇಳಿದರೆ ನಂಬುವವರೇ ಇರಲಿಲ್ಲ. ವಿಚಿತ್ರವೆಂದರೆ, ಚರಿತ್ರೆ ಬಲ್ಲವನೇ ಭವಿಷ್ಯದ ಬಗ್ಗೆ ಕರಾರುವಾಕ್ಕಾಗಿ ಮಾತಾಡಬಲ್ಲ..."

ತುಂಟಾಟ ಕಲಿಸಿದವಳೇ ತುಂಟಾಟಕ್ಕೆ ನಾಚುತ್ತಾಳಲ್ಲಾ?

ಕಣ್ಣಾ ಮುಚ್ಚಾಲೆ

ಎಸ್. ಶಶಿಧರ್, ದಾವಣಗೆರೆ
ಬಸವಣ್ಣ ಬ್ರಾಹ್ಮಣನಾದ್ರೇನು, ಮಾದಿಗನಾದ್ರೇನು. ಈ ಕುರಿತ ಚರ್ಚೆಯಿಂದೇನು ಲಾಭ?
◆ ಭ್ರಷ್ಟಗೊಂಡಿರುವ ಮನಸುಗಳ ಮುಖವಾದ ಭಂಗ!

ಕುತುಬುದ್ದೀನ್ ಎಸ್. ತಿರಹಟ್ಟಿ, ಗೋಕಾಕ
ಅಪರಾಧಿಗಳಿಗೆ ಮಂಪರು ಪರೀಕ್ಷೆ ಮಾಡುವ ಹಾಗೆ ರಾಜಕಾರಣಿಗಳಿಗೂ ಮಾಡಿದರೆ?
◆ ಒಂದು ಕಾಯಿದೆ ತಂದು ಆ ಪರೀಕ್ಷೆಯನ್ನೇ ಬ್ಯಾನ್ ಮಾಡುತ್ತಾರೆ.

ಡಿ.ಎಲ್. ಶ್ವೇತಾ, ಹರಪನಹಳ್ಳಿ
ನಕ್ಸಲೈಟರ ಪಟ್ಟಿಯಲ್ಲಿ ಗೃಹಮಂತ್ರಿಯ ಗೆಳೆಯರ ಹೆಸರು ಇದೆಯಲ್ಲಾ?
◆ ಸದ್ಯ ತಮ್ಮ ಹೆಸರನ್ನೂ ಸೇರಿಸಿಲ್ಲ ಎಂದು ಪ್ರಕಾಶರೇ ನಿಟ್ಟುಸಿರು ಬಿಡುತ್ತಿದ್ದಾರಂತೆ.



ಎಂ.ಉಮಾ ಗುರುರಾಜಚಾರು, ಸಂಗನಕಲ್ಲು
ಕಲ್ಲು ಹಾಕಿ ನೀರಿನ ಆಳ ತಿಳಿಯಬಹುದು, ... ಹಾಕಿ ಪ್ರೀತಿಯ ಆಳ ತಿಳಿಯಬಹುದೇ?
◆ ಲೈನ್ ಹಾಕಿ ಆಳ ಇಲ್ಲದಿರುವುದನ್ನೂ ಗೊತ್ತು ಮಾಡಬಹುದು.

ಆ.ರಾ.ಮಂಜುನಾಥ್, ಗೆದರೆ
ಹೊಕ್ಕಳ ಕಾಣಿಸುವಂತೆ ಆಂಟಿಯರು ಸೀರೆ ಉಡುವುದರಿಂದ ಸೊಂಟಕ್ಕಷ್ಟನಾ? ಸೀರೆಗಿಷ್ಟಾನಾ?
◆ ಕಾಲಿಗೆ ತೊಡರುವುದರಿಂದ ತುಂಬಾ ಸಂಕಷ್ಟ.

ತೂರಗಲ್ಲ ಉಮೇಶ್, ರಾಮದುರ್ಗ
ಜಯಲಲಿತಾರಂತಹ ತೂಕದ ವ್ಯಕ್ತಿಯನ್ನು ರಾಷ್ಟ್ರಪತಿ ಮಾಡಿದರೆ?
◆ 'ಹಸಿವೆ'ಯನ್ನು ತಾಳಲಾರದೇ ದಿವಂಗತರಾಗುತ್ತಾರೆ.

ಗಾನಾಸುಮಾ, ಪಟ್ಟಸೋಮನಹಳ್ಳಿ
ಯಡ್ಡಿ ಬುಡಕ್ಕೆ ದೇವೇಗೌಡರೇ ಕೊಡಲಿಯಂತೆ?
◆ ಅದಕ್ಕೇ ಈಗಾಗಲೇ ಸಪಾಟ್ ಲೋಷನ್ ನಂತಾಗಿರುವುದು.

ಅಕ್ಕಿ ಕೊಟ್ರೇಶ, ಉಪನಾಯಕನಹಳ್ಳಿ
ಪಾರ್ಕುಗಳು ಇರೋದು ಪ್ರೇಮಿಗಳಿಗೆ, ಬಾರ್‌ಗಳು ಇರುವುದು?
◆ ಭಗ್ನ ಪ್ರೇಮಿಗಳಿಗೆ.

ಡಿ.ಎಲ್. ಸುರೇಶ್, ಹರಪನಹಳ್ಳಿ
ಮುಂಗಾರು 'ಮಳೆ'ಗೂ ಶಿವಾಜಿ 'ಸಿಡಿಲಿ'ಗೂ ಏನು ಅಂತರ?
◆ ಎರಡಕ್ಕೂ ಜನ 'ಬಲಿ'.

ಡಿ.ರಾಗಿಣಿ, ದೇವದುರ್ಗ
ಕಲಾಂ ಸಾಹೇಬರು ಇಡೀ ದೇಶಕ್ಕೆ ಪಾಠ ಮಾಡಿದರೆ?
◆ ಹ್ಞೂ... ಪಾಠ ಮಾಡುತ್ತಾ ಬೋರ್ ಹೊಡೆಸಿದರು.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಮಲಗಬೇಕಾದರೆ ಇರುವ ಸಂತೋಷ ಏಳುವಾಗ ಇರದಿರಲು ಕಾರಣ?
◆ ಕನಸುಗಳ ಮರ್ಮವೇ ಅದು.

ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ
ಬೇಡಿಕೆ ಇಲ್ಲದ ಜಿಲ್ಲೆಗಳು ರಚನೆಯಾಗಿದೆಯಲ್ಲಾ?
◆ ಕುಮಾರಸ್ವಾಮಿಯ ಮ್ಯಾಜಿಕ್.

ಬಸವರಾಜ್ ಹೂಗಾರ್, ಸವದತ್ತಿ
ಹೆಣ್ಣಿನಲ್ಲಿ ಅತ್ಯಂತ ಆಕರ್ಷಕವಾದದ್ದು ಯಾವುದು?
◆ ಕಂಡದ್ದು ಕಂಡಹಾಗೆ.

ಕೆ.ಸಿ. ರತೀಶ್, ಬೆಂಗಳೂರು
ರವಿಶಂಕರ್ ಜೊತೆಯಲ್ಲಿ ವೀರೇಂದ್ರ ಹೆಗ್ಗಡೆ ಸ್ವರ್ಗಕ್ಕೆ ಹೋದರೆ?

ಬಹುಮಾನಿತ ಪ್ರಶ್ನೆ

ಅಬ್ದುಲ್ ರಜಾಕ್, ದೇವದುರ್ಗ
ತುಂಟಾಟ ಕಲಿಸಿದವಳೆ ತುಂಟಾಟಕ್ಕೆ ನಾಚುತ್ತಾಳಲ್ಲಾ?
◆ "ಬ್ಯಾಡ್ ಟೀಚರ್" ಎಂದು ಆಕೆಯ ಕ್ಲಾಸ್‌ಗಳಿಗೆ ಬಹಿಷ್ಕಾರ ಘೋಷಿಸಿ!

◆ ಅಲ್ಲೂ ವರ್ಗಭೇದ, ಪಂಕ್ತಿಭೇದ ಶುರುವಾಗುತ್ತೆ.

ಎಂ.ಕೆ. ರವಿಕಾಂತ, ತುಮಕೂರು
ಕರುಣಾನಿಧಿ ಅಭಿಮಾನಿಯೊಬ್ಬ ಅವರ ಬರ್ತ್‌ಡೇಗೆ ಮೇಕೆಯನ್ನು ಗಿಫ್ಟಾಗಿ ಕೊಟ್ಟನಂತಲ್ಲ?
◆ ಆದು ಎಲ್ಲವನ್ನೂ ಮೇಯುವುದರ ಸಂಕೇತವಾಗಿದ್ದರಿಂದ ಇರಬಹುದೇ?

ಆರ್. ಶರತ್‌ಚಂದ್ರ, ಮೈಸೂರು
ತುಂಟಾಟವಾಡಲು ಇರಲೇಬೇಕಾದ ಅರ್ಹತೆಯೇನು?
◆ 'ಜೀವನೋತ್ಸಾಹ.

ಮಂಚಾಲಿ ಗುರುರಾಜಚಾರು, ಬಳ್ಳಾರಿ
ನಿನ್ನೆ ರೆಡ್ಡಿ ಸಿಡಿ, ಇವತ್ತು ಜಯಲಕ್ಷ್ಮಿ ಸಿಡಿ, ನಾಳೆ.....?
◆ ದಿ.ಕೆ. ಪ್ರೊಡಕ್ಷನ್‌ನವರಿಂದ 'ಮಂಗಳೂರು ಮಲ್ಲಿಗೆ''.

ಬಿ.ಎನ್. ಗಿರಿಜ, ಮೈಸೂರು
ವಯಸ್ಕರ ಚಲನಚಿತ್ರಗಳನ್ನು ಹೆಚ್ಚಾಗಿ ಹದಿವಯಸ್ಸಿನ ಹುಡುಗರೇ ನೋಡುತ್ತಾರಲ್ಲಾ?
◆ ಅದಕ್ಕೆ ಈಗ 'A' ಸರ್ಟಿಫಿಕೇಟ್ ಪಡೆಯಲು ಗಾಂಧಿನಗರದಲ್ಲಿ ಪೈಪೋಟಿ ನಡೆಯುತ್ತಿದೆಯಂತೆ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:
ಆತ್ಮಹತ್ಯೆ ಮಾಡಿಕೊಂಡು ದೇವೇಗೌಡರ ಕುಟುಂಬವನ್ನು ಪೀಡಿಸುತ್ತಿರುವ ರೈತರಿಗೆ ಯಾವ ಶಿಕ್ಷೆ ನೀಡಬೇಕು?

ಜೂನ್ 27ರ ಸಂಚಿಕೆಯ ನಮ್ಮ ಪ್ರಶ್ನೆ: ಕಾವೇರಿ ವಿವಾದ ಬಗೆಹರಿಯದೆ 'ಶಿವಾಜಿ' ಚಿತ್ರ ಬಿಡುಗಡೆಯಾದದ್ದು ಹೇಗೆ?


ನಿಮ್ಮ ಉತ್ತರ: ಎಲ್ಲಾ ನಮ್ಮೊಳಗಿನ ಕಳ್ಳರ ಮಹಿಮೆ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಶರತ್. ಎಚ್.ಕೆ., ಹಾಸನ

ಕೊನೆಯವರೆಗೂ ಹೋರಾಡಿದ ರಾಮದಾಸ್

ತೆ ಹೊಗಳಿಕೆ ಆ ಕೆ

ಕೆ. ರಾಮದಾಸ್‌ರವರು ನಿಧನ ಹೊಂದಿದ ಸುದ್ದಿಯನ್ನು ಯಾಕೋ ಅರಗಿಸಿಕೊಳ್ಳಲಾಗುತ್ತಿಲ್ಲ. ಲಂಕೇಶ್ ಓದುಗರಾದ ನಮಗೆ ಕೆ. ರಾಮದಾಸ್‌ರವರೆಂದರೆ ದಣಿವರಿಯದ ಹೋರಾಟಗಾರ ಎಂದೇ ಪರಿಚಿತ. ಮೇಷ್ಟ್ರು ಹೇಳಿದಂತೆ ತನ್ನ ಸುತ್ತಲೂ ಅನ್ಯಾಯ ನಡೆಯುತ್ತಿದ್ದರೆ, ಅದರ ವಿರುದ್ಧ ಧಿಕ್ಕಾರ ಕೂಗಿ, ಪ್ರತಿಭಟಿಸದಿದ್ದರೆ ನಾವು ಬದುಕಿದ್ದೂ ಏನೂ ಪ್ರಯೋಜನವಿಲ್ಲ. ಆ ನುಡಿಯನ್ನು ಚಾಚೂತಪ್ಪದೆ ಪಾಲಿಸಿದವರು ಕೆ. ರಾಮದಾಸ್ ಅಂದರೆ ಅತಿಶಯೋಕ್ತಿಯೇನಲ್ಲ. ಕೊನೆಯವರೆಗೂ ಹೋರಾಟ ಮಾಡಿಕೊಂಡೇ ಬಂದವರು ಅವರು. ಇನ್ನು ಮುಂದೆ ಲಂಕೇಶ್ ವಿಶೇಷಾಂಕದಲ್ಲಿ, ವಿಶೇಷ ಸಂದರ್ಭದಲ್ಲಿ ಕೆ. ರಾಮದಾಸ್‌ರವರ ಬರವಣಿಗೆಯನ್ನು ಮಿಸ್ ಮಾಡಿಕೊಳ್ಳಲಿದ್ದೇವೆ.



ಕೆ. ರಾಮದಾಸ್‌ರವರ ನಿಧನದೊಂದಿಗೆ ಎಲ್ಲಾ ಪ್ರಗತಿಪರ, ಜನಪರ, ಜೀವನ ಹೋರಾಟಕ್ಕೆ ತುಂಬಾ ಹಿನ್ನಡೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಕೆ. ರಾಮದಾಸ್‌ರವರಿಗೆ ಹೃದಯಪೂರ್ವಕ ನಮನಗಳು.

-ಸುಲೈಮಾನ್ ಮತ್ತು ಬಾಬು, ಸುಬ್ರಾಯಪಟ್ಟಣ

ಮಂಡ್ಯ ನೀರಾವರಿ ಪ್ರದೇಶಗಳಲ್ಲಿ ರೈತರ ಆತ್ಮಹತ್ಯೆಗಳ ಕುರಿತು ನಮ್ಮ 'ಲಂಕೇಶ್' (ಜೂನ್ 27) ನಲ್ಲಿ ಓದಿ ವ್ಯವಸ್ಥೆಯ ಬಗ್ಗೆ ಬೇಸರವಾಯಿತು. ಪೊಳ್ಳು ಭರವಸೆ, ಆಶ್ವಾಸನೆಗಳಿಗಿಂತ ಬೆಂಬಲ ಬೆಲೆ, ಮಾರುಕಟ್ಟೆ ವ್ಯವಸ್ಥೆ ಮಧ್ಯವರ್ತಿಗಳ ನಿರ್ನಾಮ, ಉತ್ತಮ ಬೀಜಗಳ ಪೂರೈಕೆ ಮುಂತಾದವುಗಳು ಅನ್ನದಾತರಿಗೆ ಅವಶ್ಯ.

ಮಂಡ್ಯ ಜನ ಕಬ್ಬು ರಾಗಿ, ಭತ್ತದ ಜೊತೆಗೆ ಸಣ್ಣ-ಪುಟ್ಟ ಆರ್ಥಿಕ ಮೂಲಗಳಾದ ಮನೆಗೆ ಹಾಲು-ಮೊಸರು ನೀಡುವ ಎಮ್ಮೆ-ಹಸು, ನಾಲ್ಕಾರು ಕೋಳಿ, ಒಂದೆರಡು ಆಡು-ಕುರಿ ಜೊತೆಗಿರಲಿ. ಯಾವುದೇ ಖರ್ಚಿಲ್ಲದೆ ಅಲ್ಲಿ-ಇಲ್ಲಿ ಮೇಯ್ದು ಆದಾಯ ತರುವ ಇವು ರೈತರ ಕೈ ಸಾಲಗಳನ್ನು ನಿಯಂತ್ರಿಸುತ್ತವೆ. ಚಿಕ್ಕ-ಚಿಕ್ಕ ಸಾಲಗಳು ನಾಳೆ ದೊಡ್ಡದಾಗಿ ನೇಣಿಗೆ ಹಗ್ಗವಾಗುವುದಿಲ್ಲವೇ? ಜೊತೆಗೆ ನಗರ ಪ್ರದೇಶಗಳಲ್ಲಿ ರೈತಮಕ್ಕಳ ಗುಲಾಮಗಿರಿ ತಪ್ಪುತ್ತದೆ.

ಬೆಳೆಗೆ ಹೆಚ್ಚು ಹಣದ ರಾಸಾಯನಿಕ ಗೊಬ್ಬರ ಬಳಸಿ ತಿನ್ನುವ ಬದಲು ಕೊಟ್ಟಿಗೆ ಗೊಬ್ಬರದೊಂದಿಗೆ ಕಡಿಮೆ ಖರ್ಚಿನ ನೈಸರ್ಗಿಕ ಕೃಷಿ ಅಳವಡಿಸಿ ಕೊಳ್ಳಬೇಕಿದೆ. ಅದರ ಬದಲಾಗಿ ಆತ್ಮಹತ್ಯೆಯತ್ತ ಸಾಗಿದರೆ ಸಾಧಿಸುವುದಾದರೂ ಏನು? ಸರ್ಕಾರದ ಪರಿಹಾರ ಏನೇನೂ ಸಾಕಾಗುವುದಿಲ್ಲ! ಉಳಿದ ಸಾಲಗಳು ಬದುಕಿರುವವರ ಜೀವ ಹಿಂಡುವುದಿಲ್ಲವೇ? ಇದು ಸಾಮಾನ್ಯ ರೈತ ಮಗನ ಸರಳ ಅನಿಸಿಕೆ.

-ಡಿ.ಎಲ್. ಮಂಜು, ಕೇರಳ

ಕನ್ನಡನಾಡಿನ ಮಹಾನ್ ಕ್ರಾಂತಿಕಾರಿ ಬಸವಣ್ಣನವರ ನಿಜವಾದ ತತ್ವಾದರ್ಶಗಳನ್ನು ಮರೆತು, ಆಚರಣೆಗಳನ್ನು ಮಾತ್ರ ವೈಭವೀಕರಿಸುತ್ತಿರುವ ಇಂದಿನ ಬಸವಾನುಯಾಯಿಗಳು "ಬಸವಣ್ಣ ಹುಟ್ಟನಿಂದ ಮಾದಿಗರಾಗಿರಲು ಸಾಧ್ಯವೇ ಇಲ್ಲ" ಎಂದು ಅರಚಾಡುತ್ತಿರುವುದು ಅವರ ಜಾಯಮಾನಕ್ಕೆ ತಕ್ಕಂತೆಯೇ ಇದೆ. "ಬುದ್ಧಿವಂತ ಶೂದ್ರರು ಮತ್ತು ದಲಿತರೆಲ್ಲಾ ಬ್ರಾಹ್ಮಣರಿಗೇ ಹುಟ್ಟಿರುವುದು" ಎಂಬ ಬ್ರಾಹ್ಮಣರ ವಿಕೃತ, ಅಸಹ್ಯವಾದವನ್ನೇ ನಂಬಿರುವ ಇವರಿಂದ, "ಬಸವಣ್ಣ ಹುಟ್ಟನಿಂದ ಮಾದಿಗನಾಗಿರುವ ಸಾಧ್ಯತೆ ಇದೆ" ಎಂಬ ಸತ್ಯವನ್ನು ಅರಗಿಸಿಕೊಳ್ಳುವುದು ಸಾಧ್ಯವಿಲ್ಲ. ಈ ದೇಶದಲ್ಲಿ ಬುದ್ಧಿವಂತಿಕೆಯ ಗುತ್ತಿಗೆಯನ್ನು ಬ್ರಾಹ್ಮಣರು ಮಾತ್ರ ಪಡೆದಿದ್ದರಿಂದಲೇ ಈ ದೇಶಕ್ಕೆ ಮತ್ತು ಹಿಂದೂ ಧರ್ಮಕ್ಕೆ ಎಂತಹ ದುರ್ಗತಿ ಬಂದಿದೆ ಎಂಬ ವಿಚಾರವನ್ನೇ ಅರಿಯದಿರುವ ಇವರಿಗೆ ಪಾಠ ಕಲಿಸುವುದಾದರೂ ಹೇಗೆ?

ಪಾಠ ಕಲಿಯಲು ತಯಾರಿರುವ ವಿದ್ಯಾರ್ಥಿಗೆ ಪಾಠ ಕಲಿಸಬಹುದು. ಆದರೆ ಪಾಠ ಕಲಿಯಲು ತಯಾರಿಲ್ಲದವರಿಗೆ, ತಾವು ತಿಳಿದಿರುವುದೇ ಪರಮ ಸತ್ಯ, ಅದನ್ನು ಯಾರೂ ಯಾವ ಕಾಲಕ್ಕೂ, ಯಾವ ಕಾರಣಕ್ಕೂ ಪ್ರಶ್ನಿಸಬಾರದು ಎಂದು ತಿಳಿದಿರುವ ಅವಿವೇಕಿಗಳಿಗೆ, ಪಾಠ ಕಲಿಸಲು ಪ್ರಯತ್ನಿಸುವುದು ವ್ಯರ್ಥ ಕಾಲಹರಣ. ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಾವು ಯಾವುದೇ ಬೆಲೆಯನ್ನಾದರೂ ತೆತ್ತು ಉಳಿಸಿಕೊಳ್ಳಬೇಕು. ಪುಂಡಾಟಿಕೆಗೆ ಹೆದರಿ ಸುಮ್ಮನಿದ್ದರೆ, ನಮ್ಮ ಮುಂದಿನ ಪೀಳಿಗೆಯನ್ನು ಸ್ವತಃ ನಾವೇ ಕಗ್ಗತ್ತಲಿಗೆ ನೂಕಿದಂತಾಗುತ್ತದೆ.

ನಮ್ಮ ನಡುವಿನ 'ಚಾರ್ವಾಕ' ರಾಮದಾಸ್‌ರವರು ನಿಧನರಾಗಿರುವ ಈ ಸಂದರ್ಭದಲ್ಲಿಯೇ, ನಮ್ಮ ಕೋ-ಜಾ ಸರ್ಕಾರ ವಿಚಾರವಾದಿಗಳನ್ನೆಲ್ಲಾ 'ನಕ್ಸಲೈಟರ ಬೆಂಬಲಿಗರು' ಎಂದು ಪಟ್ಟಿ ಮಾಡಿ ಹೆದರಿಸುವ ದುಸ್ಸಾಹಸ ಕೈಗೊಂಡಿದೆ. ಮನವರಿಕೆ ಮಾಡಿಕೊಡಬೇಕಾಗಿರುವುದು ನಮ್ಮ ಇಂದಿನ ತುರ್ತು ಅಗತ್ಯವಾಗಿದೆ.. ಲಂಕೇಶ್, ತೇಜಸ್ವಿ ಮತ್ತು ರಾಮದಾಸ್‌ರವರು ಇಲ್ಲದಂತಹ ಈ ಸಂದರ್ಭದಲ್ಲಿ ನೀವು ಮತ್ತು ನಿಮ್ಮಂತಹ ವಿಚಾರವಂತರು ಕನ್ನಡಿಗರಿಗೆ ದಾರಿದೀಪವಾಗಬೇಕು.

-ಎಸ್.ಎಸ್. ವೆಂಕಟೇಶ್, ಬೆಂಗಳೂರು

ಕುಯುಕ್ತಿ ಅಥವಾ ಕೀಳುದರ್ಜೆಯ ತಂತ್ರಗಳಿಂದಾದರೂ ಸರಿ, ಕುರ್ಚಿಗಾಗಿ ಮುಗ್ಧ ಜನರ ಭಾವನೆಗಳೊಂದಿಗೆ ಚೆಲ್ಲಾಟ ಮಾಡುವ ಕೋಮುವಾದಿಗಳು ಈಗ ರಾಜ್ಯವನ್ನಾಳುವ ತರಾತುರಿಯಲ್ಲಿದ್ದಾರೆ. ರಾಮಭೂಮಿ, ಈದ್ಗಾ, ಬಾಬಾ ಬುಡನ್‌ಗಿರಿಯ ಹೆಸರಲ್ಲಿ ಜನರ ನೆಮ್ಮದಿ ಹಾಳು ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳುವಲ್ಲಿ ಯಶಸ್ವಿಯಾದ ಇಂತಹವರ ಮಗ್ಗುಲ ಮುಳ್ಳಾಗಿ ಸದಾ ಕಾಡುತ್ತಿರುವುದು 'ಲಂಕೇಶ್' ವಾರ ಪತ್ರಿಕೆ ಹಾಗು ಕೆಲ ಜನಪರ ಸಂಘಟನೆಗಳು. ಈ ಮುಳ್ಳನ್ನ ಚಿವುಟಲು ಹೊರಟಿರುವ ತಂತ್ರದ ಮೊದಲ ಹಂತವೇ ಈ ನಕ್ಸಲ್ ಪಟ್ಟಿ ಪ್ರಕರಣ.


ರಾಜ್ಯದ ಗೃಹ ಸಚಿವರಿಗೆ ತಿಳಿಯದೇ ಹೊರಬಂದ ಈ ಪಟ್ಟಿಯಲ್ಲಿ ಗೌರಿ ಲಂಕೇಶ್, ಅನಂತಮೂರ್ತಿಯವರಿಲ್ಲವೆಂದು ಕಾರ್ಕಳದ ಭಜರಂಗಿಗಳು ಗಂಟಲು ಹರಕೊಂಡಿವೆ. ನಕ್ಸಲ್‌ರ ಪರ/ವಿರೋಧ ಪ್ರಶ್ನೆ ಇಲ್ಲಿ ಅಪ್ರಸ್ತುತ. ಆದರೆ ಜನರು ಯಾಕೆ ನಕ್ಸಲರ ಪರವಾಗಿ ಮಾತಾಡುತ್ತಾರೆ? ಎಂಬುದನ್ನು ಈ ಪಟ್ಟಿಯ ಸೃಷ್ಟಿಕರ್ತರು ಅಭ್ಯಸಿಸುವುದೊಳ್ಳೆಯದು. "ಕಳ್ಳನಿಗೆ ಶಿಕ್ಷೆ ನೀಡುವುದಕ್ಕಿಂತ ಕಳ್ಳತನಕ್ಕೆ ಕಾರಣನಾದವನನ್ನು ಶಿಕ್ಷಿಸಿ" ಎಂದು ಇದ್ದುದನ್ನು ಇದ್ದಂತೆ ಹೇಳುವ ರಜನೀಶ್ ಮಾತು ಮೇಲಿನ ವಾದಕ್ಕೂ ಅನ್ವಯವಾಗುತ್ತದೆ.

ಸಮಾಜದಲ್ಲಿರುವ ಶೋಷಣೆ/ಭ್ರಷ್ಟಾಚಾರಕ್ಕೆ ಜನರು ರೋಸಿ ಹೋಗಿ ಈ ನಕ್ಸಲ್ ತತ್ವದತ್ತ ಮಾನಸಿಕವಾಗಿಯಾದರೂ ಒಲವನ್ನು ತೋರುತ್ತಾರೆ (ಮಾಜಿ ಮುಖ್ಯಮಂತ್ರಿ ಮೊಯ್ಲಿಯವರೇ ಒಮ್ಮೆ "ನಾನು ನಕ್ಸಲ್‌ನಾಗುವ ಸಾಧ್ಯತೆಯೂ ಇದ್ದಿತ್ತು" ಎಂಬಂತಹ ಮಾತನಾಡಿದ್ದರು). ಮೊದಲು ಇವಕ್ಕೆ ಕಾರಣವನ್ನು ಹುಡುಕಿ ಇಲಾಜು ಮಾಡಬೇಕೇ ವಿನಃ ಇಂತಹ ಪಟ್ಟಿಗಳನ್ನು ತಯಾರಿಸುವುದಿಲ್ಲ. ಅದಿರಲಿ, ತಮ್ಮ ಬಾಲಕ್ಕೆ ಕೊಳ್ಳಿ ಇಡುತ್ತಿದ್ದಾರೆ ಎಂಬ ಕಾರಣಕ್ಕೆ ಈ ನಕ್ಸಲರನ್ನು ವಿರೋಧಿಸುತ್ತಿರುವ ಬಿಜೆಪಿ ಪಕ್ಷದ ಯುವ ಮೋರ್ಚಾದ ನಾಯಕನೊಬ್ಬ ನಕ್ಸಲರನ್ನು ಮೀರಿಸುವ ಹಿಂಸಾವಾದಿ ಎಂಬುದು ಗಮನದಲ್ಲಿರಲಿ. ಭ್ರಷ್ಟಾಚಾರದ ವಿರುದ್ಧ ಸಿಡಿದಿದ್ದೇನೆಂಬ ಭ್ರಮೆಯಿಂದ ಸರ್ಕಾರದ ಸೇವೆಯಲ್ಲಿದ್ದರೂ ತನ್ನ ರಕ್ಷಣಾ ಕರ್ತವ್ಯವನ್ನು ಮರೆತು ಸ್ಫೋಟಿಸುವ ಉದ್ದೇಶಕ್ಕೆ ಶಾಸಕರ ಭವನಕ್ಕೆ ಬಾಂಬ್ ಇಟ್ಟ (ಉಂಡ ಮನೆಯ ಗಳ ಎಣಿಸುವ ಸಿದ್ಧಾಂತ). ಇಂತಹ ವ್ಯಕ್ತಿ ನಕ್ಸಲರ ಸಶಸ್ತ್ರ ಹೋರಾಟದ ಬಗ್ಗೆ ಮಾತನಾಡುವುದು ಎಷ್ಟು ಸರಿ?

ತಮಾಷೆಯೆಂದರೆ ಇತ್ತೀಚಿಗೆ ಶೃಂಗೇರಿಯಲ್ಲಿ ಈತ ನಕ್ಸಲ್ ವಾದವನ್ನು ಲೇವಡಿ ಮಾಡಿ ಮಾತಾಡಿ ತನ್ನ ನಾಯಕರ ಶಹಬಾಸ್‌ಗಿರಿಯ ಕನಸು ಕಂಡಿದ್ದ. ಬಹುಶಃ ಈ ಲೇವಡಿಯ ಉದ್ದೇಶ "ಮಕ್ಕಳೇ, ನನ್ನನ್ನು ನೋಡಿ ಕಲಿಯಿರಿ, ಬಾಂಬ್‌ಗಳನ್ನು ಸ್ಫೋಟಿಸಿ" ಆಗಿದ್ದಿರಬಹುದೇನೋ. ಇಂತಹವರುಗಳು ಗೌರಿ ಲಂಕೇಶ್, ಅನಂತಮೂರ್ತಿಯವರ ಹೆಸರು ಸೇರಿಸುವ ಬಗ್ಗೆ ಮಾತಾಡುವ ಹಾಗು ಶಾಮಣ್ಣ ಚಿನ್ನಿ, ನಗರಿ ಬಾಬಯ್ಯರಂತಹವರ ಸೇರ್ಪಡೆಯನ್ನು ಸಮರ್ಥಿಸುವ ಮೊದಲು ತಮ್ಮ ನಾಯಕ ಮಟ್ಟಣ್ಣನ ಹಿನ್ನೆಲೆಯನ್ನು ನೆನಪಿಸಿಕೊಳ್ಳುವುದೊಳ್ಳೆಯದು.

-ರವಿ ಪುತ್ತೂರ್, ದಕ್ಷಿಣ ಕನ್ನಡ

ಇಲ್ಲಿ ಮೂರು, ಅಲ್ಲಿ ನಾಲ್ಕು!




ಓಂಪ್ರಕಾಶ್ ರಾವ್ ಎಂಬ ನಿರ್ಮಾಪಕ ಕಂ ನಿರ್ದೇಶಕ ತುಂಬಾ ಾಗಾದುತ್ತಾ 'ಈಶ್ವರ್' ಚಿತ್ರವನ್ನು ಮುಗಿಸಿದ್ದಾರೆ. ಆದರೆ ಓಂಪ್ರಕಾಶ್ ತ್ಸಾಹಕ್ಕೆ ಏನೂ ಭಂಗವಾಗಿಲ್ಲ. 'ಈಶ್ವರ್' ತೆರೆಕಂಡ ನಂತರ ಅವರು ೂರು ಚಿತ್ರಗಳನ್ನು ಪ್ರಾರಂಭಿಸಲಿದ್ದಾರಂತೆ. ಮೊದಲನೆಯದು ದರ್ಶನ್ ಯಕನಾಗಿರುವ 'ಕೆಂಪೇಗೌಡ'. ಚಲಿಸುತ್ತಿರುವ ರೈಲು ಮತ್ತು ಐದು ಲಿಕಾಪ್ಟರ್‌ಗಳು ಈ ಚಿತ್ರದಲ್ಲಿ ಮುಖ್ಯ ಪಾತ್ರ ನಿರ್ವಹಿಸುತ್ತವೆಯಂತೆ.

ಎರಡನೆಯದು, 'ಒಳ್ಳೆಯ ಹುಡುಗ' ಎಂಬ ಸರಳ ಚಿತ್ರ. ಬಹುಶಃ ಈ ಚಿತ್ರದ ಯಕನಾಗಿ 'ಮುಂಗಾರು ಮಳೆ'ಯ ಗಣೇಶ್ ನಟಿಸಬಹುದು. ಮೂರನೆಯದು 'ಎಕೆ 97'. ದರಲ್ಲಿ 'ಎಕೆ 47' ಚಿತ್ರದಲ್ಲಿ ನಟಿಸಿದ್ದ ಶಿವರಾಜ್ ಕುಮಾರ್‌ರವರೇ ನಾಯಕರು. ಅಂದಹಾಗೆ ಇದರಲ್ಲಿ ಟಿಸಲು ಹಿಂದಿಯ ಡ್ಯಾನಿ ಮತ್ತು ಓಂಪುರಿ ಈಗಾಗಲೇ ಒಪ್ಪಿದ್ದಾರಂತೆ. ಹೀಗೆ ಮೂರು ಮೂರು ತ್ರಗಳನ್ನು ಒಮ್ಮೆಲೇ ಮಾಡುವುದರ ಬಗ್ಗೆ ತಲೆಕೆದರಿಸಿಕೊಂಡಿದ್ದಾರೆ ಓಂಪ್ರಕಾಶ್.

ಈ ಮಧ್ಯೆ ಸುಮಾರು ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಅವರೊಂದು 'ಪುಟ್ಟ' ಮನೆಯನ್ನು ಟ್ಟುತ್ತಿದ್ದಾರಂತೆ. ಈಗಾಗಲೇ ನಾಲ್ಕು ಬಾರಿ ಮದುವೆಯಾಗಿರುವ ಓಂಪ್ರಕಾಶರನ್ನು "ನಿಮ್ಮ ಹೊಸ ಮನೆಯಲ್ಲಿ ಷ್ಟು ಬೆಡ್ ರೂಂಗಳಿರುತ್ತವೆ" ಎಂದು ವ್ಯಂಗ್ಯವಾಗಿ ಪ್ರಶ್ನಿಸಿದರೆ ಅವರೂ ಅಷ್ಟೇ ವ್ಯಂಗ್ಯವಾಗಿ "ನಾಲ್ಕು" ಂದು ಉತ್ತರಿಸುತ್ತಾರೆ!


ತ್ರಿಕೆಗೆ ಇ-ಮೇಲ್ ಮೂಲಕ ಬಂದಿದ್ದ ತಮಾಷೆ ಚಿತ್ರಗಳ ಸರಣಿ ಇದು. ಇವತ್ತಿನ ೀರೋಗಳು ಮುದುಕರಾದಾಗ ಹೇಗಿರುತ್ತಾರೆ ಎಂಬ ಕಲ್ಪನೆ ಒಂದೆಡೆ. ಮತ್ತೊಂದೆಡೆ ಾಜಿ ತರುಣ ರಜನಿ ಮುಂದೆಂದೂ ಹೇಗಿರಬಹುದು ಎಂಬ ಇನ್ನೊಂದು ಕಲ್ಪನೆ!



ಇಂದು ಎಂದೆಂದೂ

ಗಂಟಲಿಗೂ ತೊಡಕಾದ ಮಂಡಿನೋವು

ರಾಜ್‌ಕುಮಾರ್‌ರವರು ತಮ್ಮ ಕೊನೆಯ ದಿನಗಳಲ್ಲಿ ಯಾಕೆ ಹಾಡುತ್ತಿರಲಿಲ್ಲ? ಆಗಲೂ ಅವರ ಕಂಠ ್ಾಗಿದ್ದರೂ ಅವರು ಹಾಡುವುದನ್ನು ಯಾಕೆ ನಿಲ್ಲಿಸಿದ್ದರು? ಇದು ಅವರ ಅಭಿಮಾನಿಗಳನ್ನು ಆಗಾಗ್ಗೆ ಕಾಡುವ ಪ್ರಶ್ನೆ.



ಅದಕ್ಕೀಗ ಉತ್ತರ ಸಿಕ್ಕಿದೆ. "ಅವರಿಗೆ ಮಂಡಿನೋವು ಆರಂಭವಾದ ಮೇಲೆ ಅವರು ಕುಳಿತುಕೊಂಡೇ ಹಾಡಲು ಅವಕಾಶ ಮಾಡಿಕೊಡಲಾಗಿತ್ತು, ಆದರೆ ಅದನ್ನು ರಾಜ್‌ಕುಮಾರ್ ನಯವಾಗಿ ನಿರಾಕರಿಸಿದ್ದರು. ಅದಕ್ಕೆ ಅವರು ನೀಡಿದ ಕಾರಣ 'ನನಗೆ ಕುಳಿತುಕೊಂಡು ಭಾವಪೂರ್ಣವಾಗಿ ಹಾಡಲು ಸಾಧ್ಯವಾಗುವುದಿಲ್ಲ, ಆದುದರಿಂದ ಎಲ್ಲಿಯತನಕ ನಾನು ನಿಂತುಕೊಂಡು ಹಾಡಲು ಸಾಧ್ಯವಿಲ್ಲವೋ ಅಲ್ಲೀತನಕ ಹಾಡುವುದಿಲ್ಲ' ಎಂದಿದ್ದರು. ಹೀಗಾಗಿ ಅವರ ಮಂಡಿನೋವು ಅವರ ನಟನೆಗೆ ಮಾತ್ರ ಕಡಿವಾಣ ಹಾಕಿರಲಿಲ್ಲ, ಅವರ ಗಾಯನಕ್ಕೂ ತಡೆಯೊಡ್ಡಿತ್ತು" ಎಂದು ಮೊನ್ನೆ ಪಾರ್ವತಮ್ಮ ರಾಜ್‌ಕುಮಾರ್‌ರವರೇ ತಿಳಿಸಿದರು.


ಈಗ ರಾಜ್‌ಕುಮಾರ್ ಹಾಡಬೇಕಿದ್ದ ಹಾಡುಗಳನ್ನು ರಾಘವೇಂದ್ರ ರಾಜ್‌ಕುಮಾರ್ ಹಾಡಬೇಕೆಂದು ಪಾರ್ವತಮ್ಮನವರು ಒತ್ತಾಯಿಸುತ್ತಿದ್ದಾರಂತೆ. ಆರಂಭದಿಂದಲೂ ರಾಘು ತಮ್ಮ ಚಿತ್ರಗಳಲ್ಲಿ ತಾವೇ ಹಾಡಿ ತಮಗೆ ಒಳ್ಳೆಯ ಕಂಠವಿದೆ ಎಂಬುದನ್ನು ತೋರಿಸಿದ್ದಾರೆ ಅಲ್ವಾ?

30 ಕೇಜಿ ಇಳಿಸಿದ ದರ್ಶನ್

ದರ್ಶನ್ ಈಗ ಹೊಸ ಗೆಟಪ್ಪಿನಲ್ಲಿ ಲಕಲಕನೆ ಹೊಳೆಯುತ್ತಿದ್ದಾರೆ. ಚಿಕ್ಕಿನ ಕಣ್ಣಿನ ಬಣ್ಣದ ಕಾಂಟ್ಯಾಕ್ಟ್ ಲೆನ್ಸ್, ಹೆಗಲ ತನಕ ದೋಣಿ ಥರ ಕೂದಲು ಬಿಟ್ಟಿರುವ ದರ್ಶನ್ ತಮ್ಮ ದೇಹದ ತೂಕದಲ್ಲಿ ಸರಾಸರಿ ಮೂವತ್ತು ಕೇಜಿಯಷ್ಟು ಇಳಿಸಿ ಈಗ ಸ್ಲಿಮ್ ಅಂಡ ಟ್ರಿಮ್ ಆಗಿದ್ದಾರೆ.

ಆನೆ ಮರಿಯಂತಿರುವ ಹಿಂದಿ ಗಾಯಕ ಅದ್ನಾನ್ ಸಾಮಿ ತನ್ನ ದೇಹ ತೂಕವನ್ನು ಇಳಿಸಿ ದೇಶದ ಪ್ರಮುಖ ಪತ್ರಿಕೆಗಳಲ್ಲಿ ಸುದ್ದಿ ಮಾಡಿದ್ದರೆ, ದರ್ಶನ್ ಗಾಂಧಿನಗರ ದಲ್ಲಿ ಕಂಪನವೆಬ್ಬಿಸಿದ್ದಾರೆ.

ದರ್ಶನ್‌ರವರ ದಿನಚರಿಯೂ ಈಗ ತುಂಬಾ ಬದಲಾಗಿದೆ. ಬೆಳಗಿನ ಜಾವ ಮೂರೂ ಮುಕ್ಕಾಲು ಗಂಟೆಗೇ ಏಳುವ ದರ್ಶನ್ ತಮ್ಮ ಪತ್ನಿ ಕೊಡುವ ಜ್ಯೂಸ್ ಕುಡಿದು ಮೋಟಾರ್ ಬೈಕನ್ನೇರಿ ಜಯನಗರದಲ್ಲಿರುವ ಜಿಮ್‌ಗೆ ಹೋಗುತ್ತಾರೆ. ಅಲ್ಲಿಂದ ಅವರು ವಾಪಸ್ಸು ಬರುವುದು ಆರೂವರೆಗೆ. ಮನೆಯಲ್ಲಿ ಸ್ನಾನ ಮಾಡಿದ ನಂತರ ಶೂಟಿಂಗ್ ಸ್ಪಾಟ್‌ಗೆ ದರ್ಶನ್ ಹಾಜರ್. ಅಲ್ಲೇ ತಿಂಡಿ. "ಈ ದಿನಚರಿಯೇ ನನ್ನ ತೂಕ ಇಳಿಸುವಿಕೆಗೆ ಮುಖ್ಯ ಕಾರಣ" ಎನ್ನುತ್ತಾರೆ ದರ್ಶನ್.



ಇತ್ತೀಚೆಗೆ ದರ್ಶನ್‌ಗೆ ಬಹಳಷ್ಟು ಸಂತೋಷ ನೀಡುತ್ತಿರುವುದು ಮೈಸೂರಿನಲ್ಲಿ ಅವರು ಹೊಸದಾಗಿ ಖರೀದಿಸಿರುವ ತೋಟ. ಆದರೆ ಅವರ ಈ ತೋಟ ಇತರೆ ತಾರೆಯರ ತೋಟಗಳಂತೆ ಮಾಮೂಲಿ ತೋಟವಾಗಿಲ್ಲ. ಮೊದಲಿನಿಂದಲೂ ಪ್ರಾಣಿಗಳನ್ನು ತುಂಬಾ ಪ್ರೀತಿಸುವ ದರ್ಶನ್ ತಮ್ಮ ತೋಟದಲ್ಲಿ ಹಲವಾರು ಪ್ರಾಣಿಗಳನ್ನು ಸಾಕಿದ್ದಾರೆ.

ಮೊದಮೊದಲು ಬೇರೆ ಬೇರೆ ದೇಶಗಳ ಪಕ್ಷಿಗಳನ್ನು ಖರೀದಿಸಿದ ದರ್ಶನ್ ಇತ್ತೀಚೆಗೆ ರಾಜಸ್ಥಾನದ ಮರುಭೂಮಿಯಿಂದ ಎರಡು ಒಂಟೆಗಳನ್ನು ಖರೀದಿಸಿದ್ದಾರೆ. ಈಗಾಗಲೇ ಅವರ ತೋಟದಲ್ಲಿ ಸಾಕಷ್ಟು ಕುದುರೆಗಳಿವೆಯಲ್ಲದೆ ಅಲ್ಲಿ ನವಿಲು, ಜಿಂಕೆಮರಿ, ಮೊಲ, ನಾಯಿಗಳಿಗೆ ಲೆಕ್ಕವೇ ಇಲ್ಲ.

ಗಾಂಧಿನಗರದಲ್ಲಿ ಪ್ರಾಣಿಗಳ ಬಗ್ಗೆ ಇಂತಹದ್ದೇ ಪ್ರೀತಿಯನ್ನು ಈ ಹಿಂದೆ ತೋರಿದ್ದವರಲ್ಲಿ ಎಂ.ಪಿ. ಶಂಕರ್ ಮತ್ತು ಅಂಬರೀಷ್ ಪ್ರಮುಖರು. ಅಂದಹಾಗೆ, ಇಲ್ಲೊಂದು ಕಾಕತಾಳೀಯ ಅಂಶವನ್ನು ಗಮನಿಸಿ: ಶಂಕರ್, ಅಂಬಿ ಮತ್ತು ದರ್ಶನ್, ಈ ಮೂವರೂ ಮೈಸೂರಿನವರೇ! ಆದರೆ ಈ ಮೂವರಲ್ಲಿ ಅಂಬರೀಷ್‌ಗೆ ಮಾತ್ರ ಇತರೆ ಪ್ರಾಣಿಗಳಿಗಿಂತ ಕುದುರೆಗಳ ಬಗ್ಗೆ ಮಾತ್ರ ಹೆಚ್ಚು ಒಲವು!

ಸ್ಯಾಂಡಲ್‌ವುಡ್ಡಿಗೆ ದರ್ಶನ್ ಎಂಟ್ರಿ ಪಡೆದು ಈಗ ಹಲವು ವರ್ಷಗಳಾಗಿ ವೆಯಲ್ಲದೆ ಇತ್ತೀಚೆಗೆ ಯುವ ನಟರ ಹೊಸ ದಂಡೇ ತಲೆಯೆತ್ತಿರುವುದರಿಂದ ದರ್ಶನ್ ಭವಿಷ್ಯ ಮಂಕಾಗಬಹುದೇ? ಈ ಪ್ರಶ್ನೆಯನ್ನು ಸ್ವತಃ ದರ್ಶನ್‌ರವರನ್ನು ಮೊನ್ನೆ ಕೇಳಿದಾಗ ಅವರು ನೀಡಿದ ಉತ್ತರ ಹೀಗಿತ್ತು: "ನನ್ನ ಅಪ್ಪ ತೂಗುದೀಪ ಶ್ರೀನಿವಾಸ್‌ರವರು ವಾಪಿಸಲು ಮೈಸೂರಿನಲ್ಲಿ ಒಂದು ಮನೆ ಬಿಟ್ಟರೆ ನಮಗೆ ಬೇರೇನೂ ಆಸ್ತಿ ಪಾಸ್ತಿ ಮಾಡಿಟ್ಟುಹೋಗಿಲ್ಲ, ಆದರೆ ಅವರ ಹೆಸರೇ ನಮಗೆ ಉದ್ಯಮದಲ್ಲಿ ಶ್ರೀರಕ್ಷೆಯಾಯಿತು. ಇವತ್ತು ನಾನು ಐವತ್ತು ವರ್ಷಗಳ ಕಾಲ ನೆಮ್ಮದಿಯಿಂದ ಕುಳಿತು ತಿನ್ನುವಷ್ಟು ಹಣ ಸಂಪಾದಿಸಿದ್ದೇನೆ. ಆದ್ದರಿಂದ ನನಗಾಗಲಿ, ನನ್ನ ಕುಟುಂಬಕ್ಕಾಗಲಿ ಯಾವುದೇ ತೊಂದರೆ ಇಲ್ಲ. ಇಷ್ಟಕ್ಕೂ ನಾನೂ ಕೂಡ ಉದ್ಯಮಕ್ಕೆ ಹೊಸದಾಗಿ ಬಂದಾಗ ಬೇರೆಯವರಿಗೆ ತೊಂದರೆ ಆಗಿರಲಿಲ್ಲ ತಾನೆ?"

ದರ್ಶನ್‌ರವರ ಒಂದು ವೈಶಿಷ್ಟ್ಯವೆಂದರೆ ಅವರು ತಮ್ಮ ನಟನಾ ವೃತ್ತಿಯನ್ನಾಗಲೀ, ಸಿನಿಮಾ ಬದುಕನ್ನಾಗಲೀ 'ಸಮಾಜ ಸೇವೆ', 'ಕಲಾ ಸೃಷ್ಟಿ' ಎಂದೆಲ್ಲ ಬಣ್ಣಿಸದೇ ಪ್ರಾಕ್ಟಿಕಲ್ ಆಗಿ ವರ್ತಿಸುವುದು. ಆರಂಭದಲ್ಲಿ 'ನಮ್ಮ ಪ್ರೀತಿಯ ರಾಮು' ಎಂಬ ಕಲಾತ್ಮಕ ಚಿತ್ರದಲ್ಲಿ ನಟಿಸಿ ಸೈ ಅನ್ನಿಸಿಕೊಂಡಿದ್ದರೂ ಆನಂತರ ಅವರು ಮಾರುಕಟ್ಟೆಯ ಅವಶ್ಯಕತೆಗೆ ಒಗ್ಗಿಕೊಂಡು ಲಾಂಗು, ಮಚ್ಚುಗಳನ್ನು ಹಿಡಿದು ಆರ್ಭಟಿಸಿದ್ದೇ ಹೆಚ್ಚು. ಆ ಮೂಲಕ ಅಪಾರ ಅಭಿಮಾನಿಗಳನ್ನು ಪಡೆದ ದರ್ಶನ್ ತಮ್ಮನ್ನು ಕೇವಲ ನಟನೆಗೆ ಸೀಮಿತಗೊಳಿಸಿಕೊಳ್ಳಲಿಲ್ಲ, ಬದಲಾಗಿ ತಮ್ಮ ಸಹೋದರ ದಿನಕರ್‌ನನ್ನೂ ನಿರ್ದೇಶಕನನ್ನಾಗಿಸಿದರು, ತಾವೇ ಸಿನಿಮಾ ನಿರ್ಮಾಣಕ್ಕೆ ಇಳಿದು 'ಜೊತೆಜೊತೆಯಲಿ' ಎಂಬ ಹಿಟ್ ಸಿನಿಮಾ ನೀಡಿದರು.

ಹೀಗೆ ಚಿತ್ರರಂಗದಲ್ಲಿ ಒಂದೊಂದೇ ಹೊಸ ಹೆಜ್ಜೆ ಇಡುತ್ತಿರುವ ದರ್ಶನ್ ಈಗ ತಾವೇ ನಟಿಸಿರುವ 'ಸ್ನೇಹಾನಾ ಪ್ರೀತೀನಾ' ಚಿತ್ರವನ್ನೂ ತೆಗೆದು ಬಿಡುಗಡೆಗಾಗಿ ಕಾಯುತ್ತಿದ್ದಾರೆ. ಈ ಮಧ್ಯೆ 'ಇಂದ್ರ' ಎಂಬ ಹೊಸ ಚಿತ್ರದಲ್ಲಿ ಪ್ರಥಮ ಬಾರಿಗೆ ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳಲು ರೆಡಿಯಾಗಿದ್ದಾರೆ.

ಆದರೆ ದರ್ಶನ್ ಮುಂದೆ ಸದ್ಯ ಇರುವ ಸವಾಲೆಂದರೆ: ಹಳಬರ ಭದ್ರಕೋಟೆಯನ್ನು ಬೇಧಿಸಿದ್ದಲ್ಲದೇ ಈಗ ಯುವ ನಾಯಕ ನಟರ ಪ್ರವಾಹದ ಎದುರು ಬಂಡೆ ಕಲ್ಲಿನಂತೆ ನಿಲ್ಲಬೇಕಿರುವುದು. ಇದರ ಬಗ್ಗೆ ಅವರನ್ನು ಪ್ರಶ್ನಿಸಿದರೆ "ಅದೆಲ್ಲ ನನಗೇನೂ ಗೊತ್ತಿಲ್ಲ, ಆದರೆ ನನ್ನ ಅಭಿಮಾನಿಗಳಿಗೆ ನಿರಾಶೆಮಾಡದಂತಹ ಚಿತ್ರಗಳಲ್ಲಿ ನಟಿಸುತ್ತಾ ಹೋಗುತ್ತೇನೆ" ಎಂದು ಉತ್ತರಿಸುತ್ತಾರೆ.

–ಶೆಣೈ



ಜಯಮಾಲಾ ಈಗ ರಾಣಿ ಅಬ್ಬಕ್ಕ ದೇವಿ

ಶಬರಿಮಲೈ ವಿವಾದದ ನಂತರ ಜಯಮಾಲಾ ಈಗ ಉತ್ಸಾಹದಿಂದ ಹೊಸ ಚಿತ್ರ ನಿರ್ಮಾಣಕ್ಕೆ ಇಳಿದಿದ್ದಾರೆ. ಅವರ ಜೀವನದ ಮಹಾತ್ವಾಕಾಂಕ್ಷೆಯ 'ರಾಣಿ ಅಬ್ಬಕ್ಕ ದೇವಿ' ಚಿತ್ರ ಸದ್ಯದಲ್ಲೇ ಸೆಟ್ಟೇರುವುದು ಬಹುತೇಕ ಖಚಿತವಾಗಿದೆ. ಈ ಚಿತ್ರವನ್ನು ಕನ್ನಡ ಮತ್ತು ತುಳು ಹೀಗೆ ಎರಡೂ ಭಾಷೆಗಳಲ್ಲಿ ಏಕಕಾಲದಲ್ಲಿ ನಿರ್ಮಿಸುವ ಯೋಜನೆ ಅವರದ್ದು. ಇದಕ್ಕೆ ಸಂಬಂಧಪಟ್ಟಂತೆ ಆಕೆ ದಕ್ಷಿಣ ಕನ್ನಡ ಮತ್ತು ಕಾಸರಗೋಡು ಸುತ್ತಮುತ್ತಲಿನ ದೇವಸ್ಥಾನಗಳಿಗೆ ಹೋಗಿ ಪೂಜೆ ಮಾಡಿಕೊಂಡು ಬರುತ್ತಿದ್ದಾರೆ. (ಈ ಬಾರಿ ಅವರು ಯಾವುದೇ ದೇವರ ವಿಗ್ರಹವನ್ನು ಸ್ಪರ್ಶಿಸಿಲ್ಲ ಎಂಬುದನ್ನು ಭಕ್ತಾದಿಗಳು ಅರಿತುಕೊಳ್ಳಬೇಕು!)


ಪೋರ್ಚುಗೀಸರ ವಿರುದ್ಧ ಹೋರಾಡಿದ ರಾಣಿ ಅಬ್ಬಕ್ಕ ದೇವಿಯ ಕತೆ ಕಿತ್ತೂರು ಚೆನ್ನಮ್ಮ ಮತ್ತು ಒನಕೆ ಓಬವ್ವರ ಕತೆಗಿಂತ ರೋಮಾಂಚನಕಾರಿಯಾಗಿದೆ. ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಇಂತಹ ಕತೆಯನ್ನು ಕೈಗೆತ್ತಿಕೊಂಡ ಜಯಮಾಲಾ ಧೈರ್ಯವನ್ನು ಮೆಚ್ಚೋಣ.

ಬಿಂದಾಸ್ ಪುನೀತ್

ಪುನೀತ್ ರಾಜ್‌ಕುಮಾರ್ ಅಭಿನಯದ ಹೊಸ ಚಿತ್ರವೊಂದು ಮೊನ್ನೆ ಸದ್ದು ಗದ್ದಲವಿಲ್ಲದೇ ಆರಂಭವಾಯಿತು. ಈ ಚಿತ್ರದ ಹೆಸರು 'ಬಿಂದಾಸ್'. ಇದನ್ನು ನಿರ್ದೇಶಿಸುತ್ತಿರುವವರು ಒಂದು ಕಾಲದಲ್ಲಿ ಕಣ್ಣೀರ ಚಿತ್ರಗಳ ಸರದಾರ ಎಂದೆನಿಸಿಕೊಂಡಿದ್ದ ಡಿ. ರಾಜೇಂದ್ರ ಬಾಬು.

ಈ ತನಕ ಯುವ ನಿರ್ದೇಶಕರೊಂದಿಗೇ ಕೆಲಸ ಮಾಡಿರುವ ಪುನೀತ್ ಮೊದಲನೆ ಬಾರಿಗೆ ಡಿ. ಬಾಬುರಂತಹ ಹಿರಿಯ ನಿರ್ದೇಶಕರ ಅಡಿ ನಟಿಸಲಿದ್ದಾರೆ. ಅಂದಹಾಗೆ, ಪುನೀತ್ ಕಾಲ್‌ಶೀಟ್‌ಗಾಗಿ ಅನಾದಿ ಕಾಲದಿಂದಲೂ ಪ್ರಯತ್ನಿಸಿದವರು ರಾಜೇಂದ್ರ ಸಿಂಗ್‌ಬಾಬು. ಆದರೆ ಕೊನೆಗೂ ಅದು ದಕ್ಕಿದ್ದು ಡಿ. ಬಾಬುಗೆ.

ಮತ್ತೊಬ್ಬ ಬಾಬು — ದಿನೇಶ್ ಬಾಬು- ಜೊತೆ ಪುನೀತ್ ಈಗಾಗಲೇ ಕಾರ್ಯನಿರ್ವಹಿಸಿರುವುದರಿಂದ ಮುಂದೊಂದು ದಿನ ರಾಜೇಂದ್ರ ಸಿಂಗ್ ಬಾಬುಗೂ ಅವರ ಕಾಲ್ ಶೀಟ್ ಸಿಕ್ಕರೆ ಬಾಬುಗಳ ಸರಣಿ ಸಂಪೂರ್ಣಗೊಳ್ಳುತ್ತದೆ!





ಜಯಶ್ರೀದೇವಿಯ 'ದೇವಿ' ಕತೆ

ಮೊನ್ನೆ ಮೊನ್ನೆ ನಿರ್ಮಾಪಕಿ ಜಯಶ್ರೀದೇವಿಯವರು ಕಾಣಿಸಿಕೊಂಡರು. ಈ ದೇವಿ ಗಾಂಧಿನಗರಕ್ಕೆ ಕಾಲಿಟ್ಟರೆ ಎಲ್ಲರೂ ಗಡಗಡನೆ ನಡುಗುತ್ತಾರೆ. ಯಾಕೆಂದರೆ, ದಿಢೀರನೆ ನಾಲ್ಕೈದು ಚಿತ್ರಗಳನ್ನು ಒಮ್ಮೆಲೇ ಆರಂಭಿಸಿ ಎಲ್ಲರನ್ನೂ ಚಿತ್ ಮಾಡುವುದು ಅವರ ಹವ್ಯಾಸ. ಆದರೆ ಈ ಬಾರಿ ಅವರು ಮಾಡಿದ್ದೇ ಬೇರೆ.

ಅನೇಕ ವರ್ಷಗಳ ಹಿಂದೆ ಆರಂಭಿಸಿದ್ದ 'ನವಶಕ್ತಿ ವೈಭವ' ಎಂಬ ಚಿತ್ರವನ್ನು ಸಂಪೂರ್ಣಗೊಳಿಸಲು ಈಗ ಜಯಶ್ರೀದೇವಿ ಹೆಣಗುತ್ತಿದ್ದಾರೆ. ಮೊನ್ನೆ ಜಯಮಾಲಾ ಮತ್ತು ಸುಧಾರಾಣಿ ಅಭಿನಯದ ಕೆಲವು ದೃಶ್ಯಗಳನ್ನು ಚಿತ್ರೀಕರಿಸಿರುವ ಅವರು ಇನ್ನೂ ಕೆಲವು 'ದೇವಿ'ಯರ ಕಾಲ್‌ಶೀಟ್‌ಗಾಗಿ ಕಾಯುತ್ತಿದ್ದಾರೆ.

ಅಂತೂಇಂತೂ ಕಂತುಗಳಲ್ಲಿ ಚಿತ್ರವೊಂದನ್ನು ಪೂರೈಸುವ ಮಟ್ಟಕ್ಕೆ ಜಯಶ್ರೀದೇವಿ ತಲುಪಿದ್ದಾರೆ. ಒಂದು ಕಾಲದಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಚಿತ್ರಗಳನ್ನು ತೆಗೆಯುತ್ತಿದ್ದ ನಿರ್ಮಾಪಕಿಯೊಬ್ಬರು ಈ ಹಂತ ತಲುಪಿರುವುದು ಚಿತ್ರರಂಗದ ದುರಂತಗಳಲ್ಲಿ ಒಂದು.



ಗೂಳಿ V/s ಇಂದ್ರ

ಈಗ ಸ್ನೇಹಿತರಾಗಿರುವ ಸುದೀಪ್ ಮತ್ತು ದರ್ಶನ್ ನಡುವೆ ಹಿಂದಿನ ತರಹದ ಪೈಪೋಟಿ ಇಲ್ಲ, ಆದರೂ ಅವರಿಬ್ಬರ ಚಿತ್ರಗಳ ಮಧ್ಯೆ ಸದ್ಯದಲ್ಲೇ ನೇರಾನೇರಾ ಯುದ್ಧ ನಡೆಯುವ ಸಂಭವವಿದೆ.

ಮೊನ್ನೆ ಸುದೀಪ್ ಅಭಿನಯದ 'ಗೂಳಿ' ಮತ್ತು ದರ್ಶನ್ ಅಭಿನಯದ 'ಇಂದ್ರ' ಚಿತ್ರಗಳು ಆರಂಭವಾಗಿವೆ. ಒಂದೆಡೆ 'ಇಂದ್ರ'ದಲ್ಲಿ ಮೊದಲ ಬಾರಿಗೆ ದರ್ಶನ್ ದ್ವಿಪಾತ್ರದಲ್ಲಿ ನಟಿಸಲಿದ್ದು ಆ ಚಿತ್ರದ ಹಾಡುಗಳಿಗಾಗಿ ಕೆನಡಾಕ್ಕೆ ಹಾರಿಹೋಗಲಿದ್ದಾರೆ. ಇನ್ನೊಂದೆಡೆ ಸುದೀಪ್ 'ಗೂಳಿ' ಚಿತ್ರವನ್ನು ನಿರ್ಮಿಸುತ್ತಿರುವ ರಾಮು ಈ ಬಾರಿ ಗೆಲ್ಲಲೇಬೇಕು ಎಂದು ಎಲ್ಲ ತಂತ್ರಗಳನ್ನು ಬಳಸಲು ಸಿದ್ಧರಾಗಿದ್ದಾರೆ.

ಇವೆರಡೂ ಚಿತ್ರಗಳು ಒಟ್ಟೊಟ್ಟಿಗೇ ಆರಂಭವಾಗಿ ಒಟ್ಟೊಟ್ಟಿಗೇ ಬಿಡುಗಡೆಯಾಗುವ ಸೂಚನೆಗಳು ಕಾಣಿಸುತ್ತಿವೆ. ಅಲ್ಲಿಗೆ ಸುದೀಪ್ ಮತ್ತು ದರ್ಶನ್ ನಡುವೆ ಮತ್ತೊಂದು ಗೂಳಿ ಕಾಳಗ ಆರಂಭವಾದಂತೆ.



ಪ್ರಕಾಶ್ ರೈ ಜಾಗಕ್ಕೆ ದುನಿಯಾ ವಿಜಯ್

'ಗೆಳೆಯ' ಚಿತ್ರದಲ್ಲಿ ಅತಿಥಿ ನಟನಾಗಿ ಪ್ರಕಾಶ್ ರೈ ನಟಿಸಲಿದ್ದಾರೆ ಎಂದು ನಿರ್ದೇಶಕ ಹರ್ಷ ಆರಂಭದಲ್ಲೇ ಹೇಳಿದ್ದರು. ಆದರೆ ಯಾಕೋ ಏನೋ ಪ್ರಕಾಶ್ ರೈ ಕಾಲ್‌ಶೀಟ್ 'ಗೆಳೆಯ' ಹರ್ಷನಿಗೆ ಸಿಕ್ಕಿಲ್ಲ. ಈಗ ರೈ ಸ್ಥಾನವನ್ನು 'ದುನಿಯಾ' ಖ್ಯಾತಿಯ ವಿಜಯ್ ತುಂಬಿದ್ದಾರೆ. ಈ ಅತಿಥಿ ಪಾತ್ರಕ್ಕಾಗಿ ವಿಜಯ್ ಪಾಕೆಟ್‌ಗಿಳಿಸಿದ ಸಂಭಾವನೆ ಕೇವಲ ಹನ್ನೆರಡು ಲಕ್ಷ ರೂಪಾಯಿಗಳು.

ಹೇಗಿದೆ ವಿಜಯ್‌ನ ದುನಿಯಾ?



ಐಟಂ ಬೆಡಗಿಯರ ಭರಾಟೆ

ರಾಖಿ ಸಾವಂತ್ ಎಂಬ ಐಟಂ ಸಾಂಗ್ ಬೆಡಗಿಯು ನೃತ್ಯ ಮಾಡಿದ್ದಕ್ಕಿಂತ ಇತರೆ ವಿವಾದಗಳ ಮೂಲಕ ಸುದ್ದಿ ಮಾಡಿದ್ದೇ ಹೆಚ್ಚು. ಅಂತಹ ರಾಖಿ ಸಾವಂತ್ ಈಗ ಗಾಂಧಿನಗರದಲ್ಲೂ ಸುದ್ದಿ ಮಾಡಿದ್ದಾಳೆ. ಈಕೆಯನ್ನು ಕನ್ನಡಕ್ಕೆ ಕರೆತಂದವರು 'ಗೆಳೆಯ' ಚಿತ್ರದ ನಿರ್ದೇಶಕ ಹರ್ಷ. 'ಸ್ಟೂಡೆಂಟ್' ಚಿತ್ರಕ್ಕೇ ಈಕೆಯನ್ನು ಕರೆತರಬೇಕೆಂದು ಅದರ ನಿರ್ಮಾಪಕ ಭಗೀರಥ ಪ್ರಯತ್ನ ಮಾಡಿದ್ದರೂ ಆ 'ಸೌಭಾಗ್ಯ' ಈಗ 'ಗೆಳೆಯ'ನದ್ದಾಗಿದೆ.

ಇಲ್ಲಿಗೆ ಬಂದು ಮೂರು ದಿನಗಳ ಕಾಲ ಕುಣಿದದ್ದಕ್ಕೆ ಈಕೆಗೆ ಹನ್ನೆರಡು ಲಕ್ಷ ರೂಪಾಯಿಗಳ ಸಂಭಾವನೆಯನ್ನು ಸುರಿದಿದ್ದಾರೆ. ಮೊನ್ನೆ ಮೊನ್ನೆ 'ಒರಟ ಐ ಲವ್ ಯೂ' ಚಿತ್ರಕ್ಕಾಗಿ ಮುಂಬೈನಿಂದ ಮತ್ತೋರ್ವ ದುಬಾರಿ ಐಟಂ ಗರ್ಲ್ ಮುಮೈತ್ ಖಾನ್ ಬಂದುಹೋಗಿದ್ದಳು. 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರಕ್ಕಾಗಿ ಮಲ್ಲಿಕಾ ಶೆರಾವತ್‌ಳನ್ನು ಇಪ್ಪತ್ತೈದು ಲಕ್ಷ ಕೊಟ್ಟು ನಿರ್ದೇಶಕ ಪ್ರೇಂ ಕರೆತರುವ ಮೂಲಕ ಈ ಐಟಂ ಗರ್ಲ್‌ಗಳ ಭರಾಟೆಯನ್ನು ಪ್ರಾರಂಭಿಸಿದ್ದರು.

ದಷ್ಟಪುಷ್ಟ ಮಾಂಸಖಂಡ ಹೊಂದಿರುವ ರಾಖಿ ಸಾವಂತ್ ಅಂತಹ ಸುಂದರಿಯೇನಲ್ಲ, ಈಕೆಗೆ ಮಲ್ಲಿಕಾಳಂತೆ ಬಳುಕುವ ಮೈಮಾಟವೂ ಇಲ್ಲ, ಒಳ್ಳೆಯ ನಟಿಯಂತೂ ಅಲ್ಲವೇ ಅಲ್ಲ, ಇಂಥವರಿಗೆ ಹನ್ನೆರಡು ಲಕ್ಷ ಸುರಿದು ರತ್ನಗಂಬಳಿ ಹಾಸಿ ಕುಣಿಸುವ ಈ ಜನರ ಬಗ್ಗೆ ಏನು ಹೇಳುವುದು?



ಹಾಲಿವುಡ್‌ನಿಂದ ಬಂದ ಡಾ. ಸತ್ಯ



ರಮೇಶ್ ನಿರ್ದೇಶನದ 'ಸತ್ಯವಾನ್ ಸಾವಿತ್ರಿ' ತೆರೆ ಕಂಡಿದೆ. ಇದು ಹಾಲಿವುಡ್ 'Cactus flower' ಎಂಬ ಇಂಗ್ಲಿಷ್ ಚಿತ್ರದ ಕನ್ನಡೀಕರಣ ಅನ್ನಬಹುದು. ಆದ ಇಂಗ್ಲಿಷ್ ಚಿತ್ರದಲ್ಲಿ ನಾಯಕಿಯದ್ದೇ ಪ್ರಧಾನ ಪಾತ್ರವಾದರೆ, ಇಲ್ಲಿ ನಿರ್ದೇಶ ರಮೇಶ್ ತಮ್ಮ ಸುತ್ತಲೇ ಚಿತ್ರಕತೆಯನ್ನು ಹೆಣೆದಿದ್ದಾರೆ. ಅಷ್ಟೇ ಅಲ್ಲ, 9 ನಿಮಿಷದ ಇಂಗ್ಲಿಷ್ ಸಿನಿಮಾವನ್ನು ಎರಡೂವರೆ ಗಂಟೆಗಳ ಕನ್ನ ಸಿನಿಮಾ ಆಗಿ ಪರಿವರ್ತಿಸಲು ಸಾಕಷ್ಟು ಹೊಸ ಪಾತ್ರಗಳನ ಸೃಷ್ಟಿಸಿದ್ದಾರೆ. ಅಂದಹಾಗೆ ಒಂದು ಖ್ಯಾತ ಇಂಗ್ಲಿಷ್ ಹಾಡನ ಭಟ್ಟಿ ಇಳಿಸಿದ್ದಾರೆ.

ಆದರೆ ರಮೇಶ್ ನಿರ್ದೇಶನದ 'ರಾಮ, ಶಾ ಭಾಮ' ಚಿತ್ರದಂತೆ ಇಲ್ಲೂ ನವಿರಾದ ಹಾಸ್ಯ ಚಿತ್ರದ ಹೈಲೈಟ್. ಕುಟುಂಬ ಸಮೇತರಾ ಚಿತ್ರವನ್ನು ನೋಡಲು ಯಾವುದ ಮುಜುಗರವಿಲ್ಲ, ಚಿತ್ರದ ಪಂಚ್ ಸಂಭಾಷಣೆಯನ್ನು ಬರೆದ ಕಾರಂತರಿಗೆ ಪೂ ಮಾರ್ಕ್ಸ್ ನೀಡಬಹುದು. ನಟನೆಯಲ್ಲಂತ ನಾಯಕಿಯರಾದ ಜೆನ್ನಿಫರ್ ಮತ್ತು ದ ಬೋಪಣ್ಣ ಒಬ್ಬರನ್ನೊಬ್ಬರು ಮುಗಿಸಿ ವಂತೆ ನಟಿಸಿದ್ದಾರೆ. ಅಂತೂ ರಮೇಶ್ ತ ನಿರ್ದೇಶನದ ದ್ವಿತೀಯ ಚಿತ್ರದಲ್ಲೂ ಕಾ ಕೊಟ್ಟು ಬಂದ ಪ್ರೇಕ್ಷಕರನ್ನು ಹೊಟ್ಟೆ ತುಂ ನಗಿಸುವಲ್ಲಿ ಯಶಸ್ವಿಯಾಗಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore